ಶ್ರೀ ಶ್ರೀಗುರು–ಗೌರಂಗೌ ಜಯತಃ

ಶ್ರೀಮಾಧವ–ತಿಥಿ

[ಶ್ರೀಏಕಾದಶಿಯ ಶಾಸ್ತ್ರೀಯ ಹಾಗೂ ವೈಜ್ಞಾನಿಕ ಮಹತ್ವಗಳು]

ಹರಿಕಥೆ ಹಾಗೂ ಪ್ರೇರಣಾ ಸ್ತ್ರೋತ

ನಿತ್ಯಲೀಲಾ ಪ್ರವಿಷ್ಟ ಓಂ ವಿಷ್ಣುಪಾದ ಪರಮಹಂಸಸ್ವಾಮಿ

ಶ್ರೀಶ್ರೀಮದ್ಭಕ್ತಿಪ್ರಜ್ಞಾನಕೇಶವ ಗೋಸ್ವಾಮಿ ಮಹಾರಾಜರ

ಅನುಗೃಹೀತ

ತ್ರಿದಂಡಿಸ್ವಾಮಿ

ಶ್ರೀಶ್ರೀಮದ್ಭಕ್ತಿ ವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರು

ಶ್ರೀ ಭಕ್ತಿಪ್ರಜ್ಞಾನ
ಗೌಡೀಯ ವೇದಾಂತ
ವಿದ್ಯಾಪೀಠ ಪ್ರಕಾಶನ,
ಬೆಂಗಳೂರು

‘ಶ್ರೀಮಾಧವ ತಿಥಿ’
ಪ್ರಕಾಶಕರು: ತ್ರಿದಂಡಿಸ್ವಾಮಿ ಭಕ್ತಿವೇದಾಂತ ದಂಡೀ ಮಹಾರಾಜರು
ಪ್ರಥಮ ಕನ್ನಡ ಸಂಸ್ಕರಣ– ಶ್ರೀ ಕೃಷ್ಣ ಜನ್ಮಾಷ್ಟಮಿ–2017

ಪುಸ್ತಕ ದೊರೆಯುವ ಸ್ಥಳ:
ಶ್ರೀರಂಗನಾಥ ಗೌಡೀಯ ಮಠ, ಹೆಸರಘಟ್ಟ, ಬೆಂಗಳೂರು– 560088.
ದೂರವಾಣಿ– +91 8095240387, 9379447895.

ಶ್ರೀ ವಿನೋದ ಬಿಹಾರಿ ಗೌಡೀಯ ಮಠ, ನಂ–33, 22ನೇ ಮುಖ್ಯರಸ್ತೆ,
ಗಾರ್ಡನ್ ಲೇಔಟ್ ಸೆಕ್ಟರ್–2, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು – 560102.
ದೂರವಾಣಿ– +91 9663811431.

ಶ್ರೀ ಮಧನ ಮೋಹನ ಗೌಡೀಯ ಮಠ, ನಂ–245/1, 29ನೇ ಅಡ್ಡರಸ್ತೆ, ಕಗ್ಗದಾಸಪುರ,
ಬಾಲಾಜಿ ಲೇಔಟ್, ಬೆಂಗಳೂರು – 560093. ದೂರವಾಣಿ– +91 93414 84903.

ಸಲಹೆ ಮತ್ತು ಪ್ರೇರಣೆ: ತ್ರಿದಂಡಿಸ್ವಾಮಿ ಭಕ್ತಿವೇದಾಂತ ದಂಡೀ ಮಹಾರಾಜರು
ಅನುವಾದ: ಶ್ರೀನಿವಾಸ್
ಪ್ರೂಫಿಂಗ್ ಮತ್ತು ಸಲಹೆ: ಶ್ರೀ ಲಲಿತ ಮಾಧವ ದಾಸರು

ಮುದ್ರಣ: **ಓ.ಎಸ್. ಪ್ರಿಂಟ್ಸ್,**
ರಾಜಾಜಿನಗರ, ಬೆಂಗಳೂರು.
ಮೊ.: 98453 20921

ಶ್ರೀ ಶ್ರೀಮದ್‌ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರ ಕನ್ನಡ ಅನುವಾದಿತ ಪುಸ್ತಕಗಳು
ಜೈವಧರ್ಮ ; ಮಾಧುರ್ಯಕಾದಂಬಿನೀ ; ಸಾಮರಸ್ಯ ; ಪ್ರೀತಿಯ ಮಾರ್ಗ ;
ಶ್ರೀಚೈತನ್ಯ ಮಹಾಪ್ರಭುಗಳು ಸ್ವಯಂ ಭಗವಂತನೆಂಬ ಶಾಸ್ತ್ರೀಯ ಪಮಾಣ ; ಶಿವ ತತ್ವ ;
ಶ್ರೀಮದ್ಭಗವದ್ಗೀತಾ ಸಾರ ; ಭಕ್ತಿತತ್ವ ವಿವೇಕ ; ಆತ್ಮದ ಸುಪ್ತ ರಹಸ್ಯ ; ವೈಷ್ಣವ ಸಿದ್ಧಾಂತ ಮಾಲ, ಮತ್ತು ಇತ್ಯಾದಿ

English books by ŚRĪLA BHAKTIVEDĀNTA NĀRĀYAṆA MAHĀRĀJA
The Nectar of Govinda-līlā; Going Beyond Vaikuṇṭha; Bhakti-rasāyana;
Śrī Śikṣāṣṭaka; Veṇu-gīta; Śrī Prabandhāvalī; Śrī Bhakti-rasāmṛta-sindhu-bindu
Śrī Manaḥ-śikṣā; Bhakti-tattva-viveka; Pinnacle of Devotion; Śrī Upadeśāmṛta
Arcana-dīpikā; The Essence of All Advice; Śrī Gauḍīya Gīti-guccha;
Śrīmad Bhagavad-gītā;
Śrīmad Bhakti Prajñāna Keśava Gosvāmī – His Life and Teachings;
Five Essential Essays; Śrī Harināma Mahā-mantra; Secret Truths of the Bhāgavata
Jaiva-dharma; Śrī Vraja-maṇḍala Parikramā; The Origin of Ratha-yātrā;
Śrī Brahma-saṁhitā; Śrī Bhajana-rahasya; The Way of Love;
Secrets of the Undiscovered Self; Śiva-tattva; Śrī Navadvīp-dhāma;
Rays of the Harmonist (periodical);

For further information, please visit www.purebhakti.com

ಪೀಠಿಕೆ

ಇಂದಿನ ವಿಜ್ಞಾನಿಗಳು ಹೇಳುವಂತೆ ನಮ್ಮ ಈ ದೇಹವು ಒಂದು ಯಂತ್ರವಿದ್ದಂತೆ (Machine), ಏಷ್ಟೋ ಕೋಟಿ–ಕೋಟಿ ಜೀವಾಣುಗಳು ಕೂಡಿ ನಮ್ಮ ದೇಹವಾಗಿರುತ್ತದೆ. ಆ ಎಲ್ಲಾ ಜೀವಾಣುಗಳು ಒಂದು ಯಂತ್ರದಂತೆ ತಮ್ಮ ತಮ್ಮ ಕೆಲಸವನ್ನು ಪ್ರತಿನಿತ್ಯ ಮಾಡುತ್ತಿರುತ್ತವೆ. ಆದರೂ ನಮಗೆ ಇದರ ಬಗ್ಗೆ ಯಾವುದೇ ಅರಿವು ಇರುವುದಿಲ್ಲ. ಇವುಗಳನ್ನೆಲ್ಲ ಏಕೀಕರಿಸಿ ಕೆಲಸಮಾಡುವಂತೆ ಮಾಡುವವನು ಒಬ್ಬ ಇದ್ದಾನೆ ಈ ದೇಹವು ಅವನ ನಿಯಮದಂತೆ ನಡೆಯುತ್ತದೆ. ಅವನೇ ಭಗವಂತ. ಈ ಎಲ್ಲವನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ಸಹಜವಾಗಿ ಅರ್ಥವಾಗುವುದೇನೆಂದರೆ ಈ ದೇಹ ನಮ್ಮದಲ್ಲ ಎಂಬ ಸತ್ಯ. ನಮ್ಮ ಪ್ರಾಣದಲ್ಲಿ ಅಥವಾ ಜೀವದಲ್ಲಿ ನಮಗೆ ಅಧಿಕಾರವಿಲ್ಲ, ಈಗಿನ ಪ್ರಜಾಪ್ರಭುತ್ವವೂ ಸಹ ಇದನ್ನು ಒಪ್ಪಿಕೊಳ್ಳುತ್ತದೆ. ನಾವು ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು, ಹಾಗೆ ನಾವು ಮಾಡಿದರೆ ಅದು ಸರ್ಕಾರದ ನಿಯಮದ ಪ್ರಕಾರ ಅಪರಾಧ, ನಾವು ಆತ್ಮಹತ್ಯೆಗೆ ಯತ್ನಿಸಿದರೆ ಸರ್ಕಾರವು ನಮ್ಮನ್ನು ದಂಡಿಸುತ್ತದೆ. ಇದರಿಂದ ತಿಳಿಯುವುದೇನೆಂದರೆ ನಮ್ಮ ದೇಹದಲ್ಲಿ ನಮಗೆ ಅಧಿಕಾರವಿಲ್ಲ. ಆದ್ದರಿಂದ ನಮಗೆ ಮನಬಂದಂತೆ ಜೀವನ ಮಾಡುವುದೂ ಸಹ ಅಧಿಕಾರವಿಲ್ಲ, ಭಗವಂತ ನೀಡಿರುವಂತಹ ಮಾರ್ಗದರ್ಶನದಲ್ಲಿ ನಡೆಯಬೇಕು. ನಮ್ಮ ಒಳಿತಿಗಾಗಿಯೇ ಕೆಲವು ವ್ರತಗಳು ಮತ್ತು ನಿಯಮಗಳನ್ನು ತಿಳಿಸಿಕೊಟ್ಟಿದ್ದಾರೆ. ಅದರಲ್ಲಿ ಏಕಾದಶಿಯು ಅತ್ಯಂತ ಮುಖ್ಯವಾದದ್ದು.

ಉದಾಹರಣೆಗೆ ನಾವು ನಮ್ಮ ಸ್ನೇಹಿತರಿಗೆ ಓದಲು ಒಂದು ಪುಸ್ತಕವನ್ನು ಕೊಟ್ಟಿರುತ್ತೇವೆ ಅವರು ಅದನ್ನು ಜೋಪಾನವಾಗಿ ನಾವು ಅದನ್ನು ಕೊಡುವಾಗ ಹೇಗಿತ್ತೋ ಹಾಗೆ ಹಿಂದಿರುಗಿಸಬೇಕು, ಆದರೆ ಇದಕ್ಕೆ ವಿರುದ್ಧವಾಗಿ ಅವರು ಹರಿದ ಅಥವಾ ಕೊಳೆಯಾದ ಸ್ಥಿತಿಯಲ್ಲಿ ನೀಡಿದರೆ ನಮಗೆ ಕೋಪಬರುವುದುಂಟು. ಇದೇರೀತಿ ಭಗವಂತ ನಮಗೆ ಈ ದೇಹವನ್ನು ಕೊಟ್ಟಿದ್ದಾನೆ ಈ ದೇಹವು ಭಗವಂತನ ವಸ್ತು, ಅದನ್ನು ಸರಿಯಾಗಿ ನೋಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಈ ದೇಹವಿರುವುದು ಸಾಧನೆಗಾಗಿ, ಭೋಗಕ್ಕಾಗಿ ಅಲ್ಲ. ಈ ಸಾಧನದೇಹದಲ್ಲಿದ್ದು ನಾವು ಭಗವಂತನನ್ನು ಹೊಂದಲು ಪ್ರಯತ್ನಿಸಬೇಕು. ಆ ಪ್ರಯತ್ನಗಳಲ್ಲಿ ಏಕಾದಶಿಯ ವ್ರತದ ಆಚರಣೆಯು ಮುಖ್ಯವಾದದ್ದು. ಹಿಂದೆ ಹೇಳಿದಹಾಗೆ ಈ ದೇಹಕ್ಕೆ ಹದಿನೈದು ದಿನಗಳಿಗೊಮ್ಮೆ ಬರುವ ಏಕಾದಶಿಯಂದು ಉಪವಾಸವನ್ನು ಮಾಡಬೇಕು. ನಾವು ಪ್ರತಿದಿನ ಬಳಸುವ ವಾಹನಕ್ಕೆ ಅಥವಾ ಯಂತ್ರಗಳಿಗೆ ತಿಂಗಳಿಗೊಮ್ಮೆ Service ಮಾಡಿಸುವಂತೆ, ನಮ್ಮ ದೇಹಕ್ಕೆ Service ಏಕಾದಶಿ ವ್ರತದ ಆಚರಣೆ.

ದಿನಾ ನಾವು ಅನ್ನವನ್ನು ಬೇಯಿಸುತ್ತೇವೆ, ಅನ್ನ ಮುಗಿದಮೇಲೆ ಅನ್ನದ ಪಾತ್ರೆಯನ್ನು ಸ್ವಚ್ಛವಾಗಿ ತೊಳೆಯುತ್ತೇವೆ. ಮತ್ತೆ ಮರುದಿನ ಆ ಸ್ವಚ್ಛವಾದ ಪಾತ್ರೆಯಲ್ಲಿ

ಅನ್ನವನ್ನು ಬೇಯಿಸುತ್ತೇವೆ ಹಾಗೂ ಪಾತ್ರೆಯಲ್ಲಿ ಅನ್ನ ಮುಗಿದಮೇಲೆ ಪಾತ್ರೆಯನ್ನು ತೊಳೆಯುತ್ತೇವೆ. ಒಂದುವೇಳೆ ನಾವು ಆ ಪಾತ್ರೆಯನ್ನು ತೊಳೆಯದೆ ಅಥವಾ ಸ್ವಚ್ಛಮಾಡದೆ ಅನ್ನವನ್ನು ಬೇಯಿಸಿದರೆ ಆಗ ಪಾತ್ರೆಯಲ್ಲಿ ಮಾಡಿದಂತಹ ಅನ್ನವು ಕೆಲವೆ ಗಂಟೆಗಳಲ್ಲಿ ಕೆಡುತ್ತದೆ ಹಾಗೂ ಕೆಟ್ಟವಾಸನೆ ಬರತೊಡಗುತ್ತದೆ. ಹೀಗೆ ನಾವು ಅದೇ ಪಾತ್ರೆಯನ್ನು ತೊಳೆಯದೆ ಹಾಗೆ ಪ್ರತೀ ದಿನ ಅಡುಗೆಯನ್ನು ಮಾಡುತ್ತಿದ್ದರೆ ಆ ಪಾತ್ರೆಯಲ್ಲಿ ಮಾಡಿದಂತಹ ಅಡುಗೆಯೆಲ್ಲವು ಕೆಟ್ಟ ಆಹಾರವೆ ಆಗುತ್ತದೆ, ಹೀಗೆ ಆ ಪಾತ್ರೆಯಿಂದ ಕೆಟ್ಟವಾಸನೆಯುಂಟಾಗಿ ಆ ಪಾತ್ರೆಯನೆ ಬಿಸಾಡುವಂತೆ ಆಗುತ್ತದೆ. ಹೀಗಾಗಿ ಪ್ರತಿದಿನ ಅನ್ನ ಬೇಯಿಸಿದಂತಹ ಪಾತ್ರೆಯನ್ನು ತೊಳೆಯಬೇಕು ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಹೀಗೆ ನಮ್ಮ ದೇಹವೂ ಸಹ ಒಂದು ಪಾತ್ರೆಯಿದ್ದಹಾಗೆ ಅದನ್ನು ಸಹ ನಾವು ಸ್ವಚ್ಛಗೊಳಿಸಬೇಕು, ಏಕಾದಶಿ ಎಂಬ ಶುಭ್ರವಾದ ನೀರಿನಿಂದ ಅದನ್ನು ಶುದ್ಧಿಗೊಳಿಸಬೇಕು.

ನಮ್ಮ ಈ ದೇಹವನ್ನು ಒಂದು ಕಂಪ್ಯೂಟರ್‌ಗೆ ಹೋಲಿಸೋಣ, ಒಂದು ಕಂಪ್ಯೂಟರ್ ಕೆಲಸಮಾಡಲು ಎರಡು ಮುಖ್ಯವಾದ ವಸ್ತುಗಳು ಅಗತ್ಯ, ಒಂದು Hardware ಮತ್ತೊಂದು Software. Hardware ಎಂದರೆ ಅದು ಯಾಂತ್ರಿಕ ವಸ್ತು, Software ಎಂದರೆ ಈ ಯಾಂತ್ರಿಕ ವಸ್ತುವನ್ನು ನಡೆಸುವಂತಹ ಮತ್ತು ನಿಯಂತ್ರಿಸುವಂತಹ ಯಂತ್ರಾಂಶ. ಇದೇ ರೀತಿ ನಮ್ಮ ದೇಹವೂ ಸಹ Hardware ಮತ್ತು Software ಎಂದು ಎರಡು ವಿಭಾಗಗಳಾಗಿವೆ. ಸ್ಥೂಲ ದೇಹ ಮತ್ತು ಸೂಕ್ಷ್ಮ ದೇಹ ಎಂದು. ಸ್ಥೂಲ ದೇಹವು ಪಂಚ ಭೂತಗಳು ಅಂದರೆ ಗಾಳಿ, ನೀರು, ಬೆಂಕಿ, ಭೂಮಿ ಮತ್ತು ಆಕಾಶ ಈ ಐದು ಅಂಶಗಳು ಸೇರಿ ಆದ್ದಂತಹ ನಮ್ಮ ಕಣ್ಣಿಗೆ ಕಾಣುವಂತಹ ಶರೀರ, ಇದೇ Hardware. ಸೂಕ್ಷ್ಮ ದೇಹ ಎಂದರೆ ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ ಎಂಬ ನಾಲ್ಕು ಅಂಶಗಳು ಸೇರಿ ಆದಂತಹ, ಕಣ್ಣಿಗೆ ಕಾಣದಂತಹ ಶರೀರ, ಇದೇ Software. ಇದರಲ್ಲಿ ಮತ್ತೊಂದು ಮುಖ್ಯವಾದ ಅಂಶ ಅಗತ್ಯ, ಅದೇ ಚೇತನ, ಅಂದರೆ ಜೀವಿ, ಪ್ರಾಣ ಮತ್ತು ಪರಮಾತ್ಮ. ಈ ಚೇತನ ವಸ್ತುವನ್ನು ನಾವು ಇಲ್ಲಿ ವಿದ್ಯುತ್ ಶಕ್ತಿ (Electric current) ಎಂದು ಭಾವಿಸೋಣ.

ನಾವು ಕಂಪ್ಯೂಟರ್ ಬಳಸುತ್ತಿರುತ್ತೇವೆ, ಅದು ಒಮ್ಮೆ ಏನಾದರು ರಿಪೇರಿಯಾದರೆ ಅದನ್ನು Service centre ಗೆ ತೆಗೆದುಕೊಂಡು ಹೋಗುತ್ತೇವೆ. ಆಗ ಅಲ್ಲಿರುವ Service Engineer ನಮಗೆ ಕಂಪ್ಯೂಟರ್ ರಿಪೇರಿಯ ಕಾರಣಗಳನ್ನು ತಿಳಿಸುತ್ತಾನೆ ಮತ್ತು ಅದನ್ನು ಸರಿಯಾಗಿ ಬಳಸುವ ವಿಧಾನವನ್ನು ತಿಳಿಸುತ್ತಾನೆ. ಕಂಪ್ಯೂಟರ್ ಉಪಯೋಗಿಸಿದ ನಂತರ ಅದನ್ನು ತಪ್ಪದೆ Shut-down ಮಾಡಬೇಕು ಮತ್ತು ತಿಂಗಳಿಗೊಮ್ಮೆ vaccum cleaner ಮೂಲಕ ಸ್ವಚ್ಛ ಮಾಡಬೇಕು. ಇದು Hardware maintenance. ಕಂಪ್ಯೂಟರ್ ಚಲಿಸುತ್ತಿರುವಾಗ ಕಂಪ್ಯೂಟರ್ Softwareಗೆ virus attack ಆಗುತ್ತದೆ. ಅದನ್ನು ತಡೆಯಲು anti-virus ಹಾಕಿರಬೇಕು. ವಾರ ಅಥವಾ ಎರಡು ವಾರಕ್ಕೊಮ್ಮೆ ತಪ್ಪದೆ anti-virus ನ ಮೂಲಕ ಸಂಪೂರ್ಣ ಕಂಪ್ಯೂಟರ್ scan ಮಾಡಬೇಕು.

ಇದೇ ರೀತಿ ನಮ್ಮ ದೇಹದ Hardware ಮತ್ತು Softwareನ maintenance ಮಾಡಬೇಕು. ಇಲ್ಲಿ Hardware maintenance ಅಂದರೆ ಸ್ನಾನ, ಸಾತ್ವಿಕ ಆಹಾರ ಸೇವನೆ ಮತ್ತು ಏಕಾದಶಿ ಮುಂತಾದ ವ್ರತಗಳನ್ನು ಆಚರಿಸುವುದು. ಏಕಾದಶಿಯಂದು ದೇಹ ಶುದ್ಧಿಗಾಗಿ ಉಪವಾಸವನ್ನು ಆಚರಿಸಬೇಕು. Software maintenance ಅಂದರೆ ಪ್ರತಿನಿತ್ಯ ನಮ್ಮ ಮನಸ್ಸನ್ನು ಕೆಡಿಸುವಂತಹ ಆಲೋಚನೆಗಳೆಂಬ virus ಅನ್ನು ತಡೆಯಲು ಹರಿನಾಮ ಸಂಕೀರ್ತನೆ ಮತ್ತು ಜಪವೆಂಬ ಶಕ್ತಿಯುತವಾದ anti-virus ಅನ್ನು ನಮ್ಮ ಜೀವನದಲ್ಲಿ install ಮಾಡಿಸಿರಬೇಕು. ಇದನ್ನು ನಮ್ಮಲ್ಲಿ install ಮಾಡುವ Service Engineerರೇ ಶ್ರೀಗುರುಗಳು. ಪ್ರತಿನಿತ್ಯ ಈ ನಾಮ ಜಪವೆಂಬ anti-virus run mode ನಲ್ಲಿ ಇರಲೇ ಬೇಕು. ೧೫ ದಿನಕ್ಕೊಮ್ಮೆಬರುವ ಏಕಾದಶಿಯಂದು ಹರಿನಾಮ ಜಪವೆಂಬ ಈ anti-virusನ ಮೂಲಕ scan ಮಾಡಬೇಕು. ಹರಿನಾಮ ಸ್ಮರಣೆಯ ಮಹತ್ವವನ್ನು ಕುರಿತು 'ಜೈವಧರ್ಮ' ಎಂಬ ಗ್ರಂಥದಲ್ಲಿ ಬಹಳ ಮಹೋನ್ನತ ವಿಚಾರಗಳನ್ನು ಕಾಣಬಹುದು.

ಜಡ ಜಗತ್ತಿನಲ್ಲಿ ಮಹಾ ಸೌಭಾಗ್ಯಶಾಲಿ ಪುರುಷನ ನಾಲಿಗೆಯ ಮೇಲೆ ಹರಿನಾಮಗಳು ಭಕ್ತಿಯ ಮೂಲಕ ಆಕರ್ಷಿಸಲ್ಪಟ್ಟು ನೃತ್ಯಮಾಡುವುವು. ನಾಮದ ಜೊತೆ ಮಾಯಿಕ ಜಗತ್ತಿಗೆ ಸ್ವಲ್ಪವೂ ಸಂಬಂಧವಿರುವುದಿಲ್ಲ. ನಾಮದಲ್ಲಿ ಸ್ವಭಾವತಃ ಭಗವತ್ ಸ್ವರೂಪದ ಎಲ್ಲಾ ಶಕ್ತಿಗಳು ನೆಲಸಿರುತ್ತದೆ. ಆದ್ದರಿಂದ ನಾಮವೂ ಸಹ ಸರ್ವಶಕ್ತಿ ಸಂಪನ್ನ. ಅದು ಮಾಯಾಜಗತ್ತಿನಲ್ಲಿ ಅವತರಿಸಿ ಮಾಯೆಯನ್ನು ಧ್ವಂಸ ಮಾಡುವುದರಲ್ಲಿ ಪ್ರವೃತ್ತವಾಗುವುವು. ಈ ಮಾಯಾ ಸಂಸಾರದಲ್ಲಿ ಹರಿನಾಮವಲ್ಲದೇ ಜೀವಿಗಳಿಗೆ ಬೇರಾವ ಬಂಧುವೂ ಇಲ್ಲ. ಬೃಹನ್ನಾರದೀಯ ಪುರಾಣದಲ್ಲಿ ಹರಿನಾಮವನ್ನೇ ಏಕಮಾತ್ರ ಗತಿಯೆಂದು ಹೇಳಲಾಗಿದೆ –

ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಮ್ ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥

– (ಬೃ. ಪುರಾಣ – ೩೮/೧೨೬)

(ಸತ್ಯಯುಗದಲ್ಲಿ ಧ್ಯಾನ, ತ್ರೇತಾಯುಗದಲ್ಲಿ ಯಜ್ಞ, ದ್ವಾಪರದಲ್ಲಿ ಅರ್ಚನೆಗಳಿಗೆ ಪ್ರಾಧಾನ್ಯತೆ ಇರುವುದು. ಆದರೆ ಕಲಿಯುಗದಲ್ಲಿ ಹರಿನಾಮವೇ ನನ್ನ ಜೀವನ, ಹರಿನಾಮವೇ ನನ್ನ ಜೀವನವಾಗಿದೆ. ಕಲಿಯುಗದಲ್ಲಿ ನಾಮವನ್ನು ಬಿಟ್ಟು ಜೀವಿಗೆ ಬೇರಾವ ಗತಿಯಿಲ್ಲ, ಬೇರೆ ಗತಿಯಿಲ್ಲ, ಬೇರೆ ಗತಿಯೇ ಇಲ್ಲ. ಇದನ್ನು ಮೂರು ಬಾರಿ ನುಡಿಯುವ ಮೂಲಕ ಕಲಿಯುಗದಲ್ಲಿ ಬೇರೆ ಸಾಧನೆಗಳ ನಿರರ್ಥಕತೆಯನ್ನು ತೋರಿಸಲಾಗಿದೆ).

ನಾಮಕ್ಕೆ ಅನಂತ ಶಕ್ತಿಗಳಿವೆ ಪಾತಕಗಳನ್ನು ಧ್ವಂಸ ಮಾಡುವುದರಲ್ಲಿ ಹರಿನಾಮಕ್ಕೆ ಅತ್ಯದ್ಭುತ ಶಕ್ತಿಯಿದೆ. ಹರಿನಾಮವು ಕ್ಷಣಮಾತ್ರದಲ್ಲಿ ಸಮಸ್ತ ಪಾತಕಗಳನ್ನು ಸುಟ್ಟುಬಿಡುತ್ತದೆ.

ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।
ಪುಮಾನ್ ವಿಮುಚ್ಯತೆ ಸದ್ಯಃ ಸಿಂಹತ್ರಸ್ತೈರ್ಮೃಗೈರಿವ ॥

(ಗರುಡ ಪುರಾಣ ೧/೨೩೨/೧೨)

(ಯಾವ ವ್ಯಕ್ತಿಯು ಅರಿವಿಲ್ಲದೆಯೇ ಶ್ರೀನಾರಾಯಣನ ಕೀರ್ತನೆ ಮಾಡುವನೋ, ಅವನು ತತ್‌ಕ್ಷಣ ಎಲ್ಲಾ ವಿಧವಾದ ಪಾಪಗಳಿಂದ ಬಿಡುಗಡೆ ಪಡೆಯುವನು. ಹರಿನಾಮ ಕೀರ್ತನೆ ಮಾಡುವುದರಿಂದ ಪಾಪಿ ವ್ಯಕ್ತಿಯು, ಮೃಗವೊಂದು ಹೇಗೆ ಭಯಾನಕ ಸಿಂಹದ ಕೈನಿಂದ ಬಿಡುಗಡೆ ಪಡೆಯುವುದೋ, ಹಾಗೆಯೇ ಪಾಪದ ಕೈಗಳಿಂದ ಬಿಡುಗಡೆ ಪಡೆಯುವನು).

ನಾಮಾಶ್ರಿತ ವ್ಯಕ್ತಿಯ ಎಲ್ಲ ದುಃಖಗಳೂ ಶ್ರೀನಾಮದ ಮೂಲಕ ದೂರವಾಗುವುವು. ನಾಮದಿಂದ ಸರ್ವಪ್ರಕಾರದ ರೋಗಗಳೂ ಸಹ ದೂರವಾಗುವುವು.–

ಆಧಯೋ ವ್ಯಾಧಯೋ ಯಸ್ಯ ಸ್ಮರಣಾನ್ನಾಮಕೀರ್ತನಾತ್ ।
ತದೈವ ವಿಲಯಂ ಯಾಂತಿ ತಮನಂತಂ ನಮಾಮ್ಯಹಮ್ ॥

– (ಸ್ಕಂದ–ಪುರಾಣ)

(ಯಾರ ನಾಮ ಸ್ಮರಣೆ ಮತ್ತು ಕೀರ್ತನೆಯಿಂದ ಎಲ್ಲಾ ವಿಧವಾದ ಆದಿ–ವ್ಯಾಧಿಗಳು ಸಂಪೂರ್ಣವಾಗಿ ದೂರವಾಗುವುವೋ, ಅಂತಹ ಅನಂತದೇವನಿಗೆ ನಾನು ನಮಸ್ಕಾರ ಮಾಡುವೆನು).

ಹರಿನಾಮ ಜಪಮಾಡುವವನು ತನ್ನ ಕುಲ, ಸಮಾಜ ಮತ್ತು ಪೃಥ್ವಿಯನ್ನು ಪವಿತ್ರ ಮಾಡುವನು.

ಮಹಾಪಾತಕ ಯುಕ್ತೋಪಿ ಕೀರ್ತಯನ್ನನಿಶಂ ಹರಿಮ್ ।
ಶುದ್ಧಾಂತಃಕರಣೋ ಭೂತ್ವಾ ಜಾಯತೇ ಪಂಕ್ತಿಪಾವನಃ ॥

– (ಬ್ರಹ್ಮಾಂಡ ಪುರಾಣ)

(ಮಹಾಪಾಪಿಯೂ ಸಹ ನಿರಂತರವಾಗಿ ಹರಿನಾಮ ಜಪಮಾಡಿದರೆ, ಅವನ ಅಂತಃಕರಣ ಶುದ್ಧವಾಗುವುದು ಮತ್ತು ಅವನು ಪಂಕ್ತಿ–ಪಾವನನಾಗುವನು, ಅರ್ಥಾತ್ ಅವನು ದ್ವಿಜತ್ವವನ್ನು, ಪಡೆದುಕೊಂಡು ಪೃಥ್ವಿಯನ್ನು ಪವಿತ್ರ ಮಾಡುವನು)

ನಾಮ ಪಾರಾಯಣ ಮಾಡುವ ವ್ಯಕ್ತಿಯ ಎಲ್ಲಾ ದುಃಖಗಳು, ಎಲ್ಲಾ ಉಪದ್ರವಗಳೂ ಎಲ್ಲಾ ರೀತಿಯ ರೋಗಾದಿಗಳು ಶಾಂತವಾಗುವುವು–

ಸರ್ವರೋಗೋಪಶಮಂ ಸರ್ವೋಪದ್ರವನಾಶಾನಮ್ ।
ಶಾಂತಿದಂ ಸರ್ವಾರಿಷ್ಟಾನಾಂ ಹರೇರ್ನಾಮಾನುರ್ಕೀರ್ತನಮ್ ॥

– (ಬೃಹದ್ವಿಷ್ಣು ಪುರಾಣ)

(ಶ್ರೀಹರಿನಾಮದ ಕೀರ್ತನೆಯನ್ನು ಮಾಡುವುದರಿಂದ ಎಲ್ಲ ವಿಧವಾದ ರೋಗಗಳು ದೂರವಾಗುತ್ತವೆ. ಎಲ್ಲತರಹದ ಉಪದ್ರವಗಳು ಶಾಂತವಾಗುವುವು. ಎಲ್ಲ ಪ್ರಕಾರದ ವಿಘ್ನಗಳೂ ನಷ್ಟವಾಗುವುವು ಮತ್ತು ಪರಾಶಾಂತಿ ಪ್ರಾಪ್ತವಾಗುವುದು.

ಹರಿನಾಮೋಚ್ಚಾರಣೆಯಿಂದ ಪ್ರಾರಬ್ಧ ಕರ್ಮವೂ ನಷ್ಟವಾಗುವುದು–


ಯಾನ್ನಾಮಧೇಯಂ ಮ್ರಿಯಮಾಣ ಆತುರಃ ಪತನ್
ಸ್ಖಲನ್ ವಾ ವಿವಶೋ ಗೃಣನ್ ಪುಮಾನ್ ।
ವಿಮುಕ್ತಕರ್ಮಾರ್ಗಲ ಉತ್ತಮಾ ಗತಿಂ ಪ್ರಾಪ್ನೋತಿ
ಯಕ್ಷ್ಯಂತಿ ನ ತಂ ಕಲೌ ಜನಾ: ॥

–(ಶ್ರೀಮದ್ಭಾ, ೧೨/೨/೪೪)

(ಮನುಷ್ಯನು ಮರಣಹೊಂದುವ ಸಮಯ ಆತುರತೆಯ ಸ್ಥಿತಿಯಲ್ಲಿ ಅಥವಾ ಬೀಳುವ ಅಥವಾ ಜಾರಿಬೀಳುವ ಸಮಯದಲ್ಲಿ ವಿವಶನಾಗಿಯೂ ಭಗವಂತನ ಯಾವುದಾದರೊಂದು ನಾಮದ ಉಚ್ಚಾರಣೆ ಮಾಡಿದರೆ, ಅವನ ಎಲ್ಲಾ ಕರ್ಮ ಬಂಧಗಳೂ ಛಿನ್ನ–ಭಿನ್ನವಾಗುವುವು ಮತ್ತು ಅವನಿಗೆ ಉತ್ತಮೋತ್ತಮವಾದ ಗತಿ ಪ್ರಾಪ್ತವಾಗುವುದು. ಆದರೆ ಅಯ್ಯೋ ಕಲಿಯುಗ ! ಕಲಿಯುಗದಿಂದ ಪ್ರಭಾವಿತರಾದ ಜನರು, ಆ ಭಗವನ್ನಾಮದ ಆರಾಧನೆಯಿಂದಲೂ ವಿಮುಖರಾಗುವರು).

ವಿಷಯಸೂಚೀ

ವಿಶ್ವ ಪ್ರಸಿದ್ಧ ಜಗದ್‌ಗುರು ಯುಗಾಚಾರ್ಯ ನಿತ್ಯಲೀಲಾ ಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀ ಶ್ರೀಮದ್ ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರು



ನೀವು ಒಬ್ಬ ರಸಿಕ ಆಚಾರ್ಯರು. ನೀವು ನಿಮ್ಮ ಆರಕ್ಷಕ ವಿಭಾಗದ ಉತ್ತಮ ದರ್ಜೆಯ ನೌಕರಿಯನ್ನು ತ್ಯಾಗಮಾಡಿ ಸಂಪೂರ್ಣ ವೈರಾಗ್ಯದೊಂದಿಗೆ ಯುವಾವಸ್ತೆಯಲ್ಲೇ ಭಗವದ್-ಭಜನೆಯನ್ನು ಆರಂಭಿಸಿದಿರಿ. ನೀವು ಭಗವಾನ್ ಶ್ರೀಕೃಷ್ಣನ ನಿತ್ಯ ಸೇವಕರು. ನೀವು ಈ ಜಗತ್ತಿನಲ್ಲಿ ಕೇವಲ ಶುದ್ಧ-ಭಕ್ತಿಯನ್ನು ಪ್ರಚಾರ ಮಾಡಲೆಂದು ಅವತರಿಸಿದಿರಿ. ನೀವು ಸಮಸ್ತ ವಿಶ್ವವನ್ನು ನಲವತ್ತು ಬಾರಿ ಪ್ರದಕ್ಷಿಣೆಯನ್ನು ಮಾಡಿ ಪೃಥ್ವಿಯ ಮೂಲೆ ಮೂಲೆಯಲ್ಲೂ ಶ್ರೀ ಚೈತನ್ಯ ಮಹಾಪ್ರಭುಗಳ ವಾಣಿಯ ಪ್ರಚಾರವನ್ನು ಮಾಡಿರುವಿರಿ. ನೀವು ಗೋಸ್ವಾಮಿ-ವರ್ಗ ಮತ್ತು ಪ್ರಾಚೀನ ಆಚಾರ್ಯರುಗಳ ಅಮೂಲ್ಯ ಗ್ರಂಥಗಳನ್ನು ಹಿಂದಿ ಭಾಷೆಯಲ್ಲಿ ಪ್ರಕಾಶಿತಗಳಿಸಿ ಎಲ್ಲ ಭಕ್ತರಿಗೆ ಪರಮ ಉಪಕಾರವನ್ನು ಮಾಡಿರುವಿರಿ. ನಿಮ್ಮ ಎಲ್ಲ ಗ್ರಂಥಗಳ ಅನುವಾದವನ್ನು ಈಗ ಆಂಗ್ಲ, ರೂಸೀ, ಜರ್ಮನ್, ಚೈನೀಸ್, ಕನ್ನಡ, ತೆಲುಗು, ತಮಿಳು, ಮರಾಠೀ ಮುಂತಾದ ದೇಶ-ವಿದೇಶಗಳ ಭಾಷೆಗಳಲ್ಲಿ ಮಾಡಲಾಗುತ್ತಿದೆ. ನೀವು ವಿಶ್ವ ಪ್ರಸಿದ್ಧ ಜಗದ್ಗುರು ನಿತ್ಯಲೀಲ ಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀ ಶ್ರೀಮದ್ ಭಕ್ತಿವೇದಾಂತ ಸ್ವಾಮೀ ಮಹಾರಾಜರನ್ನು ಕ್ರಿ.ಶ. 1947ನೇ ಇಸ್ವಿ ಇಂದ ಬಹಳಷ್ಟು ಸೇವೆಯನ್ನು ಮಾಡಿರುವಿರಿ. ಅವರು ನಿಮಗೆ ವಿದೇಶದಿಂದ ೩೦೦ರಕ್ಕು ಅಧಿಕ ಪತ್ರಗಳನ್ನು ಬರೆದಿದ್ದಾರೆ ಮತ್ತು ನಿಮ್ಮ ಸೇವಾ-ವೃತ್ತಿಯನ್ನು ಬಹಳ ಪ್ರಶಂಸೆ ಮಾಡಿದ್ದಾರೆ. ನೀವೆ ನಿಮ್ಮ ಹಸ್ತ ಕಮಲಗಳಿಂದ ಅವರಿಗೆ ಸಮಾಧಿ ಪ್ರಧಾನ ಮಾಡಿರುವಿರಿ.

ನಿತ್ಯಲೀಲಾ ಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀ ಶ್ರೀಮದ್ ಭಕ್ತಿವೇದಾಂತ ವಾಮನ ಗೋಸ್ವಾಮಿ ಮಹಾರಾಜರು



ನೀವು ಪರಮಾರಾಧ್ಯತಮ ಜಗದ್ಗುರು ಓಂ ವಿಷ್ಣುಪಾದ ಅಷ್ಟೋತ್ತರಶತ–ಶ್ರೀಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ 'ಪ್ರಭುಪಾದ' ರಿಂದ ಹರಿನಾಮ ಮತ್ತು ಪರಮ ಗುರುದೇವ ಪರಮಾರಾಧ್ಯತಮ ಜಗದ್ಗುರು ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀಶ್ರೀಲ ಭಕ್ತಿಪ್ರಜ್ಞಾನ ಕೇಶವ ಗೋಸ್ವಾಮಿ ಮಹಾರಾಜರಿಂದ ಬ್ರಾಹ್ಮಣ–ದೀಕ್ಷೆ ಹಾಗೂ ಸಂನ್ಯಾಸವನ್ನು ಪ್ರಾಪ್ತಿಸಿಕೊಂಡಿರಿ. ಸನ್ಯಾಸಕ್ಕು ಮೊದಲು ನೀವು ಶ್ರೀ ಸಜ್ಜನ ಸೇವಕ ಬ್ರಹ್ಮಚಾರಿ ಎಂಬ ಹೆಸರಿನಿಂದ ವಿಖ್ಯಾತರಾಗಿದ್ದಿರಿ. ಒಮ್ಮೆ ನಿಮ್ಮ ಶರೀರ ೧೦೪ ಡಿಗ್ರಿ ತಾಪ ಜ್ವರದಿಂದ ಸುಡುತ್ತಿತ್ತು. ಶ್ರೀಲ ಪರಮ–ಗುರುದೇವರು ನಿಮಗೆ ವೈಷ್ಣವರಿಗಾಗಿ ರಸೋಯಿ ತಿನಿಸನ್ನು ಮಾಡಲು ಆಜ್ಞೆ ನೀಡಿದ್ದರು. ನೀವು ಅದೇ ಸ್ಥಿತಿಯಲ್ಲಿ ಎದ್ದು ರಸೋಯಿ ತಿನಿಸನ್ನು ಮಾಡಿದಿರಿ ಮತ್ತು ಠಾಕುರ್‌ಜೀಗೆ ಭೋಗವನ್ನು ಅರ್ಪಿಸಿದಿರಿ, ಎಲ್ಲ ವೈಷ್ಣವರ ಪ್ರಸಾದ ಸೇವೆಯನ್ನು ಮಾಡಿದಿರಿ. ನಿಮ್ಮ ಗುರು ನಿಷ್ಠೆಗೆ ಯಾವುದೇ ಪರಿಮಿತಿ ಇಲ್ಲ. ಸದಾಕಾಲ ಹರಿ–ಕಥಾ ಶ್ರವಣ ಮಾಡುತ್ತ ಕೆಲವೊಮ್ಮೆ ಶ್ರೀಲ ಪರಮ–ಗುರುದೇವರು ಯಾವುದಾದರು ಶ್ಲೋಕವನ್ನು ಮರೆತರೆ ನೀವು ಆ ಶ್ಲೋಕವನ್ನು ಅವರಿಗೆ ಜ್ಞಾಪಿಸುತ್ತಿದ್ದಿರಿ. ಒಮ್ಮೆ ಆಸ್ಸಾಮ್ ಪ್ರಚಾರದಲ್ಲಿ "ಶ್ರೀ ಚೈತನ್ಯ ಮಹಾಪ್ರಭುಗಳನ್ನು ಏತಕ್ಕಾಗಿ 'ಭಗವಂತ' ಎಂದು ಸಂಬೋಧಿಸುತ್ತೀರಿ?" ಎಂಬ ಪ್ರಶ್ನೆಯನ್ನು ಶ್ರೀಪರಮ ಗುರುದೇವರಿಗೆ ಕೇಳಿದರು. ಶ್ರೀಲ ಪರಮ–ಗುರುದೇವರ ಆಜ್ಞೆಯಿಂದ ನೀವು ಅದೇ ಸಮಯದಲ್ಲಿ ವಿಭಿನ್ನ ಶಾಸ್ತ್ರಗಳಿಂದ ಐವತ್ತು ಶ್ಲೋಕಗಳನ್ನು ನಿರ್ದೇಶಿಸಿ ನಿರೂಪಿಸಿದಿರಿ. ಶ್ರೀಲ ಪರಮ ಗುರುದೇವರು ಬಾಂಗ್ಲಾ ಭಾಷೆಯಲ್ಲಿ ಪ್ರಕಾಶಿತವಾಗುವ ಶ್ರೀ ಗೌಡೀಯ ಪತ್ರಿಕೆಯ ಸಂಪಾದನ ಹಾಗೂ ಪ್ರಕಾಶನದ ಜವಾಬ್ದಾರಿಯನ್ನು ನಿಮಗೆ ವಹಿಸಿದರು. ನಿಮ್ಮ ಸ್ವಭಾವವು ಗಂಭೀರ ಹಾಗು ಶಾಂತವಾದದ್ದು.

ಏಕಾದಶಿ ಉಪವಾಸದ ಆವಶ್ಯಕತೆ

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲ ಜನರು ಉಪವಾಸವನ್ನು ಆಚರಿಸುತ್ತಾರೆ. ವಾರದ ಏಳುದಿನಗಳಲ್ಲಿ ಯಾವ–ಯಾವ ದಿನ ಉಪವಾಸ ಅಥವಾ ವ್ರತವಿರುವುದೋ ಮತ್ತು ಅದರ ಮೂಲಕ ವಿವಿಧ ದೇವತೆಗಳನ್ನು ಪ್ರಸನ್ನಗೊಳಿಸುವ ಇಚ್ಛೆ ಇರುತ್ತದೆ. ಈ ವ್ರತಗಳ ಹಿಂದೆ ಯಾವುದಾದರು ಉದ್ದೇಶ ಇದ್ದೇ ಇರುತ್ತದೆ. ಸಾಧಾರಣವಾಗಿ ಧನ ಪ್ರಾಪ್ತಿಯ ಉದ್ದೇಶ, ಕಾಯಿಲೆಗಳಿಂದ ವಿಮುಕ್ತರಾಗಲು, ರಾಜನೀತಿಯಲ್ಲಿ ಸ್ಥಾನ ಪಡೆಯಲು, ಒಳ್ಳೆಯ ನೌಕರಿ, ಪತ್ನಿ ಅಥವಾ ಪತಿ ಪ್ರಾಪ್ತಿಗಾಗಿ ಜನರು ಉಪವಾಸವನ್ನು ಮಾಡುತ್ತಾರೆ. ಭೌತಿಕ ಇಚ್ಛೆಗಳ ಪ್ರಾಪ್ತಿಗಾಗಿ ಉಪವಾಸವನ್ನು ಮಾಡುವುದರಿಂದ ಸಾಕಷ್ಟುಬಾರಿ ಫಲಗಳು ಲಭಿಸುತ್ತವೆ. ಆದರೆ ಈ ಫಲಗಳು ಭೌತಿಕವಾಗಿದ್ದರೆ ಕೇವಲ ಕ್ಷಣಿಕವಾಗಿ ಮಾತ್ರ ಇರುತ್ತವೆ. ಇಂತಹ ವ್ರತಗಳನ್ನು ಆಚರಿಸುವ ಅರ್ಥ ಭಗವಂತನಲ್ಲಿ ಮಾಡಿದಂತಹ ವ್ಯಾಪಾರವೇ ಆಗುತ್ತದೆ. ನಮ್ಮ ಇಚ್ಛೆಗಳು ಪೂರ್ತಿಯಾದ ಕೂಡಲೇ ವ್ರತ ಸಮಾಪ್ತಗೊಳಿಸಿ ನಾವು ಮರೆತುಬಿಡುತ್ತೇವೆ. 'ಅವಸರ ತೀರಿದಮೇಲೆ ವೈದ್ಯನ ಅವಶ್ಯಕತೆ ಇರುವುದಿಲ್ಲ!' ಶ್ರೀಲ ಭಕ್ತಿವೇದಾಂತ ಸ್ವಾಮೀ ಮಹಾರಾಜರು ಇಂತಹ ಅನುಷ್ಠಾನವನ್ನು 'ಭೌತಿಕ ಧರ್ಮ' ಎಂದು ಕರೆಯುತ್ತಾರೆ.

ಭಗವಾನ್ ಶ್ರೀಕೃಷ್ಣನ ಭಕ್ತರೂ ಸಹ ಏಕಾದಶಿ, ಜನ್ಮಾಷ್ಟಮಿ, ರಾಮನವಮಿ, ಗೌರ ಪೂರ್ಣಿಮ, ನೃಸಿಂಹ ಚತುರ್ದಶಿ, ವ್ಯಾಸಪೂಜೆ ಹಾಗೂ ಇತರ ವೈಷ್ಣವ ತಿಥಿಗಳಲ್ಲಿ ಉಪವಾಸ ಮಾಡುತ್ತಾರೆ, ವ್ರತ ಇರುತ್ತಾರೆ. ಇದರ ಹಿಂದೆ ಅವರಿಗೆ ಯಾವ ಉದ್ದೇಶ ಇರುತ್ತದೆ? ವಾಸ್ತವಿಕವಾಗಿ ಭಕ್ತರಿಗೆ ಯಾವುದೇ ಭೌತಿಕ ಕಾಮನೆಗಳು ಇರುವುದಿಲ್ಲ. ಭಕ್ತರು ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಈ ವ್ರತಗಳನ್ನು ಮಾಡುತ್ತಾರೆ. ವ್ರತವನ್ನು ಪಾಲಿಸಲು ಈ ಮೂಲ ಸಿದ್ಧಾಂತವಲ್ಲದೆ, ಭಗವಂತನಲ್ಲಿ ಅವರಿಗೆ ಶ್ರದ್ಧೆ ಹೆಚ್ಚಾಗಲಿ ಎಂಬುದೇ ಕಾರಣವಾಗಿರುತ್ತದೆ. ಉಪವಾಸವನ್ನು ಮಾಡುವುದರಿಂದ ಮನಸ್ಸು ಶುದ್ಧವಾಗುತ್ತದೆ, ಮನಸ್ಸನ್ನು ನಿಗ್ರಹಿಸುತ್ತದೆ. ಮನಸ್ಸನ್ನು ನಿಗ್ರಹಿಸಿ ಭಗವಾನ್ ಶ್ರೀಕೃಷ್ಣನ ಸೇವೆಯನ್ನು ಉತ್ತಮವಾಗಿ ಮಾಡಲು ಉಪವಾಸವು ಸಹಾಯಕವಾಗುತ್ತದೆ.

ಏಕಾದಶಿಯ ದಿನದಂದು ಅನ್ನವನ್ನು ತ್ಯಜಿಸಿ, ಶರೀರದ ಆವಶ್ಯಕತೆಗಳನ್ನು ಕಡಿಮೆ ಮಾಡಿ ಶ್ರವಣ–ಕೀರ್ತನೆಗಳ ಮೂಲಕ ಭಗವಂತನನ್ನು ಹೆಚ್ಚು ಹೆಚ್ಚಾಗಿ ಸೇವೆ ಮಾಡುವುದೇ ಉಪವಾಸದ ಉದ್ದೇಶ. ಇದರಿಂದ ಭಗವಂತನು ಸಂತುಷ್ಟನಾಗುತ್ತಾನೆ. ಭಾರತದಲ್ಲಿ ಅನಾದಿ ಕಾಲದಿಂದಲೂ ಏಕಾದಶಿ ವ್ರತದ ಪಾಲನೆಯನ್ನು ಮಾಡಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಆಧ್ಯಾತ್ಮಿಕದಲ್ಲಿ ಯಾವುದೇ ರುಚಿ ಇಲ್ಲದಂತಾಗುತ್ತಿದೆ. ಒಬ್ಬರು ಏನಾದರು ಏಕಾದಶಿ ವ್ರತ ಮಾಡಲು ಇಚ್ಛಿಸಿದರೆ ಅವರ ಮನೆಯವರ ದೃಷ್ಟಿ ಬೀಳುತ್ತದೆ. "ಏಕಾದಶಿ ವ್ರತದ ಪಾಲನೆಯನ್ನು ದೊಡ್ಡ ಜ್ಞಾನಿ ಮಹಾನ್ ಜನರು ಮಾಡಬೇಕಾದಂತಹದ್ದು, ಯುವಕರಾದವರು ಕೇವಲ ಚನ್ನಾಗಿ ತಿಂದು–ಕುಡಿದು ಮೋಜು ಮಾಡಬೇಕು." ಇಂತಹ ಉಪದೇಶಗಳನ್ನು ನೀಡುತ್ತಾರೆ. ಶ್ರೀಲ ಭಕ್ತಿ ವೇದಾಂತ ಸ್ವಾಮೀ ಮಹಾರಾಜರು ಏಕಾದಶಿ ಹಾಗೂ ಇತರ ಉತ್ಸವಗಳ ವ್ರತಗಳನ್ನು ಮಾಡುವುದು ಆಧ್ಯಾತ್ಮಿಕ ಜೀವನದಲ್ಲಿ ಮಹತ್ವಪೂರ್ಣವಾದ ಅಂಗವೆಂದು ಭಾವಿಸುತ್ತಾರೆ. ಅವರು ಹೇಳುತ್ತಾರೆ,

"ಯಾರು ಈ ದಿವ್ಯ ಜಗತ್ತಿನಲ್ಲಿ ಭಗವಂತನ ಸಂಗವನ್ನು ಪಡೆಯಲು ಬಯಸುವರೋ ಅವರಿಗಾಗಿ ನಮ್ಮ ಮಹಾನ್ ಆಚಾರ್ಯರುಗಳು ಈ ಎಲ್ಲ ವಿಧಿ–ವಿಧಾನಗಳನ್ನು ಮಾಡಿದ್ದಾರೆ. ಮಹಾತ್ಮರು ಈ ಎಲ್ಲ ವಿಧಿ–ವಿಧಾನಗಳನ್ನು ಒಪ್ಪಿಕೊಳ್ಳುತ್ತಾರೆ, ಆದ್ದರಿಂದ ಅವರಿಗೆ ಫಲಸಿಗುತ್ತದೆ."

ಶ್ರೀಲ ವ್ಯಾಸದೇವರು ಪುರಾಣಗಳಲ್ಲಿ ತಮ್ಮ ಸ್ಥಾನಗಳಲ್ಲಿ ಏಕಾದಶಿ ವ್ರತದ ಮಹಿಮೆಯನ್ನು ವರ್ಣಿಸಿದ್ದಾರೆ. ಈ ಪುಸ್ತಕದಲ್ಲಿ ಅಪರಾ ಏಕಾದಶಿ ಮಾಹಿಮೆಯ ವರ್ಣನೆಯನ್ನು ಕಥಾರೂಪದಲ್ಲಿ ನೀಡಲಾಗಿದೆ. ಕಥೆಯನ್ನು ಓದಿದ ನಂತರ ಈ ಪಾಲನೆಯಿಂದ ಭೌತಿಕ ಲಾಭವುಂಟಾಗುತ್ತದೆ, ಆದ್ದರಿಂದ ಈ ವ್ರತವು ಕೇವಲ ಭೌತಿಕ ಲಾಭದ ಉದ್ದೇಶ ಎಂದು ಯಾರಿಗಾದರೂ ಅನ್ನಿಸಬಹುದು. ಆದರೆ ಹಾಗಲ್ಲ, ಯಾರು ವೈಷ್ಣವರಿದ್ದಾರೆ ಅವರಿಗೆ ಈ ವ್ರತವು ಸರ್ವಶ್ರೇಷ್ಠವಾದದ್ದು. ಏಕಾದಶಿ ಭಗವಾನ್ ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯವಾದದ್ದು, ಆದ್ದರಿಂದ ಅದನ್ನು ಹರಿವಾಸರ ಅಥವಾ ಹರಿದಿನ ಎಂದು ಕರೆಯುತ್ತಾರೆ. ಉಪವಾಸ ಶಬ್ದದ ಅರ್ಥ 'ಹತ್ತಿರದಲ್ಲಿ ಇರುವುದು' ಎಂದು. ನಾವು ಏನಾದರು ಭಗವಂತನ ಹತ್ತಿರ ಇರಲು ಬಯಸಿದರೆ, ಉಪವಾಸವನ್ನು ಮಾಡುವುದು ಆವಶ್ಯಕ. ಆದ್ದರಿಂದ ಏಕಾದಶಿ ದಿನದಂದು ಎಲ್ಲರು ಭೌತಿಕ ಇಂದ್ರಿಯತೃಪ್ತಿಯ ಕಾರ್ಯಗಳಿಂದ ದೂರವಿದ್ದು ಭಗವಂತನ ನಾಮಸ್ಮರಣೆಯಲ್ಲಿ ಅಧಿಕ–ಹೆಚ್ಚು ಸಮಯವನ್ನು ಕಳೆಯಬೇಕು. ಬ್ರಹ್ಮ ವೈವರ್ತ ಪುರಾಣದಲ್ಲಿ ಹೀಗೆ ಹೇಳಲಾಗಿದೆ–

ಉಪಾವೃತ್ತಸ್ಯ ಪಾಪೇಭ್ಯೋ ಯಸ್ತು ವಾಸೋ ಗುಣೈಃ ಸಹ ।
ಉಪವಾಸಃ ಸ ವಿಜ್ಞೇಯಃ ಸರ್ವ ಭೋಗ ವಿವರ್ಜಿತಃ ॥

ಉಪವಾಸದ ಅರ್ಥ ಎಲ್ಲ ಪಾಪಗಳಿಂದ ಮತ್ತು ಇಂದ್ರಿಯತೃಪ್ತಿಯ ಕಾರ್ಯಗಳಿಂದ ದೂರವಿರುವುದು. ನಿಶ್ಚಯವಾಗಿ ಏಕಾದಶಿ ವ್ರತದ ಪಾಲನೆಯಿಂದ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಇವುಗಳ ಪ್ರಾಪ್ತಿಯಾಗುತ್ತದೆ, ಆದರೆ ಅದರೊಂದಿಗೆ ಪಂಚಮ ಪುರುಷಾರ್ಥವಾದ ಭಗವದ್ಭಕ್ತಿ ಅಥವಾ ಕೃಷ್ಣಪ್ರೇಮವೂ ಸಹ ಪ್ರಾಪ್ತವಾಗುತ್ತದೆ. ಶ್ರೀ ಹರಿಭಕ್ತಿ ವಿಲಾಸ ಎಂಬ ಹೆಸರಿನ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ,

ಏಕಾದಶೀ ವ್ರತಂ ನಾಮ ಸರ್ವ ಕಾಮ ಫಲ ಪ್ರದಮ್ ।
ಕರ್ತವ್ಯಂ ಸರ್ವದಾ ವಿಪ್ರೈಃ ವಿಷ್ಣು ಪ್ರೀಣನಕಾರಣಮ್ ॥

ಭಗವಾನ್ ಶ್ರೀವಿಷ್ಣುವಿನ ಪ್ರಸನ್ನತೆಗಾಗಿ ಬ್ರಾಹ್ಮಣರು ಏಕಾದಶಿ ವ್ರತದ ಪಾಲನೆ ಮಾಡಬೇಕು. ಇದು ಅವರ ಕರ್ತವ್ಯ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ಭಗವಂತನ ಪ್ರಸನ್ನತೆಗಾಗಿ ಈ ವ್ರತವನ್ನು ಪಾಲನೆ ಮಾಡಬೇಕು. ಭಗವಾನ್ ಶ್ರೀವಿಷ್ಣು ಪ್ರಸನ್ನನಾದರೆ ಸುಖ ಮತ್ತು ಸಮೃದ್ಧಿಯು ತಂತಾನೆ ಪ್ರಾಪ್ತವಾಗುತ್ತದೆ.' ಓಂ ವಿಷ್ಣುಪಾದ ನಿತ್ಯಲೀಲ ಪ್ರವಿಷ್ಟ ಸಚ್ಚಿದಾನಂದ ಭಕ್ತಿವಿನೋದ ಠಾಕುರರು ತಮ್ಮ ಒಂದು ಗೀತೆಯಲ್ಲಿ ಹೀಗೆ ಬರೆದಿದ್ದಾರೆ,


ಮಾಧವ ತಿಥೀ ಭಕ್ತಿ ಜನನೀ ಯತನೇ ಪಾಲನ ಕರೀ ।

ಮಾಧವ ತಿಥಿ ಅರ್ಥಾತ್ ಏಕಾದಶಿ ವ್ರತ ಎಂದು, ಭಕ್ತಿಜನನೀ ಅಂದರೆ ನಮ್ಮ

ಹೃದಯದಲ್ಲಿ ಭಕ್ತಿಯನ್ನು ಹುಟ್ಟಿಸುವಂತಹದ್ದು. ಆದ್ದರಿಂದ ಅವರು ಹೇಳುತ್ತಾರೆ, ನಾವು ಪ್ರಯತ್ನಪೂರ್ವಕವಾಗಿ ಅದರ ಪಾಲನೆ ಮಾಡಬೇಕು. ಸಂತ ಶಿರೋಮಣಿ ಶ್ರೀ ತುಕಾರಾಮ್ ಮಹಾರಾಜರು ಹೇಳುತ್ತಾರೆ,

ಜ್ಯಾಸೀ ನಾವಡೇ ಏಕಾದಶೀ । ತೋ ಜಿತಾಚೀ ನರಕವಾಸೀ ॥
ಜ್ಯಾಸೀ ನಾವಡೇ ಹೇ ವ್ರತ । ತ್ಯಾಸೀ ನರಕ ತೋಹಿ ಭೀತ ॥
ಜ್ಯಾಸೀ ಘಡೇ ಏಕಾದಶೀ । ಜಾಣೇ ಲಾಗೇ ವಿಷ್ಣುಪಾಶೀ ॥
ತುಕಾ ಮ್ಹಣೇ ಪುಣ್ಯರಾಷೀ । ತೋಚಿ ಕರೀ ಏಕಾದಶೀ ॥

ಯಾರಿಗೆ ಈ ಏಕಾದಶಿಯು ಇಷ್ಟವಾಗುವುದಿಲ್ಲವೋ, ಅವರು ಜೀವಂತರಾಗಿ ನರಕದಲ್ಲಿ ವಾಸಿಸುವಂತಹವರು. ಯಾರಿಗೆ ಈ ವ್ರತ ಇಷ್ಟವಿರುವುದಿಲ್ಲವೋ ಅವರನ್ನು ಕಂಡು ನರಕವೂ ಸಹ ಹೆದರುತ್ತದೆ. ಏಕೆಂದರೆ ಆ ವ್ಯಕ್ತಿಗಳು ಮಹಾಪಾಪಿಗಳು ಎಂದು ಭಾವಿಸಲಾಗುತ್ತದೆ. ಯಾರು ಏಕಾದಶಿ ವ್ರತವನ್ನು ಪಾಲಿಸುವರೋ, ಅವರಿಗೆ ನಿಶ್ಚಯವಾಗಿ ವೈಕುಂಠ ಪ್ರಾಪ್ತಿಯಾಗುತ್ತದೆ. ಆದ್ದರಿಂದ ತುಕಾರಾಮ್ ಮಹಾರಾಜರು ಹೇಳುತ್ತಾರೆ ಯಾರು ಪೂರ್ವಜನ್ಮಗಳಲ್ಲಿ ಪುಣ್ಯಗಳ ರಾಶಿಯನ್ನು ಕೂಡಿಟ್ಟವರೋ, ಕೇವಲ ಅವರು ಮಾತ್ರ ಏಕಾದಶಿ ವ್ರತವನ್ನು ಪಾಲನೆ ಮಾಡುತ್ತಾರೆ.



ಭಗವಾನ್ ಶ್ರೀವಿಠ್ಠಲನ ಶ್ರೇಷ್ಠ–ಭಕ್ತರು ಶ್ರೀತುಕಾರಾಮ್ ಮಹಾರಾಜರು. ನಿಮ್ಮ ಭಾವಪೂರ್ಣ ಹಾಗೂ ಭಕ್ತಿಮಯ ಅಭಂಗ (ಮರಾಠಿ ಪದ್ಯಗಳು) ಹಾಗೂ ದಿವ್ಯ ಚರಿತ್ರೆ ಕೇವಲ ಮಹಾರಾಷ್ಟ್ರದಲ್ಲಿ ಒಂದೇ ಅಲ್ಲ ದೇಶ–ವಿದೇಶಗಳ ಅಗಣಿತ ಸುಕೃತಿವಂತ ಜನರನ್ನು ಭಕ್ತಿ ಮಾರ್ಗದಲ್ಲಿ ಸೆಳೆಯುತ್ತಿದೆ. ನಿಮ್ಮ ಏಕಾದಶಿಯ ಮೇಲಿನ ನಿಷ್ಠೆ ಪ್ರೇರಣಾದಾಯಕವು. ಏಕಾದಶಿಯ ದಿನದಂದು ನೀವು ನಿರಾಹಾರರಾಗಿದ್ದು ಮತ್ತು ಜಲವನ್ನೂ ಸಹ ತ್ಯಜಿಸಿ ಹಗಲು–ರಾತ್ರಿ ಹರಿನಾಮ ಸಂಕೀರ್ತನೆಯಲ್ಲಿ ಮಗ್ನರಾಗಿರುತ್ತಿದ್ದಿರಿ. ಈರ್ಷ್ಯೆ ಜನರು ನಿಮ್ಮ ಅಭಂಗಗಳ ಗಾಥಾ (ಸಂಗ್ರಾಹ) ವನ್ನು ನದಿಯ ಪ್ರವಾಹಕ್ಕೆ ಎಸೆದರು. ಸ್ವಯಂ ಭಗವಾನ್ ವಿಠ್ಠಲನು ಆ ಗಾಥಾಗಳನ್ನು ಮರಳಿ ನಿಮಗೆ ನೀಡಿದರು.

ಶ್ರೀ ಏಕನಾಥ ಮಹಾರಾಜರು (ಶ್ರೀ ಜನಾರ್ದನ ಮಹಾರಾಜರ ಶಿಷ್ಯ) ಹೇಳುತ್ತಾರೆ–

ಏಕಾದಶೀ, ಏಕಾದಶೀ । ಜಯಾ ಛಂದ ಅಹರ್ನಿಶೀ
ವ್ರತ ಕರೀ ಜೋ ನೇಮಾನೇ । ತೇಥೇ ವೈಕುಂಠಾಚೇ ಪಣೇ
ನಾಮಸ್ಮರಣ ಜಾಗ್ರಣ । ವಾಚೇ ಗಾಯ ನಾರಾಯಣ
ತೇಚಿ ಭಕ್ತ ಸತ್ಯ ಯಾಚಾ । ಏಕಾ ಜನಾರ್ದನ ಮ್ಹಣೇ ವಾಚಾ ।

ಯಾವ ಭಕ್ತರು ಹಗಲು–ರಾತ್ರಿ ಏಕಾದಶಿ ತಿಥಿಯನ್ನು ಕುರಿತು ಯೋಚಿಸುವರೋ ಮತ್ತು ನಿತ್ಯ ನಿಯಮಗಳೊಂದಿಗೆ ಏಕಾದಶಿ ಪಾಲನೆ ಮಾಡುವರೋ, ಅವರು ಅವಶ್ಯವಾಗಿ ವೈಕುಂಠಕ್ಕೆ ಹೋಗುತ್ತಾರೆ. ಯಾವ ಭಕ್ತರು ಏಕಾದಶಿಯ ದಿನದಂದು ಜಾಗರಣೆ ಮಾಡುತ್ತ ಭಗವಾನ್ ಶ್ರೀಹರಿಯ ನಾಮವನ್ನು ಸ್ಮರಣೆ ಮಾಡುವರೋ, ಆ ಪವಿತ್ರ ನಾಮಗಳನ್ನು ಗಾಯನ ಮಾಡುವರೋ, ಅವರು ಭಗವಂತನ ನಿಜವಾದ ಭಕ್ತರು.

ಏಕಾದಶಿಯಂದು ಅನ್ನವನ್ನು ಗ್ರಹಿಸುವುದರಿಂದ ಏನಾಗುವುದು ಎಂಬುದಕ್ಕೆ ವರ್ಣನೆಯನ್ನು ತುಕಾರಾಮ್ ಮಹಾರಾಜರು ಈ ರೀತಿ ಹೇಳುತ್ತಾರೆ–

ಏಕಾದಶೀಸ ಅನ್ನ ಪಾನ । ಜೇ ನರ ಕರಿತೀ ಭೋಜನ ।
ಶ್ವಾನವಿಷ್ಟೇಸಮಾನ । ಅಧಮ ಜನ ತೋ ಏಕ ॥
ಏಕಾ ವ್ರತ್ತಾಚೇಂ ಮಹಿಮಾನ । ನೇಮೇಂ ಆಚರತೀ ಜನ ।
ಗಾತೀ ಏಕತೀ ಹರಿಕಿರ್ತನ । ತೇ ಸಮಾನ ವಿಷ್ಣೂಶೀ ॥
ಅಶುದ್ಧ ವಿಟಾಲಶೀಂಚೇ ಖಿತ್ತ । ವಿಡಾ ಭಕ್ಷಿಂತೀ ತಾಂಬೂಲ ।
ಸಾಂಪಡೇ ಸಬತ್ತ । ಕಾತ್ತಾಹಾತೀಂ ನ ಸುಟೇ ॥
ರೋಜ ಬಾಜ ವಿಲಾಸ ಭೋಗ । ಕರಿ ಕಾಮಿನೀಶೀಂ ಸಂಗ ।
ತಯಾ ಜೋಡೇ ಕ್ಷಯರೋಗ । ಜನ್ಮವ್ಯಾಧೀ ಬಳ್ತಿವಂತ ॥
ಆಪಣ ನ ವಜೇ ಹರಿಕಿರ್ತನ । ಆಣಿಕಾಂ ವಾರೀ ಜಾತಾಂ ಜನ ।
ತ್ಯಾಚ್ಯಾ ಪಾಪಾ ಜಾಣಾ । ಠಂಗಣಾ ಮಹಾಮೇರು ತೋ ॥
ತಯ ದಂಡೀ ಯಮದೂತ । ಝಾಲೇ ತಯಾಚೇ ಅಂಕಿತ ।
ತುಕಾ ಮ್ಹಣೇ ವ್ರತ । ಏಕಾದಶೀ ಚುಕಲೀಯಾ ॥

ಯಾವ ಜನರು ಏಕಾದಶಿಯಂದು ಅನ್ನ ಸೇವಿಸುವರೋ, ಊಟ ಮಾಡುವರೋ, ಅವರು ಬಹಳ ಪತಿತ ಜೀವರು. ಅವರನ್ನು ಅಧಮರು ಎಂದು ಭಾವಿಸಲಾಗುತ್ತದೆ, ಏಕೆಂದರೆ ಅಂದು ತಿನ್ನುವ ಭೋಜನವು ನಾಯಿಯ ಹೇಸಿಗೆಯಂತೆ. ಯಾರು ವ್ರತವನ್ನು ಮಾಡುವುದಿಲ್ಲವೋ, ಅವರಿಗಾಗಿ ಯಮದೂತರೆ ಬಂದು ನರಕಕ್ಕೆ ತಳ್ಳುತ್ತಾರೆ, ಅವರು ನರಕಗಾಮಿಗಳಾಗುತ್ತಾರೆ. ಯಾವ ಮನುಷ್ಯ ಏಕಾದಶಿಯಂದು ತಾಂಬೂಲವನ್ನು ಸೇವಿಸುತ್ತಾನೋ, ಅವನಿಗೆ ಸ್ತ್ರೀಯ ಮಾಸಿಕ ಸ್ತ್ರವದಲ್ಲಿ ಬರುವಂತಹ ಅಶುದ್ಧ ರಕ್ತವನ್ನು ಕುಡಿದಂತಾಹ ಪಾಪವು ಬರುತ್ತದೆ. ಯಾವ ಮನುಷ್ಯನು ಏಕಾದಶಿ ದಿನದಂದು ಸ್ತ್ರೀ–ಸಂಗವನ್ನು ಮಾಡುವನೋ, ಅವನಿಗೆ ಕ್ಷಯ ರೋಗ ಉಂಟಾಗುತ್ತದೆ. ಅವನಿಗೆ ಆಜೀವ ಅನಾರೋಗ್ಯವು ಬಾದಿಸುತ್ತದೆ. ಏಕಾದಶಿ ದಿನದಂದು ಪಾಪಪುರುಷನು ಅನ್ನದಲ್ಲಿ ವಾಸಮಾಡುತ್ತಿರುತ್ತಾನೆ, ಆದ್ದರಿಂದ ಅನ್ನವನ್ನು ಸೇವಿಸಬಾರದು.

ತುಕಾ ಮ್ಹಣೇ ಬರೇ ವ್ರತ ಏಕಾದಶಿ । ಕೇಲೇ ಉಪವಾಸೀ ಜಾಗರಣಾ ॥

ತುಕಾರಾಮ ಮಹಾರಾಜರು ಹೇಳುತ್ತಾರೆ ಏಕಾದಶಿಯ ಉಪವಾಸ ಮತ್ತು ಜಾಗರಣೆಯು ಆತ್ಮಕ್ಕೆ ಪರಮ ಹಿತಕರವಾದದ್ದು.

ಪದ್ಮಪುರಾಣದಲ್ಲಿ ಹೀಗೆ ಹೇಳಲಾಗಿದೆ–

ಅಶ್ವೇಮೇಧಸಹಸ್ತ್ರಾಣಿ ರಾಜಸೂಯಶತಾನಿ ಚ ।
ಏಕಾದಶ್ಯುಪವಾಸಸ್ಯ ಕಲಾಂ ನಾರ್ಹನ್ತಿ ಷೋಡಶೀಮ್ ॥

ಸಾವಿರ ಆಶ್ವಮೇಧಯಾಗಗಳಾಗಲಿ ಮತ್ತು ನೂರಾರು ರಾಜಸೂಯ ಯಾಗಗಳಾಗಲಿ ಏಕಾದಶಿಯ ಹದಿನಾರನೆಯ ಒಂದಂಶಕ್ಕೂ ಸಹ ಸಾಟಿ ಎನ್ನಿಸವು.

ಸ್ವರ್ಗಮೋಕ್ಷಪ್ರದಾ ಹ್ಯೇಷಾ ಶರೀರಾರೋಗ್ಯದಾಯಿನೀ ।
ಸುಕಲತ್ರಪ್ರದಾ ಹ್ಯೇಷಾ ಜೀವತ್ಪುತ್ರಪ್ರದಾಯಿನೀ ।
ನ ಗಂಗಾ ನ ಗಯಾ ಭೂಪ ನ ಕಾಶೀ ನ ಚ ಪುಷ್ಕರಮ್ ।
ನ ಚಾಪಿ ವೈಷ್ಣವಂ ಕ್ಷೇತ್ರಂ ತುಲ್ಯಂ ಹರಿದಿನೇನ ಚ ।

ಅರ್ಥ– ಏಕಾದಶಿಯು ಸ್ವರ್ಗ, ಮೋಕ್ಷ, ಆರೋಗ್ಯ, ಒಳ್ಳೆಯ ಪತ್ನಿ ಮತ್ತು ಒಳ್ಳೆಯ ಪುತ್ರ ಪ್ರಸಾದಿಸುತ್ತದೆ. ಗಂಗಾ, ಗಯಾ, ಕಾಶೀ, ಪುಷ್ಕರ, ವೈಷ್ಣವ ಕ್ಷೇತ್ರ ಇವುಗಳಲ್ಲಿ ಯಾವುದೊಂದೂ ಸಹ ಏಕಾದಶಿಗೆ ಸರಿಗಟ್ಟಲಾರವು.


ಯಾರು ತಮ್ಮ ಹಿತವನ್ನು ಬಯಸುವರೋ ಅವರು ಈ ಕೆಳಗಿನ ವಿವರಣೆಗೆ ಅನುಸಾರವಾಗಿ ಏಕಾದಶಿಯ ದಿನ ಅನ್ನವನ್ನು ತ್ಯಜಿಸಬೇಕು.

೧) ಅಕ್ಕಿ, ಹಾಗೂ ಅದರಿಂದ ಮಾಡಿರುವಂತಹ ಪದಾರ್ಥಗಳು, ೨) ಗೋಧಿ, ರಾಗಿ, ಜೋಳ, ಮುಸುಕಿನ ಜೋಳ ಮತ್ತು ಇವುಗಳಿಂದ ಮಾಡಿರುವಂತಹ ಪದಾರ್ಥ, ೩) ಬೇಳೆ ಕಾಳುಗಳು – ಉದ್ದಿನ ಬೇಳೆ, ತೊಗರಿ ಬೇಳೆ, ಹೆಸರು, ಹುಳ್ಳಿ ಮತ್ತು ಇನ್ನಿತರ ಬೇಳೆ ಅಥವಾ ಕಾಳುಗಳು, ೪) ಜೌ ೫) ಸಾಸಿವೆ ಮತ್ತು ಎಳ್ಳು ಎಣ್ಣೆ, ೬) ಎಲ್ಲಾ ಸಿರಿದಾನ್ಯಗಳು.

ಅಪ್ಪಿತಪ್ಪಿ ಮರೆತೂ ಸಹ ಈ ಪದಾರ್ಥಗಳನ್ನು ಸೇವಿಸಬಾರದು. ಸೇವಿಸಿದರೆ ವ್ರತ ಭಂಗವಾಗುವುದು. ಭಕ್ತಿಯಲ್ಲಿ ಪ್ರಗತಿಗಳಿಸಲು ಇಚ್ಛುಕರಾದ ವ್ಯಕ್ತಿಗಳು ಇದನ್ನು ಪಾಲನೆ ಮಾಡಬೇಕು. ಒಂದೇ ದಿನ ಎರಡು ತಿಥಿ (ದಶಮಿ ಮತ್ತು ಏಕಾದಶಿ) ಬಂದಾಗ ವೈಷ್ಣವನು ಆ ದಿನದ ವ್ರತ ಅಥವಾ ಉತ್ಸವ ಮುಂದಿನ ದಿನ ಮಾಡಬೇಕು. ಆದ್ದರಿಂದ ನಾವು ಸ್ಮಾರ್ತ ಮತ್ತು ಭಾಗವತ ಈ ಎರಡು ಏಕಾದಶಿಗಳನ್ನು ನೋಡುತ್ತೇವೆ. ಹರಿಭಕ್ತಿವಿಲಾಸ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ, "ಹೇ ಬ್ರಾಹ್ಮಣ, ಸೂರ್ಯೋದಕ್ಕೆ ೯೬ ನಿಮಿಷಗಳ ಮೊದಲು ಏಕಾದಶಿ ಪ್ರಾರಂಭವಾಗುತ್ತದೆ ಆ ಏಕಾದಶಿಯನ್ನು ಶುದ್ಧ ಏಕಾದಶಿ ಎಂದು ಕರೆಯುತ್ತಾರೆ. ಗೃಹಸ್ಥರು ಈ ಏಕಾದಶಿಯನ್ನು ಪಾಲನೆ ಮಾಡಬೇಕು. ಏಕಾದಶಿಯನ್ನು ಮಾಡುವಂತಹ ಅಥವಾ ಮಾಡಲು ಇಚ್ಛುಕರಾದ ಪ್ರತಿಯೊಬ್ಬ ವ್ಯಕ್ತಿಗಳೂ ಈ ಗ್ರಂಥವನ್ನು ಧ್ಯಾನಪೂರ್ವಕವಾಗಿ ಓದಬೇಕು.

–ತ್ರಿದಂಡಿಸ್ವಾಮೀ ಭಕ್ತಿವೇದಾಂತ ದಂಡೀ ಮಹಾರಾಜರು

ಶ್ರೀಪಾದ ಭಕ್ತಿವೇದಾಂತ ದಂಡೀ ಸ್ವಾಮೀ ಮಹಾರಾಜರು, B.Sc. (Hons), B.E. (IISc, ಬೆಂಗಳೂರು), M.S. (IIT. ಮದ್ರಾಸ್), D.Sc. (ವಾಶಿಂಗ್ಟನ್ ವಿಶ್ವವಿದ್ಯಾಲಯ, ಅಮೇರಿಕ), C.I.S.S.P., P.E., NASA–ಭೂತಪೂರ್ವ ಸಂಗಣಕ ಸುರಕ್ಷಾ ವೈಜ್ಞಾನಿಕ, ಭೂತಪೂರ್ವ ಅಧಿವಕ್ತಾ–ಸಿಟೀ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್. Holder of many research patents in USA



ನೀವು ಜಗದ್ಗುರು ಯುಗಾಚಾರ್ಯ ನಿತ್ಯಲೀಲಾ ಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತ ಶ್ರೀ ಶ್ರೀಮದ್ ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರ ಶಿಷ್ಯರು. ನೀವು ಅಮೇರಿಕಾ, ಸಿಂಗಾಪೂರ್, ಮಲೇಶಿಯ, ದಕ್ಷಿಣ ಅಫ್ರಿಕ, ಕೇನಿಯ, ತ್ರಿನಿದಾದ್, ತಾಯ್ವಾನ್, ಬ್ರಾಂಜಿಲ್ ಮುಂತಾದ ದೇಶಗಳಲ್ಲಿ ಶುದ್ಧ ಭಕ್ತಿಯನ್ನು ಪ್ರಚಾರ ಮಾಡಿರುವಿರಿ. ನೀವು ಶಾಕಾಹಾರವನ್ನು ಕುರಿತು ಆಂಗ್ಲ ಭಾಷೆಯಲ್ಲಿ ಗ್ರಂಥವನ್ನು ಬರೆದಿದ್ದೀರಿ– "Vegetarianism- a scientifically proven and time honored path to peace". ಶ್ರೀಲ ಗುರುದೇವರ ಆದೇಶದಿಂದ ಶ್ರೀರಂಗನಾಥ ಗೌಡೀಯ ಮಠ, ಹೆಸರಘಟ್ಟ, ಬೆಂಗಳೂರಿನಲ್ಲಿ ಕನ್ನಡ ಭಾಷೆಯಲ್ಲಿ ಶ್ರೀ ವೈಷ್ಣವ–ಸಿದ್ಧಾಂತ–ಮಾಲಾ, ಶ್ರೀಮಾಧುರ್ಯ–ಕಾದಂಬಿನಿ, ಶ್ರೀಜೈವಧರ್ಮ, ಶ್ರೀಚೈತನ್ಯ ಮಹಾಪ್ರಭುಗಳ ಸ್ವಯಂ–ಭಗವಂತನನ್ನು ಪ್ರತಿಪಾದಿಸುವ ವಿವರಿಸುವ ಶಾಸ್ತ್ರೀಯ–ಪ್ರಮಾಣವಾದಂತಹ ಗ್ರಂಥಗಳನ್ನು ಪ್ರಕಾಶಿಸಿದ್ದೀರಿ. ಶ್ರೀಲ ಗುರುದೇವರ ಗ್ರಂಥಗಳನ್ನು ಮರಾಠಿ, ತೆಲುಗು, ತಮಿಳು ಮತ್ತು ಮಲಯಾಳ ಭಾಷೆಗಳಲ್ಲಿಯೂ ಸಹ ಪ್ರಕಾಶನ ಮಾಡಿರುವಿರಿ.

ನಿವೇದನೆ
(ಶ್ರೀ ಏಕಾದಶಿ–ವ್ರತಕಥಾ ಗ್ರಂಥದಲ್ಲಿ ಪ್ರಕಾಶಿತ)

ಶ್ರೀಗೌಡೀಯ ವೇದಾಂತ ಸಮಿತಿಯಿಂದ ಶ್ರೀಏಕಾದಶೀ–ವ್ರತಕಥಾ ಎಂಬ ಹೆಸರಿನ ಗ್ರಂಥವು ಸಪ್ತಮ ಸಂಸ್ಕರಣೆಯ ರೂಪದಲ್ಲಿ ಪ್ರಕಾಶಿತಗೊಂಡಿದೆ. ವಿಭಿನ್ನ ಪುರಾಣಗಳಲ್ಲಿ ಹಾಗೂ ವೈಷ್ಣವ –ಸ್ಮೃತಿರಾಜ ಶ್ರೀಹರಿಭಕ್ತಿವಿಲಾಸ ಇತ್ಯಾದಿ ಗ್ರಂಥಗಳಿಂದ ಸಂಗ್ರಹಿಸಲಾಗಿದೆ. ಶ್ರೀ ಗೌಡೀಯ ವೇದಾಂತ ಸಮಿತಿಯಿಂದ ಪ್ರಕಾಶಿತವಾದ 'ಶ್ರೀಚೈತನ್ಯ ಪಂಜಿಕಾ'ದ ಪುನಃಪ್ರವರ್ತ್ತಕ ನಿತ್ಯಲೀಲಾಪ್ರವಿಷ್ಟ ಓಂ ವಿಷ್ಣುಪಾದ ಅಷ್ಟೋತ್ತರಶತಶ್ರೀ ಶ್ರೀಮದ್ ಭಕ್ತಿಪ್ರಜ್ಞಾನ ಕೇಶವ ಗೋಸ್ವಾಮೀ ಮಹಾರಾಜರು ಸ್ವ–ಲಿಖಿತ ಭೂಮಿಕೆಗಳಲ್ಲಿ, ಶ್ರೀಚೈತನ್ಯ–ಪಂಜಿಕಾದ ಆದರ್ಶ–ಸ್ವರೂಪ–ಜಗದ್ಗುರು ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಗೋಸ್ವಾಮಿ ಪ್ರಭುಪಾದರ ವಿಚಾರಧಾರೆಯಿಂದ ಕೂಡಿರುವ "ಗೌಡೀಯ ಕೃತ್ಯ" (ಭಾಗವತ ಧರ್ಮ) ಶೀರ್ಷಕೆಯಿಂದ ಅವರ ಸ್ವ–ಹಸ್ತ–ಲಿಖಿತವಾದ ಕೆಲವು ಉಪದೇಶಗಳನ್ನು ಮುದ್ರಿತಗೊಳಿಸಲಾಗಿದೆ. ಅದರಲ್ಲಿ ಸಂಖ್ಯಾಪೂರ್ವಕವಾಗಿ ಹೆಸರಿನೊಂದಿಗೆ 'ಏಕಾದಶಿ' ಇತ್ಯಾದಿ ಹರಿವಾಸರ ವ್ರತ ಪಾಲನೆಯ' ಸಂಬಂಧದಲ್ಲಿ ವಿಶೇಷ ನಿರ್ದೇಶನವನ್ನು ನೀಡಲಾಗಿದೆ. ಅರವತ್ತು ನಾಲ್ಕು ಪ್ರಕಾರದ ಭಕ್ತ್ಯಾಂಗಗಳಲ್ಲೂ ಏಕಾದಶಿ ವ್ರತದ ಪಾಲನೆಯು ವಿಶಿಷ್ಟವಾದದ್ದು ಎಂದು ಉಲ್ಲೇಖಿಸಲಾಗಿದೆ. ಆದ್ದರಿಂದ ಭಕ್ತಿ ಲಾಭವನ್ನು ಪಡೆಯಲು ಎಲ್ಲ ಜನರ ಮೂಲಕ ಏಕಾದಶಿ ಅಥವಾ ಹರಿವಾಸರ ವ್ರತ ಪಾಲನೆಯ ನಿತ್ಯತ್ವ ಮತ್ತು ಉಪಯೋಗಿತವನ್ನು ಸ್ವೀಕರಿಸಲಾಗಿದೆ.

ಪುರಾಣ ಮುಂತಾದುವುಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ,– ಪರಮವಲ್ಲಭ ಏಕಾದಶಿ ತಿಥಿ ಮನುಷ್ಯನಿಗೆ ಸರ್ವಾಭೀಷ್ಟ ಪ್ರದಾಯಿನಿಯಾಗಿದೆ. ಶುಕ್ಲ, ಕೃಷ್ಣ ಎರಡೂ ಪಕ್ಷಗಳಲ್ಲೂ ಏಕಾದಶಿ ತಿಥಿಯ ದಿನಗಳಲ್ಲಿ ಪೂಜೆ–ಮಹೋತ್ಸವ ಮುಂತಾದವುಗಳನ್ನು ಅನುಷ್ಠಾನ ಮಾಡುವುದು ಕರ್ತವ್ಯ. ಈ ವ್ರತವನ್ನು ಆಚರಿಸುವುದರಿಂದ ಎಲ್ಲ ಪಾಪವು ಧ್ವಂಸವಾಗುವುವು, ಸರ್ವಾರ್ಥ–ಪ್ರಾಪ್ತಿ ಮತ್ತು ಶ್ರೀಕೃಷ್ಣನ ಪ್ರೀತಿ ಪ್ರಾಪ್ತವಾಗುತ್ತದೆ. ಭಗವಂತನ ಪ್ರೀತಿವಿಧಾನ, ವಿಧಿ–ಪ್ರಾಪ್ತತ್ವ, ಭೋಜನದ ನಿಷಿದ್ಧತೆ ಮತ್ತು ವ್ರತ ಮಾಡದಿರುವ ಕಾರಣ ದೋಷ– ಈ ನಾಲ್ಕು ಕಾರಣಗಳಿಂದ ಉಕ್ತವಾದ ವ್ರತದ ನಿತ್ಯತ್ವವು ಪ್ರಸಿದ್ಧವಾಗಿದೆ. ಏಕಾದಶಿಯ ವ್ರತವು ಶ್ರೀಹರಿಗೆ ಎಲ್ಲದಕ್ಕಿಂತಲೂ ಅಧಿಕ ಪ್ರಿಯವಾದದ್ದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ನಾರಿ–ಪುರುಷ ಯಾರೇ ಆಗಲಿ ಭಕ್ತಿಪೂರ್ವಕವಾಗಿ ಏಕಾದಶಿ ವ್ರತವನ್ನು ಆಚರಿಸುವರೋ, ಅವರು ಮೋಕ್ಷ ಮತ್ತು ಭಗವತ್–ಸಾನ್ನಿಧ್ಯವನ್ನು ಪ್ರಾಪ್ತಿಸಿಕೊಳ್ಳಬಹುದು.

ಏಕಾದಶಿಯಂದು ಉಪವಾಸವಿದ್ದು ಉಕ್ತ ವ್ರತ ಪಾಲನೆ ಮಾಡುವುದು ಎಲ್ಲರಿಗೂ ಅತಿ ಆವಶ್ಯಕ. ಉಪವಾಸ–ದೀಕ್ಷಿತ ವ್ಯಕ್ತಿ ಏಕಾದಶಿಯ ಹಿಂದಿನ ದಿನ ರಾತ್ರಿಯ ಭೋಜನ, ಉಪವಾಸದ ಮಾರನೇ ದಿನ ರಾತ್ರಿಯ ಭೋಜನ ಹಾಗೂ ಉಪವಾಸದ ದಿನ ಹಾಗೂ ರಾತ್ರಿಯಲ್ಲಿ ಭೋಜನವನ್ನು ತ್ಯಜಿಸಬೇಕು. ಹರಿವಾಸರ (ಉಪವಾಸದ) ದಿನದಂದು ಬ್ರಹ್ಮ–ಹತ್ಯಾ ಇತ್ಯಾದಿ ಸಮಸ್ತ ಪಾಪಗಳು ಅನ್ನದಲ್ಲಿ ಪ್ರವೇಶಿಸಿರುತ್ತವೆ,

ಆದ್ದರಿಂದ ಈ ಸಮಯ ಐದು ಪದಾರ್ಥಗಳು (ಜೋಳ, ಗೋದಿ, ಬೇಳೆ, ಸಾಸಿವೆ, ಎಳ್ಳು, ಸೊಪ್ಪುಗಳು, ಇತ್ಯಾದಿ) ಭೋಜನ ಮಾಡುವುದರಿಂದ ಎಲ್ಲ ಪ್ರಕಾರದ ಪಾಪಗಳನ್ನು ಗ್ರಹಿಸುವಂತಾಗುತ್ತದೆ ಹಾಗೂ ಮಾತೃಹತ್ಯೆ, ಪಿತೃಹತ್ಯೆ, ಭ್ರಾತೃಹತ್ಯೆ ಮತ್ತು ಗುರುಹತ್ಯೆಯ ಪಾಪಿ ಎಂದು ಕರೆದು ಅವುಗಳ ಗಣನೆ ಮಾಡಲಾಗುತ್ತದೆ. ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿಗಳು (ತ್ರಿದಂಡಿ–ಸನ್ಯಾಸಿಗಳು) ಏಕಾದಶಿಯ ದಿನದಂದು ಭೋಜನವನ್ನು ಮಾಡುವುದರಿಂದ ಗೋಮಾಂಸವನ್ನು ಭಕ್ಷಿಸಿದಂತಹ ಪಾಪಕ್ಕೆ ಸಮಾನ. ಬ್ರಹ್ಮಹತ್ಯೆ, ಸುರಪಾನ, ಕಳ್ಳತನ ಮುಂತಾದವುಗಳಿಗೆ ಮುಕ್ತಿಯ ವಿಧಾನ ಉಂಟು, ಆದರೆ ಏಕಾದಶಿಯಂದು ಅನ್ನ ಭೋಜನ ಮಾಡಿದವನ ರಕ್ಷಣೆಗಾಗಿ ಯಾವುದೇ ವ್ಯವಸ್ಥೆ ಇಲ್ಲ. ಏಕಾದಶಿಯಂದು ಅನ್ನ ಗ್ರಹಿಸಿದಂತಹ ವ್ಯಕ್ತಿ ಪಿತೃಸಹಿತರಾಗಿ ನರಕಗಾಮಿಗಳಾಗುತ್ತಾರೆ. ಹರಿವಾಸರ ತಿಥಿಯಂದು ಭಜನಕ್ಕೆ ಯಾರನ್ನಾದರು ಆಹ್ವಾನಿಸಿದರೂ ಸಹ ಅನ್ಯಾಯ.

ಯಾವುದೇ ವಿಧವೇ ಸ್ತ್ರೀ ಏಕಾದಶಿಯ ದಿನದಂದು ಅನ್ನಾದಿಯನ್ನು ಗ್ರಹಿಸಿದರೆ, ಅವಳ ಎಲ್ಲ ಸುಕೃತಿಯೂ ನಷ್ಟವಾಗುತ್ತದೆ ಹಾಗೂ ಸರ್ವವರ್ಣದವರು, ಸರ್ವಾಶ್ರಮದವರು, ವಿಧವೆ, ಯತಿ, ಸತಿಗೂ ಸಹ 'ಅಂಧತಾಮಿಶ್ರ' ಎಂಬ ಹೆಸರಿನ ನರಕದ ದುರ್ಗತಿಯುಂಟಾಗುತ್ತದೆ. ಭಕ್ತಿಯುಕ್ತರಾಗಿ ಮಕ್ಕಳು–ಪತ್ನಿ ಮತ್ತು ಬಂಧುಗಳ ಸಮೇತರಾಗಿ ಎರಡು ಪಕ್ಷಗಳಲ್ಲೂ ಏಕಾದಶಿಯಂದು ಉಪವಾಸ ಮಾಡುವುದರಿಂದ ಭಗವದ್–ಭಕ್ತಿ ಮತ್ತು ಪರಮ ಪದ ಪ್ರಾಪ್ತವಾಗುತ್ತದೆ. ಘೋರ ಆಪತ್ತು ಅಥವಾ ಜನನ ಮತ್ತು ಮರಣಶುಚಿಗಳಲ್ಲೂ ಸಹ ಏಕಾದಶಿ ವ್ರತವನ್ನು ತ್ಯಾಗ ಮಾಡಬಾರದು. ಏಕಾದಶಿಯ ದಿನದಂದು ನೈಮಿತ್ತಿಕ ಶ್ರಾದ್ಧ ಬಂದರೆ ಅಂದು ಉಪವಾಸವನ್ನು ಆಚರಿಸಿ ದ್ವಾದಶಿಯಂದು ಶ್ರಾದ್ಧವನ್ನು ಮಾಡಬೇಕು. **ಉಪವಾಸದ ದಿನದಂದು ಎಂದಿಗೂ ಸಹ ಶ್ರಾದ್ಧವನ್ನು ಮಾಡಬಾರದು,** ಏಕೆಂದರೆ ಆ ದಿನದಂದು ದೇವತೆಗಳು ಮತ್ತು ಪಿತೃಗಳು ಅರ್ಪಿಸಿದ ಅನ್ನವನ್ನು ಸ್ವೀಕರಿಸುವುದಿಲ್ಲ. ಏಕಾದಶಿ ದಿನ ಶ್ರಾದ್ಧವನ್ನು ಮಾಡುವುದರಿಂದ ದಾತಾ, ಭೋಕ್ತಾ ಮತ್ತು ವಿಗತ ಈ ಮೂರು ಆತ್ಮಗಳು ನರಕಕ್ಕೆ ಹೋಗಬೇಕಾಗುತ್ತದೆ. ಎಂಟು ವರ್ಷದ ಆಯುವಿನಿಂದ ಎಂಬತ್ತು ವರ್ಷದ ಆಯುವಿನವರೆಗೂ ಶುಕ್ಲ ಹಾಗೂ ಕೃಷ್ಣ– ಎರಡು ಪಕ್ಷಗಳ ಏಕಾದಶಿಯಂದು ಉಪವಾಸ ಮಾಡುವುದು ಅಬಲೆ–ವೃದ್ಧ–ವನಿತೆ ಎಲ್ಲ ಮನುಷ್ಯರಿಗೂ ಕಡ್ಡಾಯವಾಗಿದೆ. ವೈಷ್ಣವ, ಶೈವ, ಸೌರ ಇತ್ಯಾದಿ ಎಲ್ಲ ಮನುಷ್ಯರಿಗೂ ಕರ್ತವ್ಯವಾಗಿದೆ. ವೈಷ್ಣವ, ಶೈವ, ಸೌರ ಇತ್ಯಾದಿ ಎಲ್ಲರಿಗೂ ಹರಿವಾಸರ–ವ್ರತ ಪಾಲನೆ ಮಾಡಬೇಕು. ಶಿವ ಪಾರ್ವತಿ ದೇವಿಗೆ ಹೀಗೆ ಹೇಳುತ್ತಾರೆ,– "ನನ್ನ ಭಕ್ತಿ–ಬಲದ ಆಶ್ರಯದಿಂದ ಹರಿವಾಸರದಲ್ಲಿ ಅನ್ನಾದಿ ಭೋಜನವನ್ನು ಮಾಡುವವರು ದುಷ್ಟ ಪಾತಕಿಗಳು ನನಗೆ ಅಪ್ರಿಯರು ಎಂದು ತಿಳಿದುಕೋ. ಪತಿ–ಪತ್ನಿ ಇಬ್ಬರೂ ಅಥವಾ ಪತ್ನಿ ಏನಾದರೂ ಪತಿಯ ಉದ್ದೇಶದಿಂದ ಏಕಾದಶಿ–ವ್ರತವನ್ನು ಪಾಲನೆ ಮಾಡಿದರೆ ಅದು ಸೌಗುಣ ಪುಣ್ಯದ ಭಾಗಿಯಾಗುತ್ತಾಳೆ. ಬಾಲಕ, ವೃದ್ಧ, ಆತುರ, ರೋಗ–ಗ್ರಸ್ತ, ಅಸಮರ್ಥ ವ್ಯಕ್ತಿ ರಾತ್ರಿಯಲ್ಲಿ ಮಾತ್ರ ಒಂದು ಬಾರಿ ಹಾಲು–ಫಲ–ಗೆಡ್ಡೆ ಸ್ವೀಕರಿಸಿ ಏಕಾದಶಿ–ತಿಥಿಯ ಪಾಲನೆ ಮಾಡುತ್ತಾರೆ."

ಶಿಶುವಿನ ರಕ್ಷಣೆಗಾಗಿ ತಾಯಿಯಂತೆ ಮತ್ತು ಕಾಯಿಲೆಗಳು ಗುಣವಾಗಲು

ಔಷಧಿಯಂತೆ ಎಲ್ಲ ಜೀವಿಗಳ ರಕ್ಷಣೆಗಾಗಿ ಏಕಾದಶಿ ತಿಥಿ ಆವಿರ್ಭೂತವಾಗಿದೆ. ನಾನಾ ಪ್ರಕಾರದ ದುಃಖಗಳಿಂದ ತುಂಬಿರುವ ಸಂಸಾರದಲ್ಲಿ ದುರ್ಲಭಕರವಾದ ಮನುಷ್ಯ ಜನ್ಮವನ್ನು ಪಡೆದು ಯಾರು ಏಕಾದಶಿ ವ್ರತಾನುಷ್ಠಾನ ಮಾಡುವರೋ, ಅವರು ಧನ್ಯರು, ಅವರು ಬುದ್ಧಿವಂತರು. ಏಕಾದಶಿ–ವ್ರತವನ್ನು ತೊರೆದು ಅನ್ಯ ವ್ರತಗಳನ್ನು ಮಾಡಿದರೆ ಕೈಯಿಗೆ ಸಿಕ್ಕ ಮಣಿಯನ್ನು ತೊರೆದು ಲೋಷ್ಟ್ರ (ಮಣ್ಣಿ)ಗಾಗಿ ಪ್ರಾರ್ಥನೆ ಮಾಡಿದಂತೆ. ಕೇವಲ ಏಕಾದಶಿಯಂದು ಮಾತ್ರ ಉಪವಾಸವನ್ನು ಆಚರಿಸಿ ಜನಾರ್ದನನ್ನು ಭಕ್ತಿಪೂರ್ವವಾಗಿ ಪೂಜೆಯನ್ನು ಮಾಡುವುದರಿಂದ ದುಃಖಪೂರ್ಣವಾದ ಸಂಸಾರದಿಂದ ಮುಕ್ತಿಯನ್ನು ಪ್ರಾಪ್ತಿಸಿಕೊಳ್ಳಬಹುದು. ಸಂಸಾರ ರೂಪಿ ಸರ್ಪದ ಮೂಲಕ ಕಚ್ಚಿಸಿಕೊಂಡ ಎಲ್ಲ ಪಾಪಿ ಮನುಷ್ಯರು ಏಕಾದಶಿ ಉಪವಾಸದ ಮೂಲಕವೇ ಪರಮ ಸುಖ–ಶಾಂತಿಯನ್ನು ಪ್ರಾಪ್ತಿಸಿಕೊಳ್ಳಬಲ್ಲರು. ಏಕಾದಶಿಯಂದು ಅನ್ನದ ಅಭಾವದಿಂದ ಉಪವಾಸವಿದ್ದರೂ ಅಥವಾ ರಾಜಗೃಹದಲ್ಲಿ ಬಂದಿತಾವಸ್ಥೆಯಲ್ಲಿ ಉಪವಾಸವಿದ್ದರೂ ಸಹ ಏಕಾದಶಿಯ ಸಮ್ಯಕ್ ಉಪವಾಸದ ಫಲ ಪ್ರಾಪ್ತವಾಗುತ್ತದೆ. ಗೋವಿಂದನ ಸ್ಮರಣೆ ಮತ್ತು ಏಕಾದಶಿಯಂದು ಉಪವಾಸ– ಈ ಎರಡೂ ಸಹ ನಿಃಸಂದೇಹವಾಗಿ ಮನುಷ್ಯನಿಗೆ ಪ್ರಾಯಶ್ಚಿತ್ತ ಸ್ವರೂಪವಾದದ್ದು ಮತ್ತು ಸಂಸಾರದಿಂದ ಉದ್ಧಾರ ಮಾಡುವಂತಹದ್ದು. ಯಾರು ಸಮಸ್ತ ಸುಖ–ಧರ್ಮ–ಗುಣಗಳ ಆಶ್ರಯನಾದ ಜಗತ್ಪತಿಗೆ ಅತ್ಯಂತ ಪ್ರಿಯ ಹಾಗೂ ಎಲ್ಲ ಧರ್ಮಗಳಲ್ಲಿ ಶ್ರೇಷ್ಠವಾದ ಏಕಾದಶಿ–ವ್ರತವನ್ನು ಶ್ರದ್ಧಾಪೂರ್ವಕವಾಗಿ ಆಚರಿಸುವರೋ, ಅವರಿಗೆ ವೈಕುಂಠ ಗತಿಯು ಲಭಿಸುತ್ತದೆ. ಏಕಾದಶಿ–ವ್ರತಕಥೆಯನ್ನು ಶ್ರವಣ ಮಾಡಿದರೆ, ಇದರ ಅನುಷ್ಠಾನ ಮಾಡಿದರೆ, ಇದರ ಅನುಷ್ಠಾನಕ್ಕೆ ಪ್ರೇರಣೆ ನೀಡಿದರೆ ಅಥವಾ ವ್ರತ ಪಾಲನೆಗೆ ಮನುಷ್ಯರ ಹೃದಯದಲ್ಲಿ ಶ್ರದ್ಧೆಯನ್ನು ಉತ್ಪನ್ನ ಮಾಡಿದರೆ ಎಲ್ಲ ಪಾಪಗಳಿಂದ ವಿಮುಕ್ತರಾಗುತ್ತಾರೆ ಮತ್ತು ಅತಿ ಉತ್ತಮ ಗತಿಯನ್ನು ಪ್ರಾಪ್ತಿಸಿಕೊಳ್ಳುತ್ತಾರೆ. ಹರಿವಾಸರವನ್ನು ಬಿಟ್ಟು ದಾನ, ತಪಸ್ಸು, ತೀರ್ಥ–ಸ್ನಾನ ಅಥವಾ ಅನ್ಯ ಯಾವುದೇ ಪ್ರಕಾರದ ಪುಣ್ಯವೂ ಮುಕ್ತಿಗೆ ಕಾರಣವಾಗಲಾರದು. ಏಕಾದಶಿ–ವ್ರತ ಪಾರಾಯಣ ವ್ಯಕ್ತಿ ಸರ್ವತ್ರ ಪೂಜ್ಯನಾಗಿರುತ್ತಾನೆ; ರೋಗ, ಉಪಸರ್ಗ, ದಾಹ, ಗ್ಲಾನಿ ಮತ್ತು ಕಾತುರತೆಗಳಿಂದ ಅವನು ಭಯಪಡುವ ಸಾಧ್ಯತೆಗಳು ಇರುವುದಿಲ್ಲ ಹಾಗೂ ಸರ್ವದಾ ಅವನ ಮನಸ್ಸಿನಲ್ಲಿ ಶ್ರೀಹರಿಯ ಸ್ಮರಣೆ ಇಲ್ಲದೇ ಇರುವುದಿಲ್ಲ; ಈ ಜನರಿಗೆ ನಿತ್ಯ ಹರಿಕಥೆಯಲ್ಲಿ ರುಚಿ ಮತ್ತು ನಿತ್ಯ–ಧರ್ಮದಲ್ಲಿ ಮತಿ ಇರುತ್ತದೆ ಹಾಗೂ ಶ್ರೀಕೃಷ್ಣನಲ್ಲಿ ಅತಿಶಯವಾದ ಪರಿಶುದ್ಧ ಭಕ್ತಿಯು ಪ್ರಾಪ್ತವಾಗುತ್ತದೆ. ಏಕಾದಶಿ–ಪುಣ್ಯ–ಸ್ವರೂಪಿಣಿ, ಸರ್ವಪಾಪ–ವಿನಾಶಿಣಿ, ವಿಷ್ಣು–ಭಕ್ತಿ ಪ್ರಕಾಶಿನಿ ಮತ್ತು ಪರಮಾರ್ಥ–ಗತಿ–ಪ್ರದಾಯಿನಿ. ಜಗದೀಶ್ವರನು ಏಕಾದಶಿಯಂದು ಮೂರ್ತಿಮಾನನಾಗಿ ವಿರಾಜಿಸುತ್ತಾನೆ. ಯಾವ ವಿಷ್ಣುಮಯೀ–ಶಕ್ತಿ ಅನಂತಸ್ವರೂಪ ಮತ್ತು ಸಮಸ್ತ ಜಗತ್ತಿನಲ್ಲಿ ವ್ಯಾಪ್ತವಾಗಿ ಸ್ಥಿತವಾಗಿರುವುದೋ, ಅದೇ ಎಲ್ಲ ಪ್ರಕಾರದ ಮಂಗಳವನ್ನು ಪ್ರಸಾದಿಸುವಂತಹ ಏಕಾದಶಿ–ತಿಥಿ.

ಅನುಣೋದಯ–ವಿದ್ಧಾ ಅಥವಾ ದಶಮಿ–ವಿದ್ಧಾ ಏಕಾದಶಿಯನ್ನು ವಿಶೇಷವಾಗಿ ತ್ಯಾಗಮಾಡಿ, ಶುದ್ಧ ಏಕಾದಶಿ ವ್ರತವನ್ನು ಪಾಲನೆ ಮಾಡುವುದು ಕರ್ತವ್ಯ. ಮೂರು

ಲೋಕಗಳಲ್ಲಿ ಎಷ್ಟು ಪಾಪಗಳು ನೆಲಸಿರುವುದೋ, ದಶಮಿ–ಸಂಯುಕ್ತ ಏಕಾದಶಿಯಂದು ಆ ಎಲ್ಲ ಪಾಪಗಳ ಸ್ಥಾನ ಎಂದು ಹೇಳಲಾಗಿದೆ. ರಾಕ್ಷಸರು ಮತ್ತು ಅಸುರರು ದಶಮಿ–ಸಂಯುಕ್ತ ಏಕಾದಶಿಯ ಆಶ್ರಯವನ್ನು ಪಡೆಯುತ್ತಾರೆ, ಮತ್ತು ದ್ವಾದಶಿ–ಯುಕ್ತ ಏಕಾದಶಿಯಂದು ಉಪವಾಸವಿರುವಂತಹ ವ್ಯಕ್ತಿಗೆ ಭಗವಂತನು ವಾಂಛಿತ ಫಲವನ್ನು ಪ್ರಸಾದಿಸುತ್ತಾನೆ. ದಶಮಿ–ವಿದ್ಧಾ ಏಕಾದಶಿಯನ್ನು ಹರಿವಾಸರ ಅಥವಾ ಹರಿದಿನ ಎಂದು ಭಾವಿಸಲಾಗುವುದಿಲ್ಲ. ಇಲ್ಲಿಯವರೆಗು ದ್ವಾದಶಿಯಂದು ಉಪವಾಸ ಮತ್ತು ತ್ರಯೋದಶಿಯಂದು ಪಾರಣೆ ಮಾಡುವ ವಿಧಿಯುಂಟು. ಜಗದ್ಗುರು ಶ್ರೀಲ ಭಕ್ತಿವಿನೋದ ಠಾಕುರರು ಹೇಳಿದ್ದಾರೆ,– **"ಮಾಧವ–ತಿಥಿ ಭಕ್ತಿ ಜನನೀ, ಯತನೇ ಪಾಲನ ಕರಿ।"** 'ಯತನೇ ಪಾಲನ ಕರಿ', ಅರ್ಥಾತ್ ಇಲ್ಲಿ 'ವಿದ್ಧಾ ದಿನವನ್ನು ಪರಿತ್ಯಾಗ ಮಾಡಿ, ವ್ರತವನ್ನು ಆಚರಿಸಲು ಉಪದೇಶವನ್ನು ನೀಡಲಾಗಿದೆ.' ಗ್ರಂಥದ ಅಂತ್ಯದಲ್ಲಿ ವಿದ್ಧಾವಿನ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಏಕಾದಶಿಯು ವಿಭಿನ್ನ ಹೆಸರುಗಳಿಂದ ಕರೆಯಲ್ಪಡುವುದು ಹಾಗೂ ಅಷ್ಟ–ಮಹಾದ್ವಾದಶಿಗಳೂ ಸಹ ಬೇರೆ–ಬೇರೆ ಹಸರುಗಳಿಂದ ಪ್ರಸಿದ್ಧವಾಗಿದೆ. ಈ ಎಲ್ಲ ವಿಷಯಗಳನ್ನು ಕುರಿತು ಈ ಗ್ರಂಥದಲ್ಲಿ ಸಂಪೂರ್ಣ ಇತಿಹಾಸ ಮತ್ತು ಉದಾಹರಣೆಗಳ ಸಹಿತವಾಗಿ ವಿಶ್ಲೇಷಣೆ ಮಾಡಲಾಗಿದೆ. ಈ ಗ್ರಂಥವು ಏಕಾದಶಿ–ವ್ರತವನ್ನು ಪಾಲನೆ ಮಾಡುವಂತಹವರಿಗೆ ಯಥೇಷ್ಟ ಸಹಾಯಕವಾಗುವುದು, ಇದರಲ್ಲಿ ಸಂದೇಹವಿಲ್ಲ. ಈ ಸಂಸ್ಕರಣದ ಪರಿಶಿಷ್ಟ ಅಂಶದಲ್ಲಿ "ಅಷ್ಟ–ಮಹಾದ್ವಾದಶಿ"ಯ ನಿರೂಪಣೆ, ವ್ರತ–ಕೃತ್ಯ ಸೂಚಕ ಕೀರ್ತನೆ, ಮಹಿಮೆ ಇತ್ಯಾದಿ ಸಂಯೋಜನೆ ಹಾಗೂ ಗ್ರಂಥದ ಪೂರ್ವನಿಬಂಧನೆಯಲ್ಲಿ ಅಧಿಕವಾಗಿ ಜ್ಞಾನದ ಪಥವನ್ನು ಪ್ರಶಸ್ತಗೊಳಿಸಲಾಗಿದೆ. ವ್ರತಪಾಲನೆ ಮಾಡುವ ಮತ್ತು ಓದುಗರ ಹಾಗೂ ಶ್ರೋತೃವರ್ಗದ ಮೂಲಕ ಭಗವತ್–ಭಕ್ತಿಯನ್ನು ಪಡೆದರೆ ನಮ್ಮೆಲ್ಲರ ಸೇವಾ–ಪ್ರಯತ್ನಗಳು ಸಾರ್ಥಕವಾಗುವುದು. ಇನ್ನು, ಅಸಾವಧಾನವಶದಿಂದ ಕೆಲವು ತಪ್ಪುಗಳು ಕಂಡು ಬಂದಲ್ಲಿ ಓದುಗರು ನಿಜಗುಣಗಳಿಂದ ಸಂಶೋಧನೆಯನ್ನು ಮಾಡಿರಿ, ಇದೇ ನಮ್ಮ ವಿಜ್ಞಾಪನೆ. ಅಲಮತಿವಿಸ್ತರೇಣ–

ಪಾಪಾಂಕುಶ ಏಕಾದಶಿ
೨೬ ಪದ್ಮನಾಭ, ೫೧೮ ಗೌರಬ್ದ
೭ ಕಾರ್ತಿಕ. ೧೪೧೧ ಬಂಗಾಬ್ದ.
೨೪–೧೦–೨೦೦೪

ತ್ರಿದಂಡಿಭಿಕ್ಷು
ಶ್ರೀಭಕ್ತಿವೇದಾಂತ ವಾಮನ

ಶ್ರೀಮನ್ಮಧ್ವಾಚಾರ್ಯರ ಏಕಾದಶಿಯ ಸಂಬಂಧದಲ್ಲಿ ವಿಚಾರ

ಶ್ವದೃತೋ ಪಂಚಗವ್ಯಂಚ ದಶಮ್ಯಾ ದುಷಿತಂ ತ್ಯಜೇತ್ ।
ಏಕಾದಶೀಂ ದ್ವಿಜಶ್ರೇಷ್ಠಾಃ ಪಕ್ಷಯೋರುಭಯೋರಪಿ ॥

(ಕೃಷ್ಣಾಮೃತಮಹಾರ್ಣವಮ್ ೧೨೯)

ಶ್ರೇಷ್ಠ ಬ್ರಾಹ್ಮಣರು ನಾಯಿಯ ಚರ್ಮದಿಂದ ಮಾಡಿದ ಪಾತ್ರೆಯಲ್ಲಿಟ್ಟ ಪಂಚಗವ್ಯವನ್ನು ತ್ಯಾಗಮಾಡಿದಂತೆ ಎರಡು ಪಕ್ಷಗಳ ದಶಮಿ ವಿದ್ಧಾ ಏಕಾದಶಿಯನ್ನು ಪರಿತ್ಯಾಗ ಮಾಡುವರು.

ಅಥವಾ ಮೋಹನಾರ್ಥಾಯ ಮೋಹಿನ್ಯಾ ಭಗವಾನ್ ಹರಿಃ ।
ಅರ್ಥಿತಃ ಕಾರಯಾಮಾಸ ವ್ಯಾಸರೂಪೀ ಜನಾರ್ದನಃ ॥
ಧನದಾರ್ಚಾವಿವೃಧ್ಯಾರ್ಥಂ ಮಹಾವಿತ್ತಲಯಸ್ಯ ಚ ।
ಅಸುರಾಣಾಂ ಮೋಹನಾರ್ಥಂ ಪಾಷಣ್ಡಾನಾಂ ವಿವೃದ್ಧಯೇ ॥
ಆತ್ಮಸ್ವರೂಪಾವಿಜ್ಞಸ್ಯೈ ಸ್ವಲೋಕಾಪ್ರಾಪ್ತಯೇ ತಥಾ ।
ಏವಂ ವಿದ್ಧಾಂ ಪರಿತ್ಯಜ್ಯ ದ್ವಾದಶ್ಯಾಮುಪವಾಸಯೇತ್ ॥

(ಕೃಷ್ಣಾಮೃತಮಹಾರ್ಣವಮ್ ೧೫೦–೧೫೨)

ಅಥವಾ ವ್ಯಾಸರೂಪಿ ಭಗವಾನ್ ಜನಾರ್ದನ ಶ್ರೀಹರಿಯು ಮೋಹಿನಿಯ ಮೂಲಕ ಪ್ರಾರ್ಥನೆ ಮಾಡಿದಾಗ ಕಾಮಿತ ಜನರನ್ನು ಮೋಹಿಸಲೆಂದು, ಧನದ ಆಕಾಂಕ್ಷೆಯಿಂದ ಅರ್ಚನೆಯ ವೃದ್ಧಿಗಾಗಿ, ಪರಮಾರ್ಥವನ್ನು ಲುಪ್ತಗೊಳಿಸಲೆಂದು, ಅಸುರಜನ ಮೋಹನಕ್ಕಾಗಿ, ಪಾಷಂಡಿ ಜನರ ವೃದ್ಧಿಗಾಗಿ, ತನ್ನ ಆತ್ಮಸ್ವರೂಪವನ್ನ ತಿಳಿಯಬಾರದೆಂಬ ಅಭಿಪ್ರಾಯದಿಂದ ಮತ್ತು ಯಾವುದರಿಂದ ವಿಷ್ಣು–ಲೋಕದ ಪ್ರಾಪ್ತಿ ಆಗುವುದಿಲ್ಲ– ಆದುದರಿಂದ ಇಂತಹ ವಿಧಾನವನ್ನು ಮಾಡಿಸಿದರು. ಹೀಗಾಗಿ ಈ ಪ್ರಕಾರದ ವಿದ್ಧಾ ಏಕಾದಶಿಯನ್ನು ಪರಿತ್ಯಜಿಸಿ ದ್ವಾದಶಿಯಂದು ಉಪವಾಸ ಮಾಡಬೇಕು.

ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಮ್ ।
ವರಂ ಹತ್ಯಾ ಸುರಾಪಾನಮೇಕಾದಶ್ಯನ್ನಭಕ್ಷಣಾತ್ ॥

(ಕೃಷ್ಣಾಮೃತಮಹಾರ್ಣವಮ್ ೧೮೦)

ಏಕಾದಶಿಯಂದು ಅನ್ನವನ್ನು ಭಕ್ಷಿಸುವುದು ಸ್ವ–ಮಾತೃಹತ್ಯ, ಗೋಮಾಂಸ–ಭಕ್ಷಣೆ, ಸುರಪಾನ ಇತ್ಯಾದಿ ಕಾರ್ಯಗಳಿಗಿಂತಲೂ ಅಧಿಕ ನಿಂದನೀಯವಾದದ್ದು.

ಏಕಾದಶ್ಯಾಂತು ಭುಂಜನಾಃ ಪಕ್ಷಯೋರುಭಯೋರಪಿ।
ವರಂ ಸ್ವಮಾತೃಗಮನಂ ವರಂ ಗೋಮಾಂಸ ಭಕ್ಷಣಂ ।
ವರಂ ಹತ್ಯಾ ಸುರಾಪಾನ ಸುರಾಪಾನಮೇಕಾದಶ್ಯನ್ನ ಭೋಜನಾತ್ ।

ಏಕಾದಶೀ ದಿನೇ ಪುಣ್ಯೇ ಭುಂಜತೇ ಯೇ ನರಾಧಮಾಃ ।
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ।
ಪೃಥಿವ್ಯಾಂ ಯಾನಿ ಪಾಪಾನಿ ಬ್ರಹ್ಮಹತ್ಯಾದುಕಾನಿ ಚ ।
ಅನ್ನಮಾಶ್ರಿತ್ಯ ತಿಷ್ಯಂತಿ ಸಂಪ್ರಾಪ್ತೇ ಹರಿವಾಸರೇ ।

(ಕೃಷ್ಣಾಮೃತಮಹಾರ್ಣವಮ್ ೨೧೨–೨೧೫)

ಶುಕ್ಲಪಕ್ಷದ ಅಥವಾ ಕೃಷ್ಣಪಕ್ಷದ ಏಕಾದಶಿಯಂದು ಭೋಜನ ಮಾಡಿದರೆ ಮಾತೃಗಮನ, ಗೋಮಾಂಸಭಕ್ಷಣ, ಸುರಾಪಾನಾದಿಗಳನ್ನು ಮಾಡಿದ ಪಾಪಕ್ಕಿಂತ ಅಧಿಕ ಪಾಪ ತಟ್ಟುವುದು. ಹರಿದಿನದಲ್ಲಿ ಉಂಡವರ ಮುಖವನ್ನು ಕಂಡರೆ ತಕ್ಷಣ ಸೂರ್ಯದೇವರನ್ನು ಕಂಡು ಆ ಪಾಪವನ್ನು ಪರಿಹಾರಮಾಡಿಕೊಳ್ಳಬೇಕು. ಭೂಲೋಕದಲ್ಲಿ ಬ್ರಹ್ಮ ಹತ್ಯ ಮೊದಲಾದ ಎಷ್ಟು ಪಾಪಗಳುಂಟೋ ಅವೆಲ್ಲವೂ ಏಕಾದಶಿಯಂದು ಉಂಡ ವ್ಯಕ್ತಿಯಲ್ಲಿ ಏಕೀಭವಿಸುವುವು – ಎಂಬ ವ್ಯಾಖ್ಯಾನವನ್ನು ಶ್ರೀಮದಾನಂದತೀರ್ಥರು ಕೃಷ್ಣಾಮೃತಮಹಾರ್ಣವದಲ್ಲಿ ಉದಾಹರಿಸಿದ್ದಾರೆ. ಇದನ್ನೇ ಶ್ರೀಪುರಂದರದಾಸರು ಇನ್ನೂ ಹಿಗ್ಗಿಸಿ, ನಾನಾ ಪುರಾಣಗಳಲ್ಲಿ ಬಂದ ಶ್ರೀವೇದವ್ಯಾಸದೇವರು, ರುಕ್ಮಾಂಗದ ಹಾಗೂ ರುದ್ರದೇವರ ವಚನಗಳನ್ನು ಆರಿಸಿ ತಮ್ಮ ಕೀರ್ತನೆಯಲ್ಲಿ ವರ್ಣಿಸಿದ್ದಾರೆ (ಏಕಾದಶಿಯನ್ನು ಕುರಿತು ಹರಿದಾಸರ ಪದಗಳು ಪುಟ–೭೨ರಲ್ಲಿ ವಿವರಣೆ ನೀಡಲಾಗಿದೆ). ಏಕಾದಶಿಯಂದು (ಹರಿದಿನ) ಉಂಡವರಿಗೆ ಘೋರನರಕ. ಅಂದು ಉಂಡವರನ್ನು ಯಮಲೋಕದಲ್ಲಿ ಹಂದಿಗಳನ್ನು ಸುಡುವಂತೆ ಸುಡುತ್ತಾರೆ. ಹರಿದಿನದಂದು ಅನ್ನಪಾನ ಸತಿಸಂಗ ಗೈದವರನ್ನು ಯಮನವರು ಬೆನ್ನಲ್ಲಿ ಕರುಳುಗಿಯುತ್ತಾರೆ. ಹರಿದಿನದಂದು ಜಾಗರಣೆ ಗೈದರೆ ಮೊದಲ ಜಾವಕ್ಕೆ ನಾಲ್ಕು ಸಾವಿರ ಯಜ್ಞಫಲ, ಕೊನೆಯ ಜಾವದ ಜಾಗರಣೆಗೆ ದೊರಕುವ ಫಲಕ್ಕೆ ಮಿತಿ ಇಲ್ಲಾ ! ಅಂದು ನಿದ್ರಿಸಿದವನನ್ನು ಯಮದೂತರು ಕಾವಲಿಯಲ್ಲಿ ಹಾಕಿ ಹುರಿಸುತ್ತಾರೆ. ಏಕಾದಶಿಯ ದಿನ ಉಪವಾಸ, ಜಾಗರಣೆ, ಕ್ಷೀರಾಬ್ಧಿಶಯನನ ಪೂಜೆ ಮಾಡಿದವರಿಗೆ ಶ್ರೀ ಪುರಂದರವಿಠಲನು ಅಪಾರ ಫಲವನ್ನೀಯುತ್ತಾನೆ.

ಏಕಾದಶಿ ಕಥೆ

ಏಕ ದಿನ ಮಾತಾರ ಪದೇ ಕರಿಯಾ ಪ್ರಣಾಮ ।
ಪ್ರಭು ಕಹೇ, –ಮಾತಾ ಮೋಹೇ ದೇಹ ಏಕ ದಾನ ॥
ಮಾತಾ ಬಲೇ, –ತಾಈ ದಿಬ, ಯಾ ತುಮಿ ಮಾಗಿಬೇ ।
ಪ್ರಭು ಕಹೇ, – ಏಕಾದಶೀತೆ ಅನ್ನ ನಾ ಖಾಇಬೇ ॥
ಶಚೀ ಕಹೇ, – ನಾ ಖಾಇಬ, ಭಾಲ – ಇ ಕಹಿಲಾ ।
ಸೇಈ ಹೈತೇ ಏಕಾದಶೀ ಕರಿತೇ ಲಾಗಿಲಾ॥

(ಚೈತನ್ಯ ಚರಿತಾಮೃತ ಆದಿ–ಲೀಲಾ ೧೫/೮,೯,೧೦)

ಒಂದು ದಿನ ಶ್ರೀಗೌರಸುಂದರರು ಶಚಿ ಮಾತೆಯ ಚರಣಗಳಲ್ಲಿ ಪ್ರಣಾಮವನ್ನು ಮಾಡುತ್ತ– "ಅಮ್ಮ ನೀವು ನನಗೆ ಒಂದು ದಾನವನ್ನು ನೀಡುವೆಯಾ?" ಶಚಿ ಮಾತೆ – "ನೀನು ಏನು ಕೇಳಿದರೂ ಕೊಡುತ್ತೇನೆ," ಎಂದಳು. ಪ್ರಭುಗಳು ಹೇಳಿದರು– "ಅಮ್ಮ ನೀವು ಏಕಾದಶಿಯ ದಿನದಂದು ಅನ್ನವನ್ನು ಸೇವಿಸಬಾರದು." ಮಾತೆ ಹೇಳಿದಳು– "ನೀನು ಸರಿಯಾಗಿ ಹೇಳಿದೆ, ನಾನು ಆ ದಿನ ಅನ್ನವನ್ನು ತಿನ್ನುವುದಿಲ್ಲ." ಆ ದಿನದ ನಂತರ ಶಚಿಮಾತೆ ಏಕಾದಶಿಯ ಪಾಲನೆ ಮಾಡತೊಡಗಿದರು.

ತಮ್ಮ ಮಾತೆಯನ್ನು ಉದ್ದೇಶಿಸಿ ಶ್ರೀ ಚೈತನ್ಯ ಮಹಾಪ್ರಭುಗಳು ಎಲ್ಲ ಜೀವರಿಗೂ ಸಹ ಏಕಾದಶಿ ವ್ರತವನ್ನು ಪಾಲನೆ ಮಾಡಲು ನಿರ್ದೇಶಿಸಿದರು. ಶ್ರೀ ಹರಿಭಕ್ತಿ ವಿಲಾಸದಲ್ಲಿ (೧೨.೮) ಹೀಗೆ ಹೇಳಿದೆ– *ಏಕಾದಶಿ ವ್ರತಂ ನಾಮ ಸರ್ವಾಭೀಷ್ಟ–ಪ್ರದಂ ನೃಣಾಂ । ಕರ್ತವ್ಯಂ ಸರ್ವಥಾ ವಿಪ್ರ ವಿಷ್ಣು–ಪ್ರೀತಿ–ಕರಂ ಯತಃ ।* ಅರ್ಥಾತ್ ಏಕಾದಶಿ ವ್ರತವನ್ನು ಮಾಡುವುದರಿಂದ ಶ್ರೀವಿಷ್ಣುವಿನಲ್ಲಿ ಪ್ರೀತಿಯುಂಟಾಗುತ್ತದೆ ಆದ್ದರಿಂದ ಇದಕ್ಕೆ ಮತ್ತೊಂದು ಹೆಸರು 'ಹರಿವಾಸರ' ಎನ್ನಲಾಗಿದೆ. ಅನ್ಯ ಇತರ ಸಕಾಮ ವ್ರತವನ್ನು ಮಾಡುವುದರಿಂದ ಅದರ ಫಲವೇನೋ ಪ್ರಾಪ್ತವಾಗುತ್ತದೆ ಆದರೆ ಮಾಡದಿದ್ದರೆ ಯಾವುದೇ ಅಪರಾಧ ಅಥವಾ ಪಾಪವೂ ಸಹ ಉಂಟಾಗುವುದಿಲ್ಲ. ಏಕಾದಶಿ ವ್ರತದ ಫಲವು ಶ್ರೀಕೃಷ್ಣಭಕ್ತಿಯನ್ನು ಪ್ರಸಾದಿಸುತ್ತದೆ. ಆದ್ದರಿಂದ ಏಕಾದಶಿ ಮಾಡದಿದ್ದರೆ ಅಪರಾಧವೂ ಸಹ ಆಗುತ್ತದೆ ಮತ್ತು ಅದರೊಂದಿಗೆ ವ್ರತದ ಫಲ ಶ್ರೀಕೃಷ್ಣಭಕ್ತಿಯು ಹೃದಯದಲ್ಲಿ ಆವಿರ್ಭವಿಸುವುದಿಲ್ಲ.

ಶ್ರೀಲ ಭಕ್ತಿವಿನೋದ ಠಾಕುರರು ಹೀಗೆ ಹೇಳಿದ್ದಾರೆ–

ಮಾಧವ ತಿಥಿ ಭಕ್ತಿ ಜನನೀ ಯತನೇ ಪಾಲನ ಕರಿ ।
ಕೃಷ್ಣ ವಸತಿ, ವಸತಿ ಬಲಿ ಪರಮ ಆದರೆ ವರಿ ॥

ಅರ್ಥಾತ್ ಮಾಧವ ತಿಥಿ (ಏಕಾದಶಿ) ಭಕ್ತಿಗೆ ಜನ್ಮ ನೀಡುವಂತವಳು, ಈ ತಿಥಿಯಂದು ಶ್ರೀಕೃಷ್ಣನು ಸಾಕ್ಷಾತ್ ನಿವಾಸಮಾಡುತ್ತಾನೆ, ಹೀಗೆ ಅರಿತುಕೊಂಡು ನಾನು ಪರಮ ಗೌರವಪೂರ್ವಕವಾಗಿ ಈ ತಿಥಿಯನ್ನು ಆರಿಸಿಕೊಂಡು ಪ್ರಯತ್ನಪೂರ್ವಕವಾಗಿ ಇದನ್ನು ಪಾಲನೆ ಮಾಡುತ್ತೇನೆ.

"ಶ್ರೀಕೃಷ್ಣನಿಗೆ ಏಕಾದಶಿ ತಿಥಿ ಜನ್ಮಾಷ್ಟಮಿಗಿಂತಲೂ ಶ್ರೇಷ್ಠವಾದದ್ದು. ಪರಮ

ಕರುಣಾಮಯಿ ಪರಮೇಶ್ವರ ಶ್ರೀಕೃಷ್ಣ ಸ್ವಯಂ ಮಾಧವ ತಿಥಿ ಅರ್ಥಾತ್ ಏಕಾದಶಿಯ ಸ್ವರೂಪದಲ್ಲಿ ಮೂರ್ತಿಮಾನನಾಗಿದ್ದು ಈ ಜಗತ್ತಿನಲ್ಲಿ ನೆಲಸಿದ್ದಾನೆ. ಅನಂತ ಸ್ವರೂಪ ವಿಷ್ಣುಮಯೀ ಶಕ್ತಿಯು ಸಮಸ್ತ ಜೀವರಿಗೆ ಎಲ್ಲ ಪ್ರಕಾರದ ಮಂಗಳ ವಿಧಾನ ಮಾಡುವ ಉದ್ದೇಶದಿಂದ ಪರಮಶುಭ ಏಕಾದಶಿ ತಿಥಿಯ ರೂಪದಲ್ಲಿ ಪ್ರಕಟಿತವಾಗಿದೆ."

(ಶ್ರೀಲ ಗುರುದೇವರ ಪ್ರವಚನೆಯಿಂದ ಸಂಗ್ರಹಿತ)

ಶ್ರೀ ಭಗವಂತನಲ್ಲಿ ಪ್ರೇಮಭಕ್ತಿಯನ್ನು ಪ್ರಾಪ್ತಿಸಿಕೊಳ್ಳುವುದೇ ಏಕಾದಶಿ ವ್ರತೋಪವಾಸದ ವಾಸ್ತವಿಕ ಉದ್ದೇಶ, ಹೀಗಾಗಿ–

"ಶುದ್ಧ ಭಕ್ತರ ಸಂಗದಲ್ಲಿ ಈ ವ್ರತವನ್ನು ಆಚರಿಸುವುದರಿಂದ ಧರ್ಮ–ಅರ್ಥ–ಕಾಮ–ಮೋಕ್ಷ ಎಂಬ ಈ ಚತುರ್ ವರ್ಗದ ತುಚ್ಛ ಬುದ್ಧಿಯು ಜಾಗೃತವಾಗಿ ಶ್ರೀಕೃಷ್ಣನಲ್ಲಿ ಶ್ರವಣಾದಿ ಪ್ರೇಮಲಕ್ಷಣಾ–ವಿಶುದ್ಧ ಭಕ್ತಿಯು ಪ್ರಾಪ್ತವಾಗುತ್ತದೆ.

(ಸ್ಕಂದ ಪುರಾಣ)

"ಸಮಸ್ತ ಕಾಮನೆಗಳನ್ನು ಪೂರ್ಣ ಮಾಡುವಂತಹ ಏಕಾದಶಿ ವ್ರತವು ಕೇವಲ ಶ್ರೀಕೃಷ್ಣನ ಪ್ರೀತಿಗಾಗಿ ಮಾತ್ರ ಆಚರಿಸುವುದು ಕರ್ತವ್ಯ."

(ಶ್ರೀಹರಿಭಕ್ತಿವಿಲಾಸ ೧೨–೮)

ಏಕಾದಶಿ ಪಾಲನಕಾರಿ ಕಥೆಗಳು

ಶ್ರೀಮದ್ ಭಾಗವತದಲ್ಲಿ ಹೀಗೆ ವರ್ಣನೆ ಇದೆ, ಶ್ರೀಕೃಷ್ಣನ ತಂದೆ ಶ್ರೀ ನಂದ ಮಹಾರಾಜರು ಏಕಾದಶಿಯ ದಿನದಂದು ನಿರಾಹಾರರಾಗಿದ್ದು ವ್ರತವನ್ನು ಪಾಲಿಸುತ್ತಿದ್ದರು.

ಏಕಾದಶ್ಯಾಂ ನಿರಾಹಾರಃ ಸಮಭ್ಯಾರ್ಚ್ಯ ಜನಾರ್ದನಮ್ ।
ಸ್ನಾತುಂ ನಂದಸ್ತು ಕಾಲಿಂದ್ಯಾಂ ದ್ವಾದಶ್ಯಾಂ ಜಲಮಾವಿಶತ್ ॥

(ಶ್ರೀಮದ್ಭಾಗವತ ೧೦.೧೮.೧)

ಅನುವಾದ– ಶ್ರೀಶುಕದೇವರು ಹೇಳಿದರು– ಪರೀಕ್ಷಿತ್! ನಂದ ಮಹಾರಾಜರು ಕಾರ್ತಿಕ ಶುಕ್ಲ ಪಕ್ಷದ ಏಕಾದಶಿಯ ಉಪವಾಸವನ್ನು ಮಾಡಿ ಭಗವಾನ್ ಜನಾರ್ದನನ ಪೂಜೆಯನ್ನು ಮಾಡಿದರು ಹಾಗೂ ದ್ವಾದಶಿ ತಿಥಿಯಂದು ಸ್ನಾನ ಮಾಡಲು ಯಮುನಾ–ನದಿಯ ಜಲದಲ್ಲಿ ಪ್ರವೇಶಿಸಿದರು.

ಅಂಬರೀಷ ಮಹಾರಾಜರ ಕಥೆ

ಶ್ರೀಮದ್ಭಾಗವತ ನವಮ ಸ್ಕಂಧದಲ್ಲಿ ಶುದ್ಧಭಕ್ತ ಶ್ರೀ ಅಂಬರೀಷ ಮಹಾರಾಜರ ದೃಢತಾಪೂರ್ವಕ ಏಕಾದಶಿಯಂದು ನಿರಾಹಾರ ವ್ರತ ಪಾಲನೆ ಮತ್ತು ಸಮಯಾನುಸಾರವಾಗಿ ಪಾರಣೆ ಮಾಡುವ ಕಥೆಯ ಪ್ರಸಂಗದ ವರ್ಣನೆ– ಏಕಾದಶಿ ವ್ರತ ಮಾಡುವ ಪ್ರಭಾವದಿಂದ ಎಂದಿಗೂ ಸಹ ಪರಿಹಾರ ರಹಿತವಾದ ಬ್ರಹ್ಮಶಾಪವು ಮಹಾರಾಜ ಅಂಬರೀಷನ ಸ್ಪರ್ಶವನ್ನು ಸಹ ಮಾಡಲಾಗಲಿಲ್ಲ.

ಮಹಾರಾಜ ಅಂಬರೀಷ ಬಹಳ ಭಾಗ್ಯವಂತನಾಗಿದ್ದ. ಅವನು ಭಗವಂತನ ದೊಡ್ಡ ಪ್ರೇಮಿ ಹಾಗೂ ಉದಾರ ಧರ್ಮಾತ್ಮನಾಗಿದ್ದ. ಪೃಥ್ವಿಗೆ ಸಾರ್ವಭೌಮ ಸಾಮ್ರಾಟನಾಗಿದ್ದರೂ

ಸಹ ಅವನಿಗೆ ತನ್ನ ಸಂಪತ್ತು ಐಶ್ವರ್ಯಾದಿಗಳಲ್ಲಿ ಆಸಕ್ತಿ ಇರಲಿಲ್ಲ. ಅವನ ರತಿ ಶ್ರೀಕೃಷ್ಣ ಮತ್ತು ಅವನ ಪ್ರೇಮ ಭಕ್ತರಲ್ಲಿ ಇದ್ದಿತು.

ಅವನು ತನ್ನ ಮನಸ್ಸನ್ನು ಶ್ರೀಕೃಷ್ಣನ ಚರಣಾರವಿಂದ ಯುಗಳದಲ್ಲಿ, ವಾಣಿಯನ್ನು ಭಗವಂತ ಗುಣ ಕೀರ್ತನೆಗಾಗಿ, ಕೈಗಳನ್ನು ಶ್ರೀಹರಿಮಂದಿರ ಮಾರ್ಜನ ಸೇವೆಯಲ್ಲಿ ಹಾಗೂ ಕಿವಿಗಳನ್ನು ಭಗವಾನ್ ಅಚ್ಯುತ ಹಾಗೂ ಅವನ ಭಕ್ತರ ಮಂಗಳಕಾರಿಯಾದ ಕಥೆಗಳನ್ನು ಶ್ರವಣ ಮಾಡಲು ನಿಯುಕ್ತಗೊಳಿಸಿದ್ದನು.

ಒಮ್ಮೆ ಕಾರ್ತಿಕ ಮಾಸದಲ್ಲಿ ಅಂಬರೀಷ ಮಹಾರಾಜ ತನ್ನ ಪತ್ನಿ ಸಹಿತನಾಗಿ ಮಥುರಾ ಪ್ರದೇಶದಲ್ಲಿ ಮಧುವನ ಎಂಬ ಹೆಸರಿನ ಸ್ಥಳದಲ್ಲಿ ಬಂದು ಅವರು ಒಂದು ವರ್ಷದ ವರೆಗು ದ್ವಾದಶಿ ಪ್ರಧಾನ ಏಕಾದಶಿ ವ್ರತವನ್ನು ಆಚರಿಸಲು ಉದ್ದೇಶಿಸಿದ್ದರು. ವ್ರತದ ಸಮಾಪ್ತಿಯ ಮುಂದಿನ ಕಾರ್ತಿಕ ಮಾಸದಲ್ಲಿ ಅವರು ಮೂರು ರಾತ್ರಿ (ಏಕಾದಶಿಯಿಂದ ಪೂರ್ವ ಹಾಗೂ ಏಕಾದಶಿಯವರೆಗು) ಉಪವಾಸ ಮಾಡಿದರು. ಯಮುನೆಯಲ್ಲಿ ಸ್ನಾನ ಮಾಡಿ ಭಗವಾನ್ ಶ್ರೀಕೃಷ್ಣನ ವಿರಾಟ ಪೂಜೆಯನ್ನು ಮಾಡಿ ಸಮೃದ್ಧ ಹಾಲನ್ನು ನೀಡುವಂತಹ ಗೋವುಗಳನ್ನು ದಾನಮಾಡಿದನು, ವೈಷ್ಣವರಿಗೆ ಸ್ವಾದಿಷ್ಟ ಭಗವತ್ಪ್ರಸಾದವನ್ನು ದಕ್ಷಿಣೆಯೊಂದಿಗೆ ಅರ್ಪಿಸಿದನು. ಈಗ ಅವನು ಸ್ವಯಂ ವ್ರತದ ಪಾರಣೆ ಮಾಡಲು ಸಿದ್ಧನಾದನು. ಅದೇ ಸಮಯಕ್ಕೆ ಅತ್ಯಂತ ಕ್ರೋಧಿ ಸ್ವಭಾವದ ದುರ್ವಾಸ ಋಷಿಗಳು ಬಂದರು. ರಾಜ ಅಂಬರೀಷನು ಅವರನ್ನು ಬರೆಮಾಡಿಕೊಂಡನು. ದುರ್ವಾಸರಿಗೆ ತನ್ನ ತಪಸ್ಸಿನ, ಬ್ರಾಹ್ಮಣತ್ವ ಮತ್ತು ಶ್ರೇಷ್ಠತ್ವವನ್ನು ಕುರಿತು ಬಹಳ ಅಭಿಮಾನವಿತ್ತು. ರಾಜನು ದುರ್ವಾಸರ ಚರಣಗಳಲ್ಲಿ ಪ್ರಣಾಮ ಮಾಡಿ ಭೋಜನಕ್ಕೆ ಆಹ್ವಾನಿಸುತ್ತ ಪ್ರಾರ್ಥನೆ ಮಾಡಿದನು.

ದುರ್ವಾಸರು ನಿಮಂತ್ರಣವನ್ನು ಸ್ವೀಕರಿಸಿದರು ಮತ್ತು ಸ್ನಾನಾದಿಗಳನ್ನು ಮಾಡಲು ಯಮುನೆಗೆ ಹೊರಟು ಬಿಟ್ಟರು. ಯಮುನೆಯಲ್ಲಿ ಪರಬ್ರಹ್ಮನನ್ನು ಧ್ಯಾನ ಮಾಡುತ್ತ ಅವರು ನಿಮಗ್ನರಾದರು. ಇಲ್ಲಿ ದ್ವಾದಶಿಯು ಕೇವಲ ಕೆಲವು ಸಮಯಗಳವರೆಗು ಮಾತ್ರ ಉಳಿದಿತ್ತು. ಪಾರಣೆಗೆ ಅತಿ ಅಲ್ಪ ಸಮಯವಿತ್ತು. ಧರ್ಮಜ್ಞ ಮಹಾರಾಜ ಅಂಬರೀಷನು ಚಿಂತಿತನಾಗಿ ಬ್ರಾಹ್ಮಣರೊಂದಿಗೆ ಹೇಳಿದನು, "ಅತಿಥಿ ಬ್ರಾಹ್ಮಣರನ್ನು ಬಿಟ್ಟು ಸ್ವಯಂ ಭೋಜನವನ್ನು ಮಾಡುವುದರಿಂದ ದೋಷವಾಗುತ್ತದೆ ಮತ್ತು ದ್ವಾದಶಿ ಇದ್ದು ಪಾರಣೆ ಮಾಡದಿದ್ದರೆ ಭಕ್ತಿಗೆ ಹಾನಿಯುಂಟಾಗುತ್ತದೆ. ಆದ್ದರಿಂದ ನಾನು ಕೇವಲ ಭಗವಂತನ ಚರಣಾಮೃತದಿಂದಲೇ ಪಾರಣೆ ಮಾಡುತ್ತೇನೆ." ಶೃತಿಗಳಲ್ಲಿ ಹೀಗೆ ಹೇಳಿದೆ ನೀರನ್ನು ಕುಡಿಯುವುದರಿಂದ ಪಾರಣೆ ಮಾಡಿದಂತಾಗುತ್ತದೆ ಮತ್ತು ಇದು ಭೋಜನವನ್ನು ಮಾಡಿದಂತೆಯು, ಮಾಡದಿರುವಂತೆಯು ಎರಡೂ ಸಹ ಆಗುತ್ತದೆ. ಇದನ್ನು ನಿಶ್ಚಯಿಸಿ ಮಹಾರಾಜ ಅಂಬರೀಷನು ಭಗವಂತನ ಚರಣೋದಕದಿಂದ ಪಾರಣೆ ಮಾಡಿದನು ಮತ್ತು ದುರ್ವಾಸ ಋಷಿಗಳು ಬರಲು ಪ್ರತೀಕ್ಷೆ ಮಾಡುತ್ತಿದ್ದನು.

ದುರ್ವಾಸರು ಹಿಂತಿರುಗಿದಾಗ ಅವರು ತಮ್ಮ ಧ್ಯಾನಯೋಗದಿಂದ ರಾಜ ಪಾರಣೆ ಮಾಡಿರುವುದನ್ನು ಅರಿತುಕೊಂಡರು. ಅವರು ಅತ್ಯಂತ ಕ್ರೋಧಿತರಾದರೂ ಮತ್ತು ಹೀಗೆ ಹೇಳಿದರು– "ಹೇ ಕಪಟಿ! ಭಗವಂತನು ಸ್ವಯಂ ಬ್ರಾಹ್ಮಣರಿಗೆ ಗೌರವಿಸುತ್ತಾನೆ

ಆದರೆ ನೀನು ನನಗೆ ಅವಮಾನ ಮಾಡಿರುವೆ. ನೀನು ನೀರನ್ನು ಕುಡಿದರೆ ಯಾವುದೇ ಹಾನಿ ಇಲ್ಲ ಎಂದು ಭಾವಿಸಿದೆ, ಆದರೆ ಬ್ರಾಹ್ಮಣನನ್ನು ಅಲಕ್ಷ್ಯ ಮಾಡಿದಂತಾಯಿತು ಇದನ್ನು ಕುರಿತು ಆಲೋಚಿಸಲಿಲ್ಲವೆ? ನಾನು ಇದಕ್ಕಾಗೆ ನಿನ್ನನ್ನು ದಂಡಿಸುತ್ತೇನೆ." ಹೀಗೆ ಹೇಳುತ್ತ ಅವರು ಕ್ರೋಧದಿಂದ ಜಲವನ್ನು ಮೇಲೆತ್ತಿದರು. ತಮ್ಮ ಒಂದು ಜಟೆಯನ್ನು ಬಿಚ್ಚಿ ನೆಲಕ್ಕೆ ಎಸೆದರು ಮತ್ತು ಅಂಬರೀಷ ಮಹಾರಾಜನನ್ನು ಕೊಲ್ಲಲು ಕೃತ್ಯನನ್ನು ಉತ್ಪನ್ನ ಮಾಡಿದರು. ಅದು ಪ್ರಳಯಕಾಲದ ಅಗ್ನಿಯಂತೆ ಉರಿಯುತ್ತಿತ್ತು, ಕೈಯಲ್ಲಿ ಖಡ್ಗವನ್ನು ಹಿಡಿದು ಅಂಬರೀಷ ಮಹಾರಾಜನ ಕಡೆಗೆ ಬಂದಿತು. ಅಂಬರೀಷ ಮಹಾರಾಜನು ತನ್ನ ಸ್ಥಾನದಿಂದ ಕದಲುವುದಾಗಲೀ ಅಥವಾ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನವನ್ನೂ ಸಹ ಪಡಲಿಲ್ಲ, ಅವನು ಶಾಂತಿಪೂರ್ವಕವಾಗಿ ಕೈಗಳನ್ನು ಮುಗಿದುಕೊಂಡು ಯಥಾಸ್ಥಾನದಲ್ಲಿ ನಿಂತಿದ್ದನು. ಶರಣಾಗತ ವತ್ಸಲ ಶ್ರೀಭಗವಂತನು ತನ್ನ ಭಕ್ತರ ರಕ್ಷಣೆಗಾಗಿ ಮೊದಲೇ ಸುದರ್ಶನ ಚಕ್ರವನ್ನು ನಿಯತಗೊಳಿಸಿದ್ದನು. ಚಕ್ರವು ಕೃತ್ಯನನ್ನು ಸುಟ್ಟು ಭಸ್ಮಗೊಳಿಸಿತು.

ಕೃತ್ಯನನ್ನು ಸುಟ್ಟನಂತರ ಸುದರ್ಶನ ಚಕ್ರವು ದುರ್ವಾಸಾರ ಕಡೆಗೆ ಬಂತು. ಅವರು ತಮ್ಮ ಪ್ರಾಣವನ್ನು ಕಾಪಾಡಿಕೊಳ್ಳಲು ಓಡಿದರು. ಅವರು ತಮ್ಮ ಹಿಂದೆ ಚಕ್ರದ ತಾಪವನ್ನು ಹಾಗೂ ಅದರ ಸ್ಪರ್ಶವನ್ನು ಅನುಭವಿಸುತ್ತಿದ್ದರು ಆದರೆ ಅದು ಅವರನ್ನು ಸುಡುತ್ತಿರಲಿಲ್ಲ. ದುರ್ವಾಸರು ನುಡಿದರು "ನನ್ನ ಎಲ್ಲ ಪ್ರಯಾಸವು ವಿಫಲವಾಯಿತು ವಿರುದ್ಧವಾಗಿ ಈ ಚಕ್ರವು ನನ್ನ ಹಿಂದೆ ಬರುತ್ತಿದೆ." ಅದರಿಂದ ತಪ್ಪಿಸಿಕೊಳ್ಳಲು ಅವರು ಸುಮೇರು ಪರ್ವತದ ಗುಹೆಗೆ ಓಡಿದರು, ಅವರು ಸಮಸ್ತ ದಿಕ್ಕುಗಳಲ್ಲಿ, ಅತಲ, ವಿತಲ ಇತ್ಯಾದಿ ಲೋಕ, ಲೋಕಪಾಲಕರೊಂದಿಗೆ ಸುರಕ್ಷಿತ ಲೋಕ ಹಾಗೂ ಸ್ವರ್ಗದವರೆಗು ಹೋದರು. ಆದರೆ ಅವರು ಎಲ್ಲೇ ಹೋದರೂ ಸಹ ಅಸಹನೀಯ ತೇಜೋಮಯವಾದ ಚಕ್ರವು ಅವರನ್ನು ಹಿಂಬಾಲಿಸುತ್ತಿತ್ತು. ಯಾವುದೇ ಉಪಾಯವಿಲ್ಲದೇ ಅವರು ಬ್ರಹ್ಮದೇವರ ಹತ್ತಿರ ರಕ್ಷಣೆಗಾಗಿ ಹೋದರು, ಆದರೆ ಬ್ರಹ್ಮದೇವರು ಹೇಳಿದರು, "ಈ ಚಕ್ರವನ್ನು ನಾನು ಹಿಂಕಳುಹಿಸಲಾರೆ, ನನಗೆ ಆ ಸಾಮರ್ಥ್ಯವಿಲ್ಲ." ಬ್ರಹ್ಮದೇವರಿಂದ ನಿರಾಶರಾಗಿ ದುರ್ವಾಸರು ಶಂಕರ ದೇವರ ಬಳಿಗೆ ಹೋದರು, ಅವರೂ ಸಹ ತಮ್ಮ ಅಸಮರ್ಥ್ಯತೆಯನ್ನು ತಿಳಿಸಿ ಹೀಗೆ ಹೇಳಿದರು, "ಯಾರಲ್ಲಿ ಈ ಚಕ್ರವಿರುವುದೋ ಅವರ ಬಳಿಗೆ ಹೋಗು ಅವರಲ್ಲಿ ನೀನು ಶರಣಾಗು, ಅವರೇ ನಿನ್ನನ್ನು ರಕ್ಷಿಸಬಲ್ಲರು." ಅಲ್ಲಿಂದಲೂ ಸಹ ನಿರಾಶರಾಗಿ ದುರ್ವಾಸರು ಭಗವಂತನ ಪರಮಧಾಮ ವೈಕುಂಠಕ್ಕೆ ಹೋದರು. ಹೋಗುತ್ತಿದ್ದಂತೆ ಅವರು ನಡುಗುತ್ತ ಶ್ರೀಭಗವಂತನ ಚರಣಗಳಲ್ಲಿ ಬಿದ್ದರು ಮತ್ತು ಹೇಳಿದರು– "ಹೇ ಅಚ್ಯುತ! ಹೇ ಅನಂತ! ಹೇ ಬ್ರಾಹ್ಮಣ್ಯದೇವ! ಹೇ ಪ್ರಭೋ, ನನ್ನನ್ನು ರಕ್ಷಿಸು. ನೀವು ನಿಮ್ಮ ಚಕ್ರದಿಂದ ನನ್ನನ್ನು ಉಳಿಸಿ, ನನ್ನನ್ನು ರಕ್ಷಿಸು.

ಶ್ರೀಭಗವಂತನು ಹೇಳಿದ– "ಹೇ ಬ್ರಾಹ್ಮಣ! ನೀವು ನನ್ನನ್ನು ಬ್ರಾಹ್ಮಣ್ಯದೇವ ಎಂದು ಕರೆಯುತ್ತಿದ್ದೀರಿ ಆದರೆ ನಾನು ನಿಮ್ಮನ್ನು ರಕ್ಷಿಸುವುದರಲ್ಲಿ ಅಸಮರ್ಥನು. 'ಅಹಂ ಭಕ್ತಪರಾಧೀನಂ' ನಾನು ನನ್ನ ಭಕ್ತರ ಪರಾಧೀನನು, ಭಕ್ತರು ನನ್ನನ್ನು ಪ್ರೀತಿಸುತ್ತಾರೆ ಮತ್ತು ನಾನು ಅವರನ್ನು ಪ್ರೀತಿಸುತ್ತೇನೆ. ನನಗೆ ಸ್ವಲ್ಪವೂ ಸಹ ಸ್ವತಂತ್ರವಿಲ್ಲ. ನಾನು

ನಿಮಗೆ ರಕ್ಷಣೆ ಮಾಡಲು ಸಮರ್ಥನಲ್ಲ."

ದುರ್ವಾಸರು– "ಹೇ ಬ್ರಾಹ್ಮಣ್ಯದೇವ! ನಾನು ಉಚ್ಚ ಶ್ರೇಣಿಯ ಬ್ರಾಹ್ಮಣನು. ನೀವು ನನ್ನನ್ನು ಏತಕ್ಕಾಗಿ ಉಪೇಕ್ಷೆ ಮಾಡುತ್ತಿರುವಿರಿ. ನೀವೆ ಬ್ರಾಹ್ಮಣರ ರಕ್ಷಕರು."

ಶ್ರೀಭಗವಂತನು– "ನೀವು ನನ್ನ ಭಕ್ತನನ್ನು ಸುಟ್ಟು ಹತ್ಯೆ ಮಾಡಲು ಯತ್ನಿಸಿದಿರಿ ಹೀಗಿರುವಾಗ ನಾನು ನಿಮ್ಮನ್ನು ರಕ್ಷಿಸಲೇ? ನಾನು ನನ್ನ ಭಕ್ತರ ಶತ್ರುವಿನ ರಕ್ಷಣೆಯನ್ನು ಯಾವ ರೀತಿ ಮಾಡಲಿ? ನನ್ನ ಭಕ್ತರು ನನಗಾಗಿ ತಮ್ಮ ಸ್ತ್ರೀ, ಪುತ್ರ, ಧನ–ಸಂಪತ್ತು ಎಲ್ಲವನ್ನು ತೊರೆದಿದ್ದಾರೆ. ಹೇ ಬ್ರಾಹ್ಮಣ! ನೀವು ಅಂಬರೀಷನನ್ನು ಕೊಲ್ಲಲು ಕೃತ್ಯನನ್ನು ಕಳುಹಿಸಿದಿರಿ ಮತ್ತು ಈಗ ಚಕ್ರದಿಂದ ರಕ್ಷಣೆಗಾಗಿ ವಿಶ್ವವನ್ನೇ ಸುತ್ತುತ್ತಿರುವಿರಿ, ಬ್ರಹ್ಮ–ಶಿವಾದಿಗಳ ಬಳಿ ಹೋಗುತ್ತಿರುವಿರಿ."

ದುರ್ವಾಸರು– ನಿಮ್ಮ ಭಕ್ತರಲ್ಲಿ ಏನಾದರೂ ನನ್ನ ಅಪರಾಧವಿದ್ದಲ್ಲಿ, ಇದು ನಿಮ್ಮ ಚರಣಗಳಲ್ಲಿ ಅಪರಾಧವಿದ್ದಲ್ಲಿ ನೀವೇ ನನ್ನನ್ನು ಕ್ಷಮಿಸಿರಿ.

ಶ್ರೀಭಗವಂತನು– "ಮುಳ್ಳು ಏನಾದರು ಕಾಲಿಗೆ ಚುಚ್ಚಿಕೊಂಡಿದ್ದರೆ ತಲೆಯಿಂದ ತೆಗೆಯುವರೇ? ಹೊರಡಿ ಅಂಬರೀಷನ ಬಳಿಗೆ ಹೋಗಿ ಕ್ಷಮೆಯನ್ನು ಯಾಚಿಸಿರಿ."

ದುರ್ವಾಸರು– "ನೀವು ಅಂಬರೀಷನ ದೋಷವನ್ನು ನೋಡುತ್ತಿಲ್ಲ, ನನ್ನ ದೋಷವನ್ನು ಮಾತ್ರ ನೋಡುತ್ತಿರುವಿರಿ. ಅವನು ನನಗೆ ನಿಮಂತ್ರಣವನ್ನು ಕೊಟ್ಟು ಸ್ವಯಂ ಭೋಜನವನ್ನು ಸ್ವೀಕರಿಸಿದ್ದಾನೆ. ನನಗಿಂತಲೂ ಮೊದಲು ತಿಂದು ಅವನು ನನಗೆ ಅಪಮಾನ ಮಾಡಿದ್ದಾನೆ.

ಶ್ರೀಭಗವಂತನು ಕೋಪಗೊಂಡು ಹೇಳಿದನು– ಅಂಬರೀಷನು ನನ್ನನ್ನು ಪ್ರಸನ್ನಗೊಳಿಸಲು ಏಕಾದಶಿ ವ್ರತಾದಿಯನ್ನು ಆಚರಿಸಿದನು. ಕೇವಲ ಚರಣಾಮೃತವನ್ನು ಸ್ವೀಕರಿಸುವುದರಿಂದ ಊಟವನ್ನು ಮಾಡಿದಂತೆ ಪರಿಗಣಿಸಲು ಸಾಧ್ಯವಿಲ್ಲ.

ದುರ್ವಾಸರು– ಯಾವುದು ಅಧಿಕ ಮಹತ್ವಪೂರ್ಣ? ಏಕದಾಶಿ ವ್ರತದ ಸಮಯಾನುಸಾರ ಪಾರಣೆ ಮಾಡುವುದೋ ಅಥವಾ ಬ್ರಾಹ್ಮಣರಿಗೆ ಯಥಾ ಯೋಗ್ಯತಾ ಸಮ್ಮಾನವನ್ನು ಮಾಡುವುದೋ?

ಭಗವಂತನು ಸಿಡಿಮಿಡಿಗೊಂಡು ಹೇಳಿದನು– ಹೋಗು ಹೋಗಿ ಅಂಬರೀಷನಲ್ಲಿ ಕೇಳು ನೀನು ಮೂರ್ಖ ಧರ್ಮಶಾಸ್ತ್ರದ ತತ್ವಗಳಿಂದ ಅನಭಿಜ್ಞನಾಗಿರುವೆ ಅವನೇ ನಿನಗೆ ಧರ್ಮದ ಶಿಕ್ಷಣವನ್ನು ನೀಡುವನು. ನನ್ನ ಬಳಿ ನಿನ್ನ ನಿರರ್ಥಕ ಪ್ರಶ್ನೆಗಳಿಗೆ ಸಮಯವಿಲ್ಲ. ಶೃತಿ ಹೇಳುತ್ತದೆ ಅರ್ಥಾತ್ ನನ್ನದೇ ಆದ ವಚನವುಂಟು ನೀರು ಕುಡಿಯುವುದರಿಂದ ಭೋಜನವನ್ನು ಮಾಡಿದಂತೆಯೂ ಆಗುತ್ತದೆ ಮತ್ತು ಮಾಡದೇ ಇದ್ದಂತೆಯೂ ಆಗುತ್ತದೆ. ಈ ನಿಯಮದ ಅನುಸಾರವಾಗಿ ಅಂಬರೀಷನು ಬ್ರಾಹ್ಮಣ ಮತ್ತು ದ್ವಾದಶಿ ಎರಡಕ್ಕೂ ಗೌರವಿಸಿದ್ದಾನೆ. ಆದರೆ ನೀನು ಇದೆಲ್ಲವನ್ನು ತಿಳಿಯದೆ ಆಕ್ರೋಶಗೊಂಡೆ. ಅವನ ಬಳಿಗೆ ಹೋಗು, ಅವನೇ ನಿನಗೆ ಕ್ಷಮೆಮಾಡುತ್ತಾನೆ, ನಾನು ಮಾಡಲಾಗುವುದಿಲ್ಲ.

ಭಗವಂತನ ಆದೇಶವನ್ನು ಕೇಳಿ, ಸುದರ್ಶನ ಚಕ್ರದ ಜ್ವಾಲೆಯಿಂದ ಉರಿಯುತ್ತಿರುವ

ದುರ್ವಾಸರು ಹಿಂದಿರುಗಿ ರಾಜ ಅಂಬರೀಷನ ಬಳಿ ಬಂದರು, ಅವನ ಚರಣಗಳಲ್ಲಿ ಬಿದ್ದರು ಮತ್ತು ಹೇಳಿದರು– "ಹೇ ರಾಜ, ಈ ಚಕ್ರದ ಅಸಹನೀಯ ತಾಪದಿಂದ ನನ್ನನ್ನು ರಕ್ಷಿಸು."

ಅಂಬರೀಷ ಮಹಾರಾಜ ಚಕ್ರವನ್ನು ಸ್ತುತಿಸಿದನು, ಆ ಸಮಯ ಅವನ ಹೃದಯದಲ್ಲಿ ದಯೆಯಿಂದ ಅತ್ಯಂತ ಪೀಡಿತನಾಗಿದ್ದನು. ಅಂಬರೀಷ ಮಹಾರಾಜ ಅನೇಕಕಾಲ ಸ್ತವ–ಸ್ತುತಿ ಪ್ರಾರ್ಥನೆಯಿಂದ ದುರ್ವಾಸರನ್ನು ನಾಲ್ಕು ಕಡೆಯಿಂದಲೂ ಸಂತಪ್ತಗೊಳಿಸುತ್ತಿರುವ ಚಕ್ರವು ಶಾಂತವಾಯಿತು. ಚಕ್ರದ ತಾಪದಿಂದ ಮುಕ್ತರಾಗಿ ದುರ್ವಾಸರ ಚಿತ್ತ ಸ್ವಸ್ಥವಾಯಿತು ಮತ್ತು ಅವರು ಅನೇಕಾನೇಕ ಆಶೀರ್ವಾದವನ್ನು ಮಾಡುತ್ತ ಅಂಬರೀಷ ಮಹಾರಾಜನಿಗೆ ಪ್ರಶಂಸೆಯನ್ನು ಮಾಡಿದರು.



ಎಂದಿನಿಂದ ಸುದರ್ಶನ ಚಕ್ರದಿಂದ ಭಯಭೀತರಾಗಿ ದುರ್ವಾಸರು ಓಡಿ ಹೋದರೋ ಅಂದಿನಿಂದ ಹಿಡಿದು ಅವರು ಹಿಂತಿರುಗಿ ಬರುವ ತನಕ ಒಂದು ವರ್ಷದ ಕಾಲ ಕಳೆದು ಹೋಗಿತ್ತು. ಇಷ್ಟು ದಿನಗಳವರೆಗು ಅಂಬರೀಷ ಮಹಾರಾಜರು ಅವರ ದರ್ಶನದ ಇಚ್ಛೆಯಿಂದ ಕೇವಲ ಜಲವನ್ನು ಸ್ವೀಕರಿಸುತ್ತ ಇದ್ದರು. ಈಗ ರಾಜನು ದುರ್ವಾಸರಿಗೆ ವಿಧಿಪೂರ್ವಕವಾಗಿ ಭೋಜನವನ್ನು ಮಾಡಿಸಿದನು ಮತ್ತು ತೃಪ್ತಿಗೊಳಿಸಿದನು. ದುರ್ವಾಸರು ಹೋದ ಬಳಿಕ ರಾಜ ಭೋಜನವನ್ನು ಸ್ವೀಕರಿಸಿದನು. ಅಂಬರೀಷ ಮಹಾರಾಜ ದುರ್ವಾಸರ ಕಷ್ಟದಲ್ಲಿ ಬಿದ್ದು ಮತ್ತೆ ತನ್ನ ಮೂಲಕವೇ ಕಷ್ಟದಿಂದ ಪಾರಾದರು, ಇದನ್ನು ಕೇವಲ ಭಗವತ್ ಕೃಪೆ ಎಂದು ಅರ್ಥಮಾಡಿಕೊಂಡರು.

ದುರ್ವಾಸ ಋಷಿಗಳು ಗಂಭೀರವಾಗಿ ವಿಚಾರ ಮಾಡಿದರು, "ಅದಾಗ್ಯೂ ನಾನು ಬ್ರಹ್ಮವಾದೀ ಶ್ರೇಷ್ಠ ಬ್ರಾಹ್ಮಣನು ಆದರೆ ನನ್ನನ್ನು ಸುದರ್ಶನವು ಸಮಸ್ತ ಬ್ರಹ್ಮಾಂಡವನ್ನು ಸುತ್ತುವಂತೆ ಮಾಡಿತು, ನಾನು ಸ್ವಯಂ ನನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ನನ್ನನ್ನು ರಕ್ಷಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಇದು ಅವಶ್ಯವಾಗಿ ಏಕಾದಶಿ ವ್ರತದ ಶಕ್ತಿಯೇ ಆಗಿರಬೇಕು." ಇದೇ ಮಾತನ್ನು ಪ್ರಚಾರ ಮಾಡಲೆಂದು ದುರ್ವಾಸರು ತಪೋಲೋಕಕ್ಕೆ ತೆರಳಿದರು.

ರಾಜಾ ರುಕ್ಮಾಂಗದನ ಕಥೆ

ಪುರಾಣಗಳಲ್ಲಿ ರಾಜಾ ಕುಕ್ಮಾಂಗದನ ವರ್ಣನೆಯು ಸಿಗುತ್ತದೆ– ರಾಜಾ ಕುಕ್ಮಾಂಗದನು ಸಾರ್ವಭೌಮ ರಾಜನಾಗಿದ್ದನು. ಅವನು ಭಗವದ್ ಭಕ್ತಿ ಪರಾಯಣನಾಗಿದ್ದನು ಮತ್ತು ಏಕಾದಶಿ ವ್ರತವನ್ನು ಪಾಲಿಸುತ್ತ ವಿಶೇಷ ಮನೋಯೋಗಿಯಾಗಿದ್ದನು. ಅವನು ಸ್ವಯಂ ವ್ರತವನ್ನು ಮಾಡುತ್ತಿದ್ದನು ಮತ್ತು ಸಮಸ್ತ ಪ್ರಜೆಗಳಿಗೂ ಸಹ ರಾಜ–ಆಜ್ಞೆಯ ಮೂಲಕ ಏಕಾದಶಿ ವ್ರತವನ್ನು ಮಾಡಿಸುತ್ತಿದ್ದನು. ರಾಜನ ಈ ಆದೇಶದಂತೆ ಎಲ್ಲ ರಾಜ್ಯವಾಸಿಗಳೂ ಏಕಾದಶಿ ವ್ರತವನ್ನು ಪಾಲಿಸುತ್ತ ವೈಕುಂಠಕ್ಕೆ ಹೋಗುತ್ತಿದ್ದರು ಮತ್ತು ಯಮ ಲೋಕವು ಖಾಲಿಯಾಗುತ್ತಿತ್ತು. ಯಮರಾಜ ಮತ್ತು ಪಾಪ–ಪುಣ್ಯಗಳ ಗಣನೆ ಮಾಡಲು ಸಹಾಯಕರಾದ ಚಿತ್ರಗುಪ್ತರು ದೇವರ್ಷಿ ನಾರದರೊಂದಿಗೆ ಸತ್ಯಲೋಕದಲ್ಲಿ ಬ್ರಹ್ಮದೇವರ ಹತ್ತಿರ ಎಲ್ಲ ವೃತ್ತಾಂತವನ್ನು ಹೇಳಿದರು. ಬ್ರಹ್ಮದೇವರು ಯಮರಾಜರ ಕಷ್ಟವನ್ನು ಕೇಳಿ ಸ್ವಲ್ಪಕಾಲ ಆಲೋಚಿಸಿದರು ಮತ್ತು ಒಬ್ಬಳು ಪರಮ ಸುಂದರಿಯಾದ ನಾರಿಯನ್ನು ಸೃಷ್ಟಿಸಿದರು. ಅವಳಿಗೆ ಮೋಹಿನಿ ಎಂಬ ಹೆಸರನ್ನು ನೀಡಿ ರಾಜ ರುಕ್ಮಾಂಗದನನ್ನು ತನ್ನ ರೂಪ ಸೌಂದರ್ಯಗಳಿಂದ ಮೋಹಿಸಿಕೊಳ್ಳಲು ಆದೇಶವನ್ನು ನೀಡಿದರು.

ಮೋಹಿನಿ ರಾಜನ ರಾಜ್ಯವನ್ನು ಪ್ರವೇಶಿಸಿದಳು ಮತ್ತು ಅಪೂರ್ವ ರೂಪ ಸೌಂದರ್ಯವನ್ನು ಬೀರುತ್ತ ಅತ್ಯಂತ ಮಧುರ ಸ್ವರದಲ್ಲಿ ಗಾನವನ್ನು ಮಾಡತೊಡಗಿದಳು. ರಾಜ ಆ ಸಮಯದಲ್ಲಿ ಪ್ರಜೆಗಳ ರಕ್ಷಣೆಯ ಉದ್ದೇಶದಿಂದ ಕುದುರೆಯ ಮೇಲೇರಿ ಸಂಚಾರ ಮಾಡುತ್ತಿದ್ದನು. ಅಲ್ಲಿ ಅವನು ಅದ್ಭುತ ಸಂಗೀತ ಧ್ವನಿಯನ್ನು ಕೇಳಿದನು. ಆ ಧ್ವನಿಯಿಂದ ಆಕರ್ಷಿತಗೊಂಡು ಪಶು–ಪಕ್ಷಿಗಳೂ ಸಹ ಅದೇ ದಿಕ್ಕಿನ ಕಡೆಗೆ ಓಡುತ್ತಿತ್ತು. ರಾಜನೂ ಸಹ ಕುತೂಹಲದಿಂದ ಅಲ್ಲಿಗೆ ಹೋದನು. ಅಲ್ಲಿ ಗೌರ ವರ್ಣದ ಪರಮಸುಂದರಿ ನಾರಿ ಮೋಹಿನಿಯನ್ನು ಕಂಡನು. ಅವಳ ರೂಪ ಮತ್ತು ಸಂಗೀತದಿಂದ ಆಕರ್ಷಿತನಾಗಿ ಅವನು ಮೋಹಿನಿಯೊಂದಿಗೆ ವಿವಾಹದ ಪ್ರಸ್ತಾಪನೆಯನ್ನು ಮಾಡಿದನು.

ಮೋಹಿನಿ ಹೇಳಿದಳು– "ನಾನು ಬ್ರಹ್ಮನ ಮಗಳು, ನಿಮ್ಮ ಯಶೋ ಕೀರ್ತಿಗಳನ್ನು ಕೇಳಿ ನಿಮ್ಮನ್ನು ಪತಿಯಾಗಿ ಪಡೆಯಲು ಸಂಗೀತದ ಮೂಲಕ ಶಂಕರ ದೇವರನ್ನು ಉಪಾಸನೆಯನ್ನು ಮಾಡುತ್ತಿದ್ದೆ. ನಿಮ್ಮನ್ನು ವಿವಾಹ ಮಾಡಿಕೊಳ್ಳಲು ನನ್ನದು ಒಂದು ನಿಬಂಧನೆ ಇದೆ, ಅದೇನೆಂದರೆ ನನ್ನ ಪ್ರತಿಯೊಂದು ಮಾತನ್ನು ನೀವು ಕೇಳಬೇಕು." ರಾಜನು ಮೋಹಿನಿಯ ಕೈಮೇಲೆ ಕೈ ಇಟ್ಟು ಶಪಥ ಮಾಡಿದನು, "ಮೋಹಿನಿ ನೀನು ಏನೆಲ್ಲ ಅಭಿಲಾಷೆಯನ್ನು ಮಾಡುವೆಯೊ ಅದೆಲ್ಲವನ್ನು ನಾನು ಪೂರ್ಣಮಾಡುತ್ತೇನೆ." ಮೋಹಿನಿಯೊಂದಿಗೆ ರಾಜ ತನ್ನ ರಾಜಧಾನಿಗೆ ಹಿಂದಿರುಗಿದನು.

ತನ್ನ ಪುತ್ರ ಧರ್ಮಾಂಗದನಿಗೆ ರಾಜ್ಯವನ್ನು ಕೊಟ್ಟು ಅವನು ಮೋಹಿನಿಯೊಂದಿಗೆ ಇದ್ದನು. ಕೆಲವು ವರ್ಷಗಳು ಕಳೆದವು ಸುಖ ವಿಲಾಸದಲ್ಲಿ ಮಗ್ನನಾಗಿದ್ದರೂ ಸಹ ಅವನು ಏಕಾದಶಿ ವ್ರತದ ಪಾಲನೆಯನ್ನು ಅಲಕ್ಷ್ಯ ಮಾಡಲಿಲ್ಲ. ಈಗ ಅವನ ಹೃದಯದಲ್ಲಿ ಕಾರ್ತಿಕ ವ್ರತದ ಪಾಲನೆ ಮಾಡಲು ಇಚ್ಛೆಯುಂಟಾಯಿತು ಮತ್ತು

ಅವನು ಮೋಹಿನಿಯೊಂದಿಗೆ ಇದಕ್ಕಾಗಿ ಆಜ್ಞೆಯನ್ನು ಬೇಡಿದನು. ಅದೇ ಸಮಯ ರಾಜ ತನ್ನ ಪುತ್ರ ಧರ್ಮಾಂಗದನ ಮೂಲಕ ಆಗಾಮ ಕಲದ ಏಕಾದಶಿ ತಿಥಿಯನ್ನು ಎಲ್ಲ ಪ್ರಜೆಗಳು ಪಾಲನೆ ಮಾಡಬೇಕು ಎಂದು ಘೋಷಣೆಯನ್ನು ಮಾಡಿಸಿದನು. ಇದನ್ನು ಕುರಿತು ರಾಜನು ಮೋಹಿನಿಯೊಂದಿಗೆ ಹೇಳಿದನು, "ಮೋಹಿನಿ ನಿನ್ನ ಇಚ್ಛೆಗೆ ಅನುಸಾರವಾಗಿ ನಾನು ಜ್ಯೇಷ್ಠ ರಾಣಿ ಸಂಧ್ಯಾವಲಿಯನ್ನು ಕಾರ್ತಿಕ ವ್ರತ ಪಾಲನೆಗಾಗಿ ನಿಯುಕ್ತಗೊಳಿಸಿದ್ದೇನೆ, ಆದರೆ ಏಕಾದಶಿ ವ್ರತವನ್ನು ನಾನು ಸ್ವಯಂ ಆಚರಿಸುತ್ತೇನೆ. ನೀನೂ ಸಹ ಸಂಯಮಪೂರ್ವಕವಾಗಿ ನನ್ನೊಂದಿಗೆ ಈ ವ್ರತವನ್ನು ಪಾಲಿಸು."

"ನೀವು ನನ್ನ ಎಲ್ಲ ಇಚ್ಛೆಯನ್ನು ಪೂರ್ಣ ಮಾಡುವೆ ಎಂದು ಶಪಥ ಮಾಡಿರುವಿರಿ" ಎಂದು ಮೋಹಿಸಿ ರಾಜನಿಗೆ ಜ್ಞಾಪಿಸಿದಳು. ರಾಜ ಹೇಳಿದ, "ಅವಶ್ಯವಾಗಿ ಪೂರ್ಣಮಾಡುವೆ, ಕೇಳು." ಮೋಹಿನಿ ಉತ್ತರಿಸಿದಳು, "ನನ್ನ ಇಚ್ಛೆ ಏನೆಂದರೆ ನೀವು ಏಕಾದಶಿ ವ್ರತವನ್ನು ಮಾಡಬಾರದು, ನನ್ನೊಂದಿಗೆ ಭೋಜನವನ್ನು ಮಾಡಬೇಕು." ರಾಜ ಹೇಳಿದನು, "ಮೋಹಿನಿ! ನನ್ನ ವ್ರತವನ್ನು ಭಂಗ ಮಾಡಬೇಡ, ನಾನು ನಿನ್ನ ಬೇರೆ ಯಾವುದೇ ಇಚ್ಛೆಯನ್ನು ಪೂರ್ಣ ಮಾಡುತ್ತೇನೆ. ಏಕಾದಶಿ ವ್ರತ ಪಾಲನೆ ಮಾಡುವ ಪ್ರಚಾರವನ್ನು ನಾನೇ ಸ್ವಯಂ ಮಾಡಿದ್ದೇನೆ, ನಾನೇ ಸ್ವಯಂ ಅದನ್ನು ಭಂಗಮಾಡಲೇ? ಇದು ಸಾಧ್ಯವಿಲ್ಲ."

ರಾಜನ ಉತ್ತರವನ್ನು ಕೇಳಿ ಮೋಹಿನಿ ಅತ್ಯಂತ ಕ್ರೋಧಿತಳಾದಳು ಮತ್ತು ವ್ಯಂಗ್ಯಪೂರ್ವಕ ಹೇಳಿದಳು, "ಏನಾದರೂ ಈ ವ್ರತ ಭಂಗಮಾಡದಿದ್ದರೆ ನಿಮ್ಮ ಪ್ರತಿಜ್ಞೆಯು ಭಂಗವಾಗುವುದು ಮತ್ತು ನರಕವಾಸ ಪ್ರಾಪ್ತವಾಗುವುದು ಮತ್ತು ನಾನೂ ಸಹ ನಿಮ್ಮನ್ನು ಬಿಟ್ಟು ಹೋಗುವೆನು." ಅದೇ ಸಮಯಕ್ಕೆ ಧರ್ಮಾಂಗದನು ಅಲ್ಲಿಗೆ ಬಂದನು ಮತ್ತು ಸಮಸ್ತ ವೃತ್ತಾಂತವನ್ನು ಕೇಳಿಸಿಕೊಂಡನು. ಅವನು ತಂದೆಯೊಂದಿಗೆ ಚಿಕ್ಕತಾಯಿ ಮೋಹಿನಿಯ ಇಚ್ಛೆಯನ್ನು ಪೂರ್ಣ ಮಾಡಲು ವಿಜ್ಞಾಪನೆ ಮಾಡಿದನು. ರಾಜ ರುಕ್ಮಾಂಗದನು ಉತ್ತೇಜಿತನಾಗಿ ಹೇಳಿದನು– "ಮೋಹಿನಿ ಇದ್ದರು ಅಥವಾ ಹೋದರು, ಜೀವಿಸಿದರು ಅಥವಾ ಸತ್ತರು ನಾನು ಮಾತ್ರ ಏಕಾದಶಿ ವ್ರತದಿಂದ ವಿರಕ್ತನಾಗುವುದಿಲ್ಲ."

ಧರ್ಮಾಂಗದನು ತನ್ನ ಮಾತೆ ಸಂಧ್ಯಾವಲಿಯನ್ನು ಕರೆತಂದನು ಮತ್ತು ಮೋಹಿನಿಗೆ ಅರ್ಥಮಾಡಿಸಲು ಹೇಳಿಸಿದನು. ಏಷ್ಟು ಬೇಡಿಕೊಂಡರು–ವಿನಂತಿಸಿಕೊಂಡರು ಸಹ ಮೋಹಿನಿಯು ತನ್ನ ಮಾತನ್ನು ಬಿಡಲಿಲ್ಲ. ಅವಳು ಹೇಳಿದಳು– "ರಾಜ ಏನಾದರು ಏಕಾದಶಿಯಂದು ಭೋಜನ ಮಾಡದಿದರೆ ಅದಕ್ಕೆ ಸಲುವಾಗಿ ನಾನು ನನ್ನ ಪ್ರಿಯ ಪುತ್ರನ ತಲೆಯನ್ನು ಛೇದಿಸಿ ನನಗೆ ನೀಡಲಿ." ಇದನ್ನು ಕೇಳುತ್ತಿದ್ದಂತೆ ಸಂಧ್ಯಾವಲಿ ಕಂಪಿಸುತ್ತ ಸ್ವಲ್ಪ ಸಮಾದಾನ ತಂದುಕೊಂಡ ನಂತರ ಅವಳು ರಾಜನಿಗೆ ಹೇಳಿದಳು– "ಹೇ ಮಹಾರಾಜ! ಧರ್ಮ ಹಾನಿಯ ಅಪೇಕ್ಷೆಗಿಂತಲೂ ಪುತ್ರನ ಪ್ರಾಣ ನಾಶಮಾಡುವುದೇ ಶ್ರೇಯಸ್ಸಕರ. ಪುತ್ರನಲ್ಲಿ ತಾಯಿಗೆ ಅತ್ಯಾಧಿಕ ಸ್ನೇಹವಿರುತ್ತದೆ ಆದರೆ ನಿಮ್ಮ ಪ್ರತಿಜ್ಞೆ ಭಂಗವಾದರೆ ಧರ್ಮ ಹಾನಿಯ ಅಶಂಕೆಯಿಂದ ಪುತ್ರ ಮಮತೆಗೆ ತಿಲಾಂಜಲಿ ನೀಡುತ್ತಿದ್ದೇನೆ, ನೀವು ಸ್ನೇಹ ಮಮತೆಯನ್ನು ಪರಿತ್ಯಾಗ ಮಾಡಿ ಪುತ್ರನನ್ನು ಬಲಿದಾನ ಮಾಡಿ." ಅದೇ ಸಮಯ ರಾಜಪುತ್ರ ಧರ್ಮಾಂಗದನು ಒಂದು ತೀಕ್ಷ್ಣವಾದ ಖಡ್ಗವನ್ನು ರಾಜನ

ಕೈಯಲ್ಲಿಟ್ಟನು ಮತ್ತು ಹೇಳಿದನು, "ತಂದೇ! ನೀವು ತಡಮಾಡಬೇಡಿ ನಿಮ್ಮ ಪ್ರತಿಜ್ಞೆಯ ರಕ್ಷಣೆಯ ಉದ್ದೇಶದಿಂದ ನನ್ನನ್ನು ವಧೆ ಮಾಡಿರಿ." ಮೋಹಿನಿ ಪುನಃ ಹೇಳಿದಳು– "ಏಕಾದಶಿಯಂದು ಭೋಜನವನ್ನು ಮಾಡು ಇಲ್ಲಾ, ಪುತ್ರನನ್ನು ವಧೆಮಾಡು."

ರಾಜನು ಕೈಯಲ್ಲಿದ್ದ ಖಡ್ಗವನ್ನು ಬಿಗಿಹಿಡಿದನು, ಧರ್ಮಾಂಗದನೂ ಸಹ ಬಲಿಯಾಗಲು ಸಿದ್ಧಗೊಂಡನು. ಪೃಥ್ವಿ ಕಂಪಿಸ ತೊಡಗಿತು, ಸಮುದ್ರದಲ್ಲಿ ಅಲೆಗಳು ಮೇಲೆದ್ದಿತು. ಅದೇ ಸಮಯ ಭಗವಾನ್ ಶ್ರೀಹರಿಯು ಅಲ್ಲಿ ಪ್ರತ್ಯಕ್ಷನಾದನು, ರಾಜನ ಕೈಯಲ್ಲಿದ್ದ ಖಡ್ಗವನ್ನು ಕಿತ್ತುಕೊಂಡನು ಮತ್ತು ಹೇಳಿದನು– "ರಾಜ! ನಾನು ನಿನ್ನ ವ್ರತ ಪಾಲನೆಯ ದೃಢತೆಯಿಂದ ಅತಿ ಪ್ರಸನ್ನನಾಗಿರುವೆ. ನೀನು ಸ್ತ್ರೀ ಪುತ್ರ ಸಹಿತನಾಗಿ ನನ್ನೊಂದಿಗೆ ವೈಕುಂಠ ಧಾಮವನ್ನು ಪ್ರವೇಶಿಸು." ಶ್ರೀಹರಿ ರಾಜನನ್ನು ಸ್ಪರ್ಶಿಸಿ ಅದೃಶ್ಯನಾದನು.

ಏಕಾದಶಿ ತತ್ವ

ಪದ್ಮಪುರಾಣದಲ್ಲಿ ಶ್ರೀ ವ್ಯಾಸದೇವ–ಜೈಮಿನೀ ಋಷಿ ಸಂವಾದದಲ್ಲಿ ಕಥೆ ಬರುತ್ತದೆ– ಒಂದು ಕಾಲದಲ್ಲಿ ಪುರುಷೋತ್ತಮ ಶ್ರೀಭಗವಂತನು ಗರುಡನ ಮೇಲೇರಿ ಯಮಪುರಿಗೆ ಹೋದನು. ಯಮರಾಜನೊಂದಿಗೆ ವಾರ್ತಾಲಾಪ ಮಾಡುವ ಸಮಯದಲ್ಲಿ ಅವನು ಆಕ್ರಂದನ ಧ್ವನಿಯನ್ನು ಕೇಳಿದನು ಮತ್ತು ಅದಕ್ಕೆ ಕಾರಣವೇನು ಎಂಬುದನ್ನು ಕೇಳಿದನು. ಯಮರಾಜ ಉತ್ತರಿಸಿದನು– "ಹೇ ದೇವ! ಪಾತಕಿ ಮರ್ತ್ಯ ಜೀವಿ ತನ್ನ ಪಾಪಕರ್ಮಗಳ ದೋಷದಿಂದ ಅತ್ಯಂತ ದುಃಖಯುಕ್ತವಾದ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಈ ಕ್ರಂದನ ಧ್ವನಿ ಅವರದ್ದೆ ಆಗಿದೆ.

ಇದನ್ನು ಕೇಳಿ ಶ್ರೀಕೃಷ್ಣ ಆ ಜೀವಿಗಳನ್ನು ನೋಡಲು ಹೋದನು. ಆ ಪಾಪಿಗಳನ್ನು ಅಸಹನೀಯ ಯಾತನೆಯಿಂದ ಪೀಡಿತರನ್ನು ಕಂಡು, ಅವನ ಹೃದಯವು ಕರುಣೆಯಿಂದ ಕರಗಿತು. ಅವನು ಆಲೋಚಿಸದನು, "ಇವರು ನನ್ನ ಸೃಷ್ಟಿಯ ಪ್ರಜೆಗಳು. ಇವರ ಪಾಪಗಳ ನಿವಾರಣೆಗಾಗಿ ನಾನು ಏನಾದರು ಉಪಾಯ ಮಾಡಬೇಕು." ಹೀಗೆ ಯೋಚಿಸಿ ಅವನು ಸ್ವಯಂ ಏಕಾದಶಿ ತಿಥಿಯ ರೂಪವನ್ನು ಧಾರಣೆ ಮಾಡಿದನು. ಆ ಸಮಸ್ತ ಪಾಪಿಗಳಿಗೆ ಏಕಾದಶಿ ವ್ರತ ಆಚರಣೆ ಮಾಡಿಸಿದನು. ಅದರ ಪ್ರಭಾವದಿಂದ ಆ ಎಲ್ಲ ಪಾಪಿಗಳು ಪಾಪಮುಕ್ತರಾದರು ಮತ್ತು ಪರಮಧಾಮ ವೈಕುಂಠವನ್ನು ಪ್ರವೇಶಿಸಿದರು. ಆದ್ದರಿಂದ ಹೇ ವತ್ಸ ಜೈಮಿನೀ! ನೀನು ಏಕಾದಶಿ ತಿಥಿಯನ್ನು ಶ್ರೀವಿಷ್ಣುವಿನ ಮೂರ್ತಿಯಂದೇ ತಿಳಿದುಕೋ. ಏಕಾದಶಿ ಸಮಸ್ತ ಸುಕರ್ಮಗಳಲ್ಲಿ ಶ್ರೇಷ್ಠ ಮತ್ತು ಸಮಸ್ತ ವ್ರತಗಳಲ್ಲಿ ಉತ್ತಮವಾದದ್ದು.

ಕರುಣಾಮಯನಾದ ಭಗವಾನ್ ಶ್ರೀಕೃಷ್ಣನು ಒಮ್ಮೆ ಹೀಗೆ ವಿಚಾರ ಮಾಡಿದನು, "ನನ್ನನ್ನು ಮರೆತ ಕಾರಣ ಪ್ರಾಣಿಗಳು ದುಃಖ–ಕಷ್ಟಗಳನ್ನು ಭೋಗಿಸುತ್ತಿದ್ದಾರೆ. ಅವರು ಪತಿತ ಮತ್ತು ಅಸಹಾಯಕರು. ಅವರನ್ನು ನನ್ನ ಧಾಮಕ್ಕೆ ಹೇಗೆ ಕರೆತರಲಿ? ಇದನ್ನು ಯೋಚಿಸಿ ಅವನು ಸ್ವಯಂ ಏಕಾದಶಿ ತಿಥಿಯ ರೂಪಧಾರಣೆ ಮಾಡಿದನು. ಎಲ್ಲ

ಚಿನ್ಮಯಿ ಸಮಯವು ಶ್ರೀಕೃಷ್ಣನಲ್ಲಿ ಅಂತರ್ಗತವಾಗಿದೆ. ಯಾವ ರೀತಿ ಶ್ರೀಮತಿ ರಾಧಿಕ ಶ್ರೀಕೃಷ್ಣನ ಪ್ರಕಾಶಳಾಗಿದ್ದಾಳೆ ಮತ್ತು ಅವನ ಅಂತರಂಗದಿಂದ ಪ್ರಕಟಳಾಗಿದ್ದಾಳೆ. ಶ್ರೀಕೃಷ್ಣನು ಸ್ವಯಂ ಏಕಾದಶಿಯ ರೂಪ ಧಾರಣೆ ಮಾಡಿರುವ ಕಾರಣ ಇದಕ್ಕೆ 'ಮಾಧವ ತಿಥಿ' ಎಂದು ಕರೆಯಲಾಗುತ್ತಿದೆ ಮತ್ತು ಭಕ್ತಿಗೆ ಜನ್ಮವನ್ನು ಕೊಡುವಂತವಳಾಗಿದ್ದಾಳೆ. ಏಕಾದಶಿಯ ದಿನ ಶ್ರೀಕೃಷ್ಣ ಈ ಧರೆಗೆ ಬರುತ್ತಾನೆ ಮತ್ತು ಈ ವ್ರತವನ್ನು ಪಾಲನೆ ಮಾಡುವವರಿಗೆ ವಿಶೇಷ ಕೃಪೆಯನ್ನು ತೋರುತ್ತಾನೆ.

ಕೆಲವು ಕಾಲದ ಬಳಿಕ ವ್ಯತೀತನಾದ ಪಾಪ–ಪುರುಷನು ಶ್ರೀಕೃಷ್ಣನ ಹತ್ತಿರ ಹೋಗಿ ಕೈ ಜೋಡಿಸಿ ದೀನತಾಪೂರ್ವಕವಾಗಿ ಪ್ರಾರ್ಥಿಸಿದನು. "ನಿಮ್ಮ ಮೂಲಕ ಪಾಪ ವಿನಾಶಕ ಏಕಾದಶಿಯ ಸೃಷ್ಟಿಯಾದ್ದರಿಂದ ನಾನು ಕ್ಷೀಣನಾಗುತ್ತಿದ್ದೇನೆ, ಏಕೆಂದರೆ ಈ ವ್ರತದ ಪ್ರಾಲನೆ ಮಾಡುವಂತಹವರಮೇಲೆ ನನ್ನ ಪ್ರಭಾವ ಬೀರುವುದಿಲ್ಲ. ಈಗ ನಾನು ಈ ಜಗತ್ತಿನಲ್ಲಿ ಯಾರ ಆಶ್ರಯವನ್ನು ಪಡೆದು ನೆಲಸಿರಲಿ? ಹೇ ಕೇಶವ! ಏಕಾದಶಿ ತಿಥಿಯ ಭಯದಿಂದ ನನ್ನನ್ನು ರಕ್ಷಿಸು."

ಶ್ರೀಭಗವಂತನು ನಗುತ್ತ ಆ ಪಾಪಪುರುಷನಿಗೆ ಹೇಳಿದನು, "ಅಹೋ! ನೀನು ದುಃಖಿತನಾಗಬೇಡ. ತ್ರಿಭುವನ ಪವಿತ್ರಕಾರಿಣಿ ಏಕಾದಶಿಯ ದಿನ ನೀನು ಪಂಚಸಸ್ಯದಲ್ಲಿ (ಧಾನ್ಯಗಳು– ಅಕ್ಕಿ, ಜೋಳ, ಗೋದಿ, ಬೇಳೆ ಇತ್ಯಾದಿಗಳಲ್ಲಿ) ನಿವಾಸ ಮಾಡು ನಾನು ನಿನಗೆ ಈ ಸ್ಥಾನವನ್ನು ಕೊಡುತ್ತೇನೆ. ಯಾವ ಜನರು ಏಕಾದಶಿಯ ದಿನದಂದು ಅನ್ನವನ್ನು ಊಟಮಾಡುವರೋ, ಅವರು ಬ್ರಹ್ಮ ಹತ್ಯಾದಿಗೆ ಸಮಾನವಾದ ಭಯಂಕರ ಪಾಪವನ್ನೇ ಊಟಮಾಡುತ್ತಾರೆ ಮತ್ತು ಪಿತೃ ಸಮೇತರಾಗಿ ನರಕವನ್ನು ಭೋಗಿಸುತ್ತಾರೆ."

ಏಕಾದಶಿಯ ದಿನದಂದು ಅನ್ನವನ್ನು ದಾನ ಮಾಡಿದರೂ ಮತ್ತು ಇತರರಿಗೆ ಅನ್ನವನ್ನು ತಿನ್ನಲು ಪ್ರೇರಣೆ ನೀಡಿದಂತಹ ವ್ಯಕ್ತಿಗಳೂ ಸಹ ಮೇಲೆ ವಿವರಿಸಿದಂತಹ ಪಾಪಗಳಿಗೆ ಭಾಗಿಯಾಗುವರು. ಏಕಾದಶಿ ವ್ರತ ನಿತ್ಯ ಮತ್ತು ಸರ್ವದಾ ಪಾಲನೀಯವಾದದ್ದು. ಏಕಾದಶಿಯನ್ನು ಕೆಲವು ಬಾರಿ ಮಾಡುವುದು ಮತ್ತು ಕೆಲವು ಬಾರಿ ಮಾಡದಿರುವುದು, ಹೀಗೆ ಮಾಡಬಾರದು. ಇದರ ನಿತ್ಯತೆಯ ಮುಖ್ಯ ಕಾರಣವೇನೆಂದರೆ ಶ್ರೀಕೃಷ್ಣನನ್ನು ಸಂತುಷ್ಟಗೊಳಿಸುವುದು. ಶ್ರೀರೂಪ ಗೋಸ್ವಾಮಿ ಪಾದರು ಭಕ್ತಿಯ ಅರವತ್ನಾಲ್ಕು (೬೪) ಅಂಗಗಳಲ್ಲಿ ಏಕಾದಶಿ ವ್ರತದ ಪಾಲನೆಯು ಅತ್ಯಾವಶ್ಯಕ ಎಂದು ತಿಳಿಸಿದ್ದಾರೆ. ಪ್ರತ್ಯೇಕ ಮಾಸದಲ್ಲಿ ಕೃಷ್ಣ ಮತ್ತು ಶುಕ್ಲ ಪಕ್ಷಗಳಲ್ಲಿ ಏಕಾದಶಿ ದಿನದಂದು ಏಕಾದಶಿ ತಿಥಿ ಬರುತ್ತದೆ. ಇದಕ್ಕೆ ಅತಿರಿಕ್ತವಾಗಿ ಸುಮಾರು ಎರಡೂವರೆ ವರ್ಷಕ್ಕೊಮ್ಮೆ ಬರುವ ಅಧಿಕ ಮಾಸ ಅಥವಾ ಪುರುಷೋತ್ತಮ ಮಾಸದ ಸಮಯದಲ್ಲು ಎರಡು ಏಕಾದಶಿಗಳು ಬರುತ್ತವೆ.

ಕೆಲವೊಮ್ಮೆ ವಿಶೇಷ ಯೋಗದ ಕಾರಣ ಮಹಾದ್ವಾದಶಿಯೂ ಸಹ ಉಪಸ್ಥಿತವಾಗುತ್ತದೆ. ಆ ಸಮಯದಲ್ಲಿ ಏಕಾದಶಿಯ ಸ್ಥಾನದಲ್ಲಿ ಮಹಾದ್ವಾದಶಿಯ ವ್ರತವನ್ನು ಆಚರಿಸಬೇಕು.

ಏಕಾದಶಿ ವ್ರತಗಳ ಪಟ್ಟಿ

ಮಾಸದ ಹೆಸರು	ಪಕ್ಷದ ಹೆಸರು	ಏಕಾದಶಿಯ ಹೆಸರು
ವೈಶಾಖ	ಕೃಷ್ಣ	ವರೂಥಿನಿ
ವೈಶಾಖ	ಶುಕ್ಲ	ಮೋಹಿನಿ
ಜ್ಯೇಷ್ಠ	ಕೃಷ್ಣ	ಅಪರಾ
ಜ್ಯೇಷ್ಠ	ಶುಕ್ಲ	ನಿರ್ಜಲ
ಆಷಾಢ	ಕೃಷ್ಣ	ಯೋಗಿನಿ
ಆಷಾಢ	ಶುಕ್ಲ	ಶಯನಿ
ಶ್ರಾವಣ	ಕೃಷ್ಣ	ಕಾಮಿಕ
ಶ್ರಾವಣ	ಶುಕ್ಲ	ಪವಿತ್ರಾರೋಪಣಿ
ಭಾದ್ರ	ಕೃಷ್ಣ	ಅನ್ನದಾ
ಭಾದ್ರ	ಶುಕ್ಲ	ಪಾರ್ಶ್ವೈಕಾದಶಿ
ಆಶ್ವಿನ	ಕೃಷ್ಣ	ಇಂದಿರಾ
ಆಶ್ವಿನ	ಶುಕ್ಲ	ಪಾಪಾಂಕುಶಾ ಅಥವಾ ಪಾಶಾಂಕುಶ
ಕಾರ್ತಿಕ	ಕೃಷ್ಣ	ರಮಾ
ಕಾರ್ತಿಕ	ಶುಕ್ಲ	ಉತ್ಥಾನ ಅಥವಾ ಪ್ರಬೋಧಿನಿ
ಅಗ್ರಹಾಯಣ	ಕೃಷ್ಣ	ಉತ್ಪನ್ನ
ಅಗ್ರಹಾಯಣ	ಶುಕ್ಲ	ಮೋಕ್ಷದಾ
ಪೌಷ	ಕೃಷ್ಣ	ಸಫಲ
ಪೌಷ	ಶುಕ್ಲ	ಪುತ್ರದಾ
ಮಾಘ	ಕೃಷ್ಣ	ಷಟ್ತಿಲಾ
ಮಾಘ	ಶುಕ್ಲ	ಭೌಮಿ
ಫಲ್ಗುಣ	ಕೃಷ್ಣ	ವಿಜಯ
ಫಲ್ಗುಣ	ಶುಕ್ಲ	ಆಮಲಕಿ
ಚೈತ್ರ	ಕೃಷ್ಣ	ಪಾಪಮೋಚನಿ
ಚೈತ್ರ	ಶುಕ್ಲ	ಕಾಮದಾ
ಪುರುಷೋತ್ತಮ ಮಸ	ಕೃಷ್ಣ	ಕಮಲಾ
ಪುರುಷೋತ್ತಮ ಮಸ	ಶುಕ್ಲ	ಕಾಮದಾ

ಮಹಾದ್ವಾದಶಿ

ಉನ್ಮೀಲನೀ ವ್ಯಂಜುಲೀ ಚ ತ್ರಿಸ್ಪೃಶಾ ಪಕ್ಷವರ್ದ್ಧಿನೀ ।
ಜಯಾ ಚ ವಿಜಯಾ ಚೈವ ಜಯಂತೀ ಪಾಪನಾಶಿನೀ ॥
ದ್ವಾದಶ್ಯೋಽಷ್ಟೌ ಮಹಾಪುಣ್ಯಾಃ ಸರ್ವಪಾಪಹರಾ ದ್ವಿಜ ।
ತಿಥಿಯೋಗೇನ ಜಾಯಂತೇ ಚತಸ್ರಶ್ಚಾಪರಸ್ತಥಾ ।
ನಕ್ಷತ್ರಯೋಗಾಚ್ಚ ಬಲಾತ್ ಪಾಪಂ ಪ್ರಶಮಯಂತಿ ತಾಃ ॥
(ಹರಿ ಭಕ್ತಿ ವಿಲಾಸ ೧೩/೨೬೫-೨೬೬)

ಹೇ ದ್ವಿಜ-ಉನ್ಮಿಲನೀ, ವ್ಯಂಜುಲೀ, ತ್ರಿಸ್ಪೃಶಾ, ಪಕ್ಷವರ್ದ್ಧಿನೀ, ಜಯಾ, ವಿಜಯಾ, ಜಯಂತಿ ಮತ್ತು ಪಾಪನಾಶನೀ ಈ ಎಂಟು ದ್ವಾದಶಿಗಳು ಮಹಾಪವಿತ್ರ ಮತ್ತು ಅಖಿಲ ಪಾಪ ಹರಣ ಮಾಡುವಂತಹದ್ದು. ಅದರಲ್ಲಿ ಪ್ರಥಮ ನಾಲ್ಕು ಯೋಗ ಅರ್ಥಾತ್ ಏಕಾದಶಿ ದ್ವಾದಶಿಯ ವಿಶೇಷ ಯೋಗದಿಂದ, ಮತ್ತು ಅನ್ಯ ನಾಲ್ಕು ವಿಶೇಷ ನಕ್ಷತ್ರ ಯೋಗ ಉಪಸ್ಥಿತವಾದಾಗ ಉತ್ಪನ್ನವಾಗುತ್ತದೆ.

ಮತ್ತೆ ಏಕಾದಶಿ ವ್ರತ ಪಾಲನೆಯು ಶ್ರೀಹರಿಗೆ ಪ್ರಿಯವಾದದ್ದು ಮತ್ತು ಅವನ ಭಕ್ತಿಯನ್ನು ಜನ್ಮ ನೀಡುವಂತಹವಳು ಎಂದು ಈ ರೀತಿಯಾಗಿ ನಾವು ಕಾಣುತ್ತೇವೆ. ಮತೊಂದೆಡೆ ಏಕಾದಶಿಯ ದಿನವು ಸಮಸ್ತ ಪ್ರಕಾರದ ಭಯಂಕರ ಪಾಪಗಳು ಧಾನ್ಯಗಳಲ್ಲಿ ಆಶ್ರಯಿಸುತ್ತ ನೆಲಸಿರುತ್ತದೆ. ಆದ್ದರಿಂದ ಆ ದಿನದಂದು ಅನ್ನ ಸೇವಿಸುವುದು ಪಾಪವನ್ನು ಸೇವಿಸುವುದಕ್ಕೆ ಸಮಾನ.

ವೈಷ್ಣವರೇನೋ ಕೇವಲ ಶ್ರೀಕೃಷ್ಣನಿಗೆ ಅರ್ಪಿಸಿದಂತಹ ಮಹಾಪ್ರಸಾದವನ್ನು ಮಾತ್ರ ಸೇವಿಸುತ್ತಾರೆ. ಮಹಾಪ್ರಸಾದವು ಸಮಸ್ತ ಪ್ರಕಾರದ ಪಾಪಗಳಿಂದ ನಿರ್ಮುಕ್ತ ಮತ್ತು ವಿಶುದ್ಧವಾದದ್ದು ಆಗಿರುವಾಗ ಅದನ್ನು ಸ್ವೀಕರಿಸುವುದರಿಂದ ಯಾವ ಹಾನಿ ಉಂಟಾಗುತ್ತದೆ? ಹೀಗೆ ಈ ರೀತಿಯಾದ ಪೂರ್ವ ಪಕ್ಷ ಉಂಟಾಗಬಹುದು, ಅದಕ್ಕೆ ಉತ್ತರದಲ್ಲಿ ಹೇಳುತ್ತಾರೆ, ಶ್ರೀಕೃಷ್ಣನ ಪ್ರೀತಿಯನ್ನು ಸಂಪಾದಿಸುವುದೇ ಈ ವ್ರತದ ಮುಖ್ಯ ಉದ್ದೇಶ ಮತ್ತು ವೈಷ್ಣವರಿಗೂ ಸಹ ಇದೇ ಉದ್ದೇಶ. ಪಾಪದ ಭಕ್ಷಣೆ ಆಗಿರುವುದೋ ಅಥವಾ ಇಲ್ಲವೋ ಎಂಬ ಈ ರೀತಿಯ ಆಲೋಚನೆ ಮಾಡುವುದರಿಂದ ತಮ್ಮನ್ನು ಅಮಂಗಳ ಅಥವಾ ಸುಖ-ದುಃಖದ ಭಾವನೆ ಮಾಡುವುದು ಒಬ್ಬ ವೈಷ್ಣವನ ಕರ್ತವ್ಯವಲ್ಲ. ವೈಷ್ಣವನ ಕರ್ತವ್ಯ ಸಮಸ್ತ ಕಾರ್ಯಗಳನ್ನು ಶ್ರೀಕೃಷ್ಣನ ಪ್ರೀತಿಯನ್ನು ಉದ್ದೇಶಿಸಿ ಮಾಡುವುದು, ತಮಗೆ ಮಂಗಳ-ಅಮಂಗಳವನ್ನು ಉದ್ದೇಶಿಸಿ ಅಲ್ಲ. ಈ ವಿಷಯದಲ್ಲಿ ಶ್ರೀ ಚೈತನ್ಯ ಮಹಾಪ್ರಭುಗಳು ಒಂದು ಆದರ್ಶವನ್ನು ಪ್ರಸ್ತುತಪಡಿಸಿದ್ದಾರೆ. ಮಹಾಪ್ರಭುಗಳು ಮಹಾಪ್ರಸಾದವನ್ನು ಶ್ರೀಕೃಷ್ಣನ ಸಾಕ್ಷಾತ್ ಅಧರಾಮೃತವೆಂದು ಭಾವಿಸಿ ವಿಶೇಷ ಪ್ರೀತಿಪೂರ್ವಕವಾಗಿ ಸ್ವೀಕರಿಸುತ್ತಿದ್ದರು. ಅವರು ಹೇಳುತ್ತಾರೆ- 'ಮಹಾಪ್ರಸದವು ಪ್ರಾಪ್ತವಾಗುತ್ತಿದ್ದಂತೆಯೇ ತಕ್ಷಣವೇ ಅದನ್ನು ಸೇವಿಸು.'

ಒಮ್ಮೆ ಏಕಾದಶಿಯ ದಿನದಂದು ಗೋಪಿನಾಥ ಸಾರ್ವಭೌಮ ಭಟ್ಟಾಚಾರ್ಯರು ಪ್ರಸಾದದೊಂದಿಗೆ ಉಪಸ್ಥಿತರಾದರು, ಅದರಲ್ಲಿ ವಿಭಿನ್ನ ಪ್ರಕಾರದ ಅನ್ನ ವ್ಯಂಜನಾದಿ ಶ್ರೀಜಗನ್ನಾಥನ ಮಹಾಪ್ರಸಾದವಾಗಿದ್ದಿತು. ಮಹಾಪ್ರಭುಗಳೊಂದಿಗೆ ಸ್ವರೂಪ

ದಾಮೋದರ, ರಾಯ ರಮಾನಂದ, ವಕ್ರೇಶ್ವರ ಹಾಗೂ ಅನೇಕ ಕ್ಷೇತ್ರವಾಸಿ ಭಕ್ತಜನರು ಕುಳಿತ್ತಿದ್ದರು.

ಏಕದಿನ ಗೌರಹರಿ, ಶ್ರೀಗುಣ್ಡಿಚಾ ಪರಿಹರಿ, ಜಗನ್ನಾಥವಲ್ಲಭೇ ಬಸಿಲಾ ।
ಶುದ್ಧ ಏಕಾದಶಿ - ದಿನೇ, ಕೃಷ್ಣನಾಮ ಸುಕೀರ್ತನೇ, ದಿವಸ ರಜನೀ ಕಾಟಾಇಲಾ ॥
ಸಂಗೇ ಸ್ವರೂಪದಾಮೋದರ, ರಮಾನಂದ, ವಕ್ರೇಶ್ವರ, ಆರ ಜತ ಕ್ಷೇತ್ರ ವಾಸಿಗಣ ॥
ಪ್ರಭು ಬಲೆ-ಏಕಮಾನೇ, ಕೃಷ್ಣನಾಮ - ಸಂಕೀರ್ತನೇ, ನಿದ್ರಾಹಾರ ಕರಿಯೇ ವರ್ಜನ ॥
ಕಹೇ ಕರ ಸಂಖ್ಯಾನಾಮ, ಕೆಹ ದಂಡಪರಣಾಮ, ಕೆಹ ಬಲ ರಾಮಕೃಷ್ಣ - ಕಥಾ ।
ಯಥಾ ತಥಾ ಪಡಿ ಸಬೇ, ಗೋವಿಂದ ಗೋವಿಂದ ರಬೇ,
ಮಹಾಪ್ರೇಮೇ ಪ್ರಮತ್ತ ಸರ್ವಥಾ ॥
ಹೇನಕಾಲೇ ಗೋಪೀನಾಥ, ಪಡಿಛಾ ಸಾರ್ವಭೌಮ - ಸಾಥ,
ಗುಣ್ಡಿಚಾ - ಪ್ರಸಾದ ಲಇಯಾ ಆಇಲ
ಅನ್ನ - ವ್ಯಂಜನ, ಪಿಠಾ, ಪಾನಾ, ಪರಮಾನ್ನ,
ದಧಿ, ಛಾನಾ, ಮಹಾಪ್ರಭು - ಅಗ್ರೇತೇ ಘರಿಲ ॥

ಪ್ರಭುರ ಸಾಜ್ಞಾಯ ಸಬೇ, ದಂಡವತ್ ಪಡಿ ತಬೇ,
ಮಹಾಪ್ರಸಾದ ವಂದಿಯಾ ವಂದಿಯಾ ।
ತ್ರಿಭುರ ಸಾಜ್ಞಾಯ ಸಬೇ, ಮಹಾಪ್ರೇಮ ಮಝುಭಾವೇ, ಅಕೈತವೇ ನಾಮೇ ಕಾರಾಇಯಾ ॥
ಪ್ರಭು - ಆಜ್ಞಾ ಶಿತೇ ಧರಿ, ಪ್ರಾತಃಸ್ನಾನ ಸಬೇ ಕರಿ, ಮಹಾಪ್ರಸಾದ ಸೇವಯ ಪಾರಣ ।

ಕರಿ ಹೃಷ್ಟ ಚಿತ್ತ ಸಬೇ, ಪ್ರಭುರ ಚರಣೇ ತಬೇ, ಕರ ಜೋಡ ಕರೇ ನಿವೇದನ ॥
ಸರ್ವ - ವ್ರತ - ಶಿರೋಮಣಿ, ಶ್ರೀಹರಿವಾಸರೇ ಜಾನಿ, ನಿರಾಹಾರೇ ಕರಿ ಜಾಗರಣ ।
ಜಗನ್ನಾಥ ಪ್ರಸಾದಾನ್ನ, ಕ್ಷೇತ್ರ ಸರ್ವಕಾಲೇ ಮಾನ್ಯ, ಪಾಇಲೇಇ ಕರಿಯೇ ಭಕ್ಷಣ ॥
ಏ ಸಂಕಟೇ ಕ್ಷೇತ್ರವಾಸೇ, ಮನೇ ಹಯ ಬಡ ತ್ರಾಸೇ, ಸ್ಪಷ್ಟ ಆಜ್ಞಾ ಕರಿಯೇ ಪ್ರಾರ್ಥನಾ ।
ಸರ್ವವೇದ ಆಜ್ಞಾ ತವ, ಜಾಹಾ ಮಾನೇ ಬ್ರಹ್ಮ - ಶಿವ, ತಾಹಾ
ದಿಯಾ ಘುಚಾಓ ಯಾತನಾ ॥
ಪ್ರಭು ಬಲೇ, ಭಕ್ತಿ - ಅಂಗೇ, ಏಕಾದಶಿ - ಮಾನ - ಭಂಗೇ,
ಸರ್ವನಾಶ ಉಪಸ್ಥಿತ ಹಯ ।
ಪ್ರಸಾದ - ಪೂಜನ ಕರಿ, ಪರದಿನೇ ಪಾಇಲೇ ತರಿ, ತಿಥಿ ಪರದಿನೇ ನಾಹಿ ರಯ ॥
ಶ್ರೀಹರಿವಾಸರ - ದಿನೇ, ಕೃಷ್ಣನಾಮ - ರಸಪಾನೇ, ತೃಪ್ತ ಹಯ ವೈಷ್ಣವ ಸುಜನ ।
ಅನ್ಯ ರಸ ನಾಹಿ ಲಯ, ಅನ್ಯ ಕಥಾ ನಾಹಿ ಕಯ, ಸರ್ವಭೋಗ ಕರಯೇ ವರ್ಜನ ॥
ಪ್ರಸಾದ - ಭೋಜನ ನಿತ್ಯ, ಶುದ್ಧ ವೈಷ್ಣವೇರ ಕೃತ್ಯ, ಅಪ್ರಸಾದ ನಾ ಕರೇ ಭಕ್ಷಣ ।
ಶುದ್ಧ - ಏಕಾದಶಿ ಜಬೇ, ನಿರಾಹಾರ ಥಾಕೇ ತಬೇ, ಪಾರಣೇತೇ ಪ್ರಸಾದ - ಭೋಜನ ॥
ಅನುಕಲ್ಪ - ಸ್ಥಾನಮಾತ್ರ, ನಿರನ್ನ ಪ್ರಸಾದಪಾತ್ರ, ವೈಷ್ಣವಕೆ ಜಾನಿಹ ನಿಶ್ಚಿತ ।
ಅವೈಷ್ಣವ ಜನ ಜಾಂರಾ ಪ್ರಸಾದ - ಛಲೇತೇ ತಾಂರಾ, ಭೋಗೇ ಹಯ ದಿವಾನಿಶಿ ರತ ।
ಪಾಪ-ಪುರುಷೇರ ಸಂಗೇ, ಅನ್ನಾಹಾರ ಕರ ರಂಗೇ, ನಾಹಿ ಮಾನೇ ಹರಿವಾಸರ - ವ್ರತ ॥
ಭಕ್ತಿ-ಅಂಗ-ಸದಾಚಾರ, ಭಕ್ತಿರ ಸಮ್ಮಾನ ಕರ, ಭಕ್ತಿದೇವೀ - ಕೃಪಾ - ಲಾಭ ಹಬೇ ।
ಅವೈಷ್ಣವ - ಸಂಗ ಛಾಡ, ಏಕಾದಶೀ - ವ್ರತ ಧರ, ನಾಮ - ವ್ರತೇ ಏಕಾದಶಿ ತಬೇ ॥

ಪ್ರಸಾದ – ಸೇವನ ಆರ ಶ್ರೀಹರಿವಾಸರೇ ।
ವಿರೋಧ ನ ಕರೇ, ಕಭು ಬುಝಹ ಅನ್ತರೇ ॥
ಏಕ ಅಂಗ ಗಾನೇ, ಆರ ಅನ್ಯ ಅಂಗೇ ದ್ವೇಷ ।
ಜೇ ಕರೇ, ನಿರ್ಬೋಧ ಸೇಇ ಜಾನಹ ವಿಶೇಷ ॥
ಜೇ ಅಂಗೇರ ಜೇ ದೇಶ ಕಾಲ–ವಿಧಿ–ವ್ರತ ।
ತಾಹಾತೇ ಏಕಾಂತ – ಭವೇ ಹಓ ಭಕ್ತಿ – ರತ ॥
ಸರ್ವೇ ಅಂಗೇರ ಅಧಿಪತಿ ಬ್ರಜೇಂದ್ರನಂದನ ।
ಜಾಹೇ ತೇಂಹ ತುಷ್ಟ ತಾಹಾ ಕರಹ ಪಾಲನ ॥
ಏಕಾದಶಿ – ದಿನೇ ನಿದ್ರಾಹಾರ – ವಿಸರ್ಜನ ।
ಅನ್ಯ ದಿನೇ ಪ್ರಸಾದ – ನಿರ್ಮಾಲ್ಯ ಸುಸೇವನ ॥
ಶ್ರೀನಾಮಭಜನ ಆರ ಏಕಾದಶೀ – ವ್ರತ ।
ಏಕ ತತ್ವ ನಿತ್ಯ ಜಾನಿ ' ಹಓ ತಾಹೇ ರತ ।

(ಶ್ರೀಪ್ರೇಮವಿವರ್ತ್ತ)

ಪ್ರಭುವಿನ ಆಜ್ಞೆಯಿಂದ ಎಲ್ಲರು ಮಹಾಪ್ರಸಾದಕ್ಕೆ ದಂಡವತ್ ಪ್ರಣಾಮವನ್ನು ಮಾಡಿದರು, ಸಮಸ್ತ ರಾತ್ರಿ ಕೀರ್ತನೆಯಲ್ಲಿ ವ್ಯತೀತರಾಗಿದ್ದರು ಮತ್ತು ಪ್ರಾತಃಕಾಲದಲ್ಲಿ ಎಲ್ಲರೂ ಸ್ನಾನವನ್ನು ಮಾಡಿ ಮಹಾಪ್ರಸಾದದಿಂದ ವ್ರತದ ಪಾರಣೆ ಮಾಡಿದರು. ಇದಕ್ಕೆ ನಂತರ ಎಲ್ಲರು ಪರಿಶುದ್ಧ ಚಿತ್ತದಿಂದ ಕರಬದ್ಧರಾಗಿ ಮಹಾಪ್ರಭುಗಳನ್ನು ಕೇಳಿದರು,– "ಸರ್ವವ್ರತ ಶಿರೋಮಣಿ ಏಕಾದಶಿಯ ದಿನದಂದು ನಿರಾಹಾರರಾಗಿದ್ದು ಜಾಗರಣೆ ಮಾಡಬೇಕು. ಅದರೊಂದಿಗೆ ಶ್ರೀ ಜಗನ್ನಾಥನ ಮಹಾಪ್ರಸಾದವನ್ನು ಪಡೆದ ತಕ್ಷಣವೇ ಭಕ್ಷಿಸಬೇಕು ಎಂದು ಹೀಗೂ ಸಹ ಆದೇಶ ಉಂಟು, ನಾವು ಈ ಎರಡರಲ್ಲಿ ಯಾವ ಆಜ್ಞೆಯನ್ನು ಪಾಲಿಸಬೇಕು? ಈ ವಿಷಯಗಳಲ್ಲಿ ವೇದಗಳ ಆಜ್ಞೆ ಏನು? ನೀವು ಇದನ್ನು ಸ್ಪಷ್ಟೀಕರಿಸಿ ಈ ಗೊಂದಲಮಯವಾದ ಸಂಕಟದಿಂದ ನಮ್ಮನ್ನು ಪಾರುಮಾಡಬೇಕು."

ಪ್ರಭುಗಳು ಹೇಳಿದರು– "ಭಕ್ತಿಯ ಅಂಗವಾದ ಏಕಾದಶಿಯನ್ನು ಭಂಗ ಮಾಡಿದರೆ ಸರ್ವನಾಶವಾಗುತ್ತದೆ. ಮಹಾಪ್ರಸಾದವನ್ನು ಪೂಜೆಮಾಡಿ ಅದನ್ನು ಮುಂದಿನ ದಿನ ಸ್ವೀಕರಿಸಬೇಕು. ಭಕ್ತಿಯ ಸಮಸ್ತ ಅಂಗಗಳ ಅಧಿಪತಿ ಸ್ವಯಂ ಶ್ರೀ ವ್ರಜೇದ್ರನಂದನನು, ಅವನು ಯಾವ ರೀತಿ ಸಂತುಷ್ಟನಾಗುವನೋ ಅದನ್ನೇ ಪಾಲನೆ ಮಾಡಿರಿ. ಏಕಾದಶಿಯ ದಿನದಂದು ನಿದ್ರೆ ಮತ್ತು ಆಹಾರವನ್ನು ಪರಿತ್ಯಾಗ ಮಾಡಿರಿ ಮತ್ತು ಇತರ ದಿನಗಳಲ್ಲಿ ನಿರ್ಮಾಲ್ಯ ಪ್ರಸಾದವನ್ನು ಸೇವಿಸಿರಿ. ಏಕಾದಶಿ ವ್ರತ ಮತ್ತು ನಾಮ ಭಜನೆಯನ್ನು ಒಂದೇ ತತ್ವವೆಂದು ತಿಳಿದುಕೊಂಡು ಅದರಲ್ಲಿ ಅನುರಕ್ತರಾಗಿರಿ.

ಏಕಾದಶಿ ವ್ರತದ ವಿಧಿ

ಶುದ್ಧ ಏಕಾದಶಿಯ ಹೆಸರು ಹರಿವಾಸರ ಎಂದು. ವಿದ್ಧಾ ಏಕಾದಶಿಯನ್ನು ತ್ಯಾಗ ಮಾಡಬೇಕು. ಮಹಾದ್ವಾದಶಿ ಉಪಸ್ಥಿತವಾದರೆ ಏಕಾದಶಿಯನ್ನು ಬಿಟ್ಟು ದ್ವಾದಶಿಯನ್ನು ಪಾಲನೆ ಮಾಡಬೇಕು. ಪೂರ್ವ ದಿನದಂದು ಬ್ರಹ್ಮಚರ್ಯದ ಪಾಲನೆ, ಏಕಾದಶಿಯ ದಿನದಂದು ನಿರ್ಜಲ ಉಪವಾಸ, ರಾತ್ರಿ ಜಾಗರಣೆಯೊಂದಿಗೆ ನಿರಂತರ ಭಜನೆ, ಉಪವಾಸದ ಮಾರನೆ ದಿನವೂ ಸಹ ಬ್ರಹ್ಮಚರ್ಯವನ್ನು ಪಾಲಿಸಬೇಕು ಮತ್ತು ಉಪಯುಕ್ತ ಕಾಲಕ್ಕೆ ಪಾರಣೆ ಮಾಡಬೇಕು ಹೀಗೆ ಹರಿವಾಸರವನ್ನು ಗೌರವಿಸಬೇಕು. ಸಾಮರ್ಥ್ಯಹೀನರು ಅಥವಾ ಶಕ್ತಿಹೀನ ಸ್ಥಿತಿಯಲ್ಲಿ ಪ್ರತಿನಿಧಿ ಅಥವಾ ಅನುಕಲ್ಪದ ವ್ಯವಸ್ಥೆಯುಂಟು. ಹಣ್ಣು, ಹಾಲು, ನೀರು, ಗಡ್ಡೆ, ಪಂಚಗವ್ಯ ಅಥವಾ ವಾಯು– ಈ ಎಲ್ಲ ವಸ್ತುಗಳು ಕ್ರಮೇಣ ಒಂದಕ್ಕಿಂತ ಒಂದು ಶ್ರೇಷ್ಠವಾದದ್ದು. ಮಹಾಭಾರತ ಉದ್ಯೋಗ ಪರ್ವದ ಅನುಸಾರವಾಗಿ ನೀರು, ಮೂಲಿಕೆ, ಹಣ್ಣು, ಹಾಲು, ಧೃತ, ಗುರುವಚನ ಮತ್ತು ಔಷಧಿ– ಇವುಗಳಿಂದ ವ್ರತ ನಷ್ಟವಾಗುವುದಿಲ್ಲ. ಅನುಕಲ್ಪದಲ್ಲಿ ಕೇವಲ ಫಲಹಾರದ ವ್ಯವಸ್ಥೆಯುಂಟು. ಆದರೆ ತಮ್ಮ ಹನ್ನೊಂದು ಇಂದ್ರಿಯಗಳನ್ನು (ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು) ಸಮ್ಯಮಿತಗೊಳಿಸಿ ಏಕಾದಶಿಯನ್ನು ಪಾಲಿಸಬೇಕು.

ಏಕಾದಶಿ ತಿಥಿಯ ನಿರ್ಣಯ

ಶ್ರೀ ಚೈತನ್ಯ ಚರಿತಾಮೃತ ಮದ್ಯಲೀಲೆಯಲ್ಲಿ ಸನಾತನ ಶಿಕ್ಷಣಕ್ಕೆ ಒಳಗೊಂಡಂತೆ ಮಹಾಪ್ರಭುಗಳು ಹೇಳುತ್ತಾರೆ–

ಏಕಾದಶಿ, ಜನ್ಮಾಷ್ಟಮಿ, ವಾಮನದ್ವಾದಶಿ ।
ಶ್ರೀರಾಮನವಮಿ, ಆರ ನೃಸಿಂಹ ಚತುರ್ದಶಿ ॥
ಏಇ ಸಬೇ ವಿದ್ಧಾ – ತ್ಯಾಗ ಅವಿದ್ಧಾ ಕರಣ ।
ಅಕರಣೇ ದೋಷ, ಕೈಲೇ ಭಕ್ತಿರ ಲಂಭನ ॥

(ಶ್ರೀಚೈತನ್ಯಚರಿತಾಮೃತ ಮಧ್ಯ– ೨೪/೩೪೧–೩೪೨)

ಏಕಾದಶಿಯಂದು ಅರುಣೊದಯ ಕಾಲ ಅರ್ಥಾತ್ ಸೂರ್ಯೋದಕ್ಕೆ ಮೊದಲು ಒಂದು ಘಂಟೆ ಮುವತ್ತುನಾಲ್ಕು ನಿಮಿಷಗಳ ಮಧ್ಯದಲ್ಲಿ ದಶಮಿ ಕಿಂಚಿತ್ ಸ್ಪರ್ಶಮಾಡಿದರೂ ಅದನ್ನು ಏಕಾದಶಿ ವಿದ್ಧಾ ಎನ್ನಲಾಗುತ್ತದೆ. ಏನಾದರು ಏಕಾದಶಿಯ ಶೇಷ ಭಾಗದಲ್ಲಿ ದ್ವಾದಶಿ ಶುರುವಾದರೆ ಆಗ ಇದರಲ್ಲಿ ಯಾವುದೇ ದೋಷವಿರುವುದಿಲ್ಲ. ಅದನ್ನೇ ಪಾಲಿಸಬೇಕಾದಂತಹದ್ದು. ಹೆಚ್ಚಿನ ವಿವರಣೆಗಳಿಗಾಗಿ ಶ್ರೀಹರಿಭಕ್ತಿವಿಲಾಸ ಗ್ರಂಥದ ಹನ್ನೆರಡು ಮತ್ತು ಹದಿಮೂರನೇ ಅಧ್ಯಾಯವನ್ನು ಓದಬಹುದು.

ಏಕಾದಶಿ ಕೀರ್ತನೆಗಳು

ಶ್ರೀಹರಿವಾಸರೇ ಹರಿ–ಕೀರ್ತನ ವಿಧಾನ ।
ನೃತ್ಯ ಆರಂಭಿಲಾ ಪ್ರಭು ಜಗತೇರ ಪ್ರಾಣಾ ॥
ಪುಣ್ಯವಂತ ಶ್ರೀವಾಸ – ಅಂಗನೇ ಶುಭಾರಂಭ ।
ಉಠಿಲ ಕೀರ್ತನ – ಧ್ವನಿ 'ಗೋಪಾಲ ಗೋವಿಂದ' ॥
ಮೃದಂಗ–ಮಂದಿರಾ ಬಾಜೇ ಶಂಖ – ಕರತಾಲ ।
ಸಂಕೀರ್ತನ ಸಂಗೇ ಸಬ ಹಇಲ ಮಿಶಲ ॥
ಬ್ರಹ್ಮಾಂಡ ಭೇದಿಲೇ ಧ್ವನಿ ಪುರಿಯಾ ಆಕಾಶ ।
ಚೈದಿಕೇರ ಅಮಂಗಳ ಜಾಯ ಸಬ ನಾಶ ॥
ಉಷಃಕಾಲ ಹಇಲೇ ನೃತ್ಯ ಕರೆ ವಿಶ್ವಂಭರ ।
ಯೂಥ ಯೂಥ ಹಇಲ ಜತ ಗಾಜನ ಸುಂದರ ॥
ಶ್ರೀವಾಸ – ಪಂಡಿತ ಲಇಯಾ ಏಕ ಸಂಪ್ರದಾಯ ।
ಮುಕುಂದ ಲಇಯಾ ಆರ ಜನ–ಕತ ಗಾಯ ॥
ಲಇಯ ಗೋವಿಂದ ಘೋಷ ಆರ ಕತ ಜನ ।
ಗೌರಚಂದ್ರ – ನೃತ್ಯೇ ಸಬೆ ಕರೇನ ಕೀರ್ತನ ॥
ಧರಿಯಾ ಬುಲೇನ ನಿತ್ಯಾನಂದ ಮಹಾಬಲೀ
ಅಲಕ್ಷಿತೇ ಅದ್ವೈತ ಲಯೇನ ಪದಧುಲಿ ॥
ಗದಾಧರ – ಆದಿ ಜತ ಸಜಲ–ನಯನೇ ।
ಆನಂದೇ ವಿಹ್ವಲ ಹಇಲ ಪ್ರಭುರ ಕೀರ್ತನೇ ॥
ಜಖನ ಉದ್ದಂಡ ನಾಚೇ ಪ್ರಭು ವಿಶ್ವಂಭರ ।
ಪೃಥಿವೀ ಕಂಪಿತ ಹಯ, ಸಬೇ ಪಾಯ ಡರ ॥
ಕಖನೋ ವಾ ಮಧುರ ನಾಚಯೇ ವಿಶ್ವಂಭರ ।
ಜೇನ ದೇಖಿ ನಂದೇರ ನಂದನ ನಟವರ ॥
ಅಪರೂಪ ಕೃಷ್ಣವೇಶ, ಅಪರೂಪ ನೃತ್ಯ ।
ಆನಂದೇ ನಯನ – ಭರಿ' ದೇಖೇ ಸಬ ಭೃತ್ಯ ॥
ನಿಜಾನಂದೇ ನಾಚೇ ಮಹಾಪ್ರಭು ವಿಶ್ವಂಭರ ।
ಚರಣೇರ ತಾಲ ಶುತಿ ಅತಿ ಮನೋಹರ ॥
ಭಾವ – ಭರೇ ಮಾಲಾ ನಾಹೀ ರಹೇ ಗಲಾಯ ।
ಛಿಂಡಿಯಾ ಪಡಯೇ ಗಿಯಾ ಭಕತೇರ ಪಾಯ ॥
ಚತುರ್ದಿಕೇ ಶ್ರೀಹಾರಿ – ಮಂಗಳ – ಸಂಕೀರ್ತನ ।

ಮಾಝೇ ನಾಚೇ ಜಗನ್ನಾಥ – ಮಿಶ್ರೇರ ನಂದನ ॥
ಜಾಂರ ನಾಮಾನಂದೇ ಶಿವ ವಸನ ನಾ ಜಾನೇ ।
ಜಾಂರ ಯಶೇ ನಾಚೇ ಶಿವ, ಸೇ ನಾಚೇ ಆಪನೇ ॥
ಜಾಂರ ನಾಮೇ ವಾಲ್ಮೀಕಿ ಹಇಲಾ ತಪೋಧನ ।
ಜಾಂರ ನಾಮೇ ಅಜಾಮಿಲ ಪಾಇಲ ಮೋಚನ ॥
ಜಾಂರ ನಾಮ ಶ್ರವಣೇ ಸಂಸಾರ–ಬಂಧ ಘುಚೇ ।
ಹೇನ ಪ್ರಭು ಅವತರಿ ' ಕಲಿಯುಗೇ ನಾಚೇ ॥
ಜಾಂರ ನಾಮ ಗಾಯಿ', ಶುಕ–ನಾರದ ಬೇಡಾಯ ।
ಸಹಸ್ರ–ವದನ ಪ್ರಭು ಜಾಂರ ಗುಣ ಗಾಯ ॥
ಸರ್ವ–ಮಹಾ–ಪ್ರಾಯಶ್ಚಿತ್ತ ಜೇ ಪ್ರಭುರ ನಾಮ ।
ಸೇ ಪ್ರಭು ನಾಚಯೇ, ದೇಖೇ ಜತ ಭಾಗ್ಯವಾನ್ ॥
ಪ್ರಭುರ ಆನಂದ ದೇಖಿ, ಭಾಗವತಗಣ ।
ಅನ್ಯೋನ್ಯೇ ಗಲಾ ಧರಿ' ಕರಯೇ ಕ್ರಂದನ ॥
ಸಬಾರ ಅಂಗೇತೇ ಶೋಭೇ ಶ್ರೀಚಂದನ–ಮಾಲಾ ।
ಆನಂದೇ ಗಾಯೇನ ಕೃಷ್ಣ–ರಸೇ ಹಇ' ಭೋಲಾ ॥
ಯತೇಕ ವೈಷ್ಣವ–ಸಬ ಕೀರ್ತನ–ಆವೇಶೇ ।
ನಾ ಜಾನೇ ಆಪನ ದೇಹ, ಅನ್ಯ ಜನ ಕಿಸೇ ॥
ಜಯ–ಕೃಷ್ಣ–ಮುರಾರಿ–ಮುಕುಂದ–ವನಮಾಲೀ ॥
ಅಹರ್ನಿಶ ಭಕ್ತ ಸಂಗೇ ನಾಚೇ ವಿಶ್ವಂಭರ ।
ಶಾಂತಿ ನಾಹಿ ಕಾರೋ, ಸಬೇ ಸತ್ಯ–ಕಲೇವರ ॥
ಏಇಮತ ನಾಚೇ ಮಹಾಪ್ರಭು ವಿಶ್ವಂಭರ ।
ನಿಶಿ ಅವಶೇಷ ಮಾತ್ರ ಸೇ ಏಕ ಪ್ರಹರ ॥
ಏಇಮತ ಆನಂದ ಹಯ ನವದ್ವೀಪ–ಪುರೇ ।
ಪ್ರೇಮರಸೇ ವೈಕುಂಠೇರ ನಾಯಕ ವಿಹಾರೇ ॥
ಏ ಸಕಲ ಪುಣ್ಯಕಥಾ ಜೇ ಕರೇ ಶ್ರವಣ ।
ಭಕ್ತ ಸಂಗೇ ಗೌರಚಂದ್ರ ರಹು ತಾ'ರ ಮನ ॥
ಶ್ರೀಕೃಷ್ಣಚೈತನ್ಯ – ನಿತ್ಯಾನಂದಚಾಂದ ಜಾನ ।
ವೃಂದಾವನ – ಧಾಮ ತಛು ಪದಯುಗೇ ಗಾ'ನ ॥

(ಶ್ರೀಚೈತನ್ಯಭಾಗವತ)

ಅನುಕೂಲ ಗ್ರಹಣ–ವಾಚಿಕ ಮತ್ತು ಮಾನಸಿಕ (ಏಕಾದಶೀ–ಕೀರ್ತನೆ)

ಶುದ್ಧ ಭಕತ, ಚರಣ–ರೇಣು,
ಭಜನ ಅನುಕೂಲ
ಭಕತ ಸೇವಾ, ಪರಮ ಸಿದ್ಧಿ,
ಪ್ರೇಮಲತಿಕರ ಮೂಲ ॥
ಮಾಧವ–ತಿಥಿ, ಭಕ್ತಿ ಜನನೀ,
ಯತನೇ ಪಾಲನ ಕರಿ ।
ಕೃಷ್ಣವಸತಿ, ವಸತಿ ವಲಿ',
ಪರಮ ಆದರೇ ವರಿ ॥
ಗೌರ ಆಮಾರ, ಜೇ ಸಬ ಸ್ಥಾನೇ,
ಕರಲ ಭ್ರಮಣ ರಂಗೇ ।
ಸೇ ಸಬ ಸ್ಥಾನ, ಹೇರಿಬೋ ಆಮಿ,
ಪ್ರಣತಿ – (ಭಕತ) ಸಂಗೇ ॥
ಮೃದಂಗ–ವಾದ್ಯ, ಸುನಿತೇ ಮನ,
ಅವಸರ ಸದಾ ಯಾಚೇ ।
ಗೌರ–ವಿಹಿತ, ಕೀರ್ತನ ಸುನಿ',
ಆನಂದೇ ಹೃದಯ ನಾಚೇ ॥
ಯುಗಲಮೂರ್ತಿ, ದೇಖಿಯಾ ಮೋರ,
ಪರಮ ಆನಂದ ಹಯ ।
ಪ್ರಸಾದ–ಸೇವಾ, ಕರಿತೇ ಹಯ,
ಸಕಲ ಪ್ರಪಂಚ–ಜಯ ॥
ಜೇ ದಿನ ಗೃಹೇ, ಭಜನ ದೇಖಿ,
ಗೃಹೇತೇ ಗೋಲೋಕ ಭಾಯ ।
ಚರಣ–ಸೀಧೂ ದೇಖಿಯಾ ಗಂಗಾ,
ಸುಖ ನಾ ಸೀಮಾ ಪಾಯ ॥
ತುಲಸೀ ದೇಖಿ', ಜುಡಾಯ ಪ್ರಾಣಾ,
ಮಾಧವತೋಷಣೀ ಜಾನಿ' ।
ಗೌರ–ಪ್ರಿಯ, ಶಾಕ–ಸೇವನೇ,
ಜೀವನ ಸಾರ್ಥಕ ಮಾನಿ ॥
ಭಕತಿ ವಿನೋದ, ಕೃಷ್ಣ–ಭಜನೇ,
ಅನುಕೂಲ ಪಾಯ ಜಾಹಾ ।
ಪ್ರತಿದಿವಸೇ, ಪರಮ–ಸುಖೇ,
ಸ್ವೀಕಾರ ಕರಯೇ ತಾಹಾ ॥

(ಶ್ರೀಲ ಭಕ್ತಿವಿನೋದಠಾಕೂರರು)

ಅನುವಾದ– ಶುದ್ಧ ಭಕ್ತರ ಚರಣ ಧೂಳು ಭಜನೆಗೆ ಅನುಕೂಲಕರವಾದದ್ದು. ಭಕ್ತರ ಸೇವೆಯೇ ಪರಮಸಿದ್ಧಿ ಮತ್ತು ಪ್ರೇಮರೂಪಿ ಲತೆಯ ಮೂಲ. ಮಾಧವ ತಿಥಿ (ಏಕಾದಶಿ) ಭಕ್ತಿಗೂ ಸಹ ಜನ್ಮ ನೀಡುವಂತಹವಳು ಮತ್ತು ಇದರಲ್ಲಿ ಕೃಷ್ಣನು ನೆಲಸಿದ್ದಾನೆ, ಹೀಗೆ ಅರಿತುಕೊಂಡು ಪರಮಾದರ ಪೂರ್ವಕವಾಗಿ ಇದನ್ನು ಆಯ್ದುಕೊಂಡು ಯತ್ನಪೂರ್ವಕವಾಗಿ ಪಾಲನೆ ಮಾಡುತ್ತೇನೆ, ನನ್ನ ಗೌರಸುಂದರರು ಯಾವ–ಯಾವ ಸ್ಥಾನಗಳಲ್ಲಿ ಆನಂದಪೂರ್ವಕವಾಗಿ ಸಂಚರಿಸಿರುವರೋ, ನಾನೂ ಸಹ ಪ್ರೇಮಿ ಭಕ್ತರೊಂದಿಗೆ ಆ ಎಲ್ಲ ಸ್ಥಾನಗಳ ದರ್ಶನವನ್ನು ಪಡೆಯುತ್ತೇನೆ. ಮೃದಂಗದ ಮಧುರ ಧ್ವನಿಯನ್ನು ಕೇಳಲು ನನ್ನ ಮನಸ್ಸು ಸರ್ವದಾ ಅತ್ಯಾಸಕ್ತಿಯಿಂದ ಬಯಸುತ್ತಿರುತ್ತದೆ ಹಾಗೂ ಶ್ರೀಗೌರಸುಂದರರನಿಗೆ ಸಂಬಂಧಿತ ಕೀರ್ತನೆಗಳನ್ನು ಕೇಳುತ್ತ ಆನಂದದಿಂದ ತುಂಬಿ ನನ್ನ ಹೃದಯ ಕುಣಿಯಲು ಆರಂಭಿಸುತ್ತದೆ. ಯುಗಲ ಮೂರ್ತಿಯನ್ನು ದರ್ಶನ ಮಾಡಿ ನನಗೆ ಪರಮ ಆನಂದ ಪ್ರಾಪ್ತವಾಗುತ್ತದೆ. ಮಹಾಪ್ರಸಾದವನ್ನು ಸೇವಿಸುವುದರಿಂದ ಮಾಯೆಯನ್ನೂ ಸಹ ಜಯಿಸಬಹುದು.

ಯಾವ ದಿನದಂದು ಮನೆಯಲ್ಲಿ ಭಜನೆ–ಕೀರ್ತನೆ ಮಾಡಲಾಗುವುದೋ, ಆ ದಿನ ಮನೆಯು ಸಾಕ್ಷಾತ್ ಗೋಲೋಕವಾಗಿಬಿಡುವುದು. ಶ್ರೀಭಗವಂತನ ಚರಣಾಮೃತ ಮತ್ತು ಶ್ರೀಗಂಗೆಯ ದರ್ಶನ ಪಡೆದರೆ ಆಗ ಸುಖಕ್ಕೆ ಮಿತಿಯೇ ಇರುವುದಿಲ್ಲ ಮತ್ತು ಮಾಧವಪ್ರಿಯ ಶ್ರೀತುಳಸಿದೇವಿಯ ದರ್ಶನಮಾಡಿ ತ್ರಿತಾಪಗಳಿಂದ ದಗ್ಧವಾದ ಹೃದಯವು ಸುಶೀತಲ ಹೊಂದುವುದು. ಗೌರಸುಂದರರನ ಪ್ರಿಯ ಸಂಗದ ಆಸ್ವಾದನೆ ಮಾಡುವುದೇ ನನ್ನ ಜೀವನದ ಸಾರ್ಥಕತೆ ಎಂದು ಭಾವಿಸುತ್ತೇನೆ. ಕೃಷ್ಣಭಜನೆಗೆ ಅನುಕೂಲಕರವಾದ ಜೀವನನಿರ್ವಾಹಣೆಗೆ ಏನೆಲ್ಲ ಪಡೆಯುವೆನೋ, ಈ ಭಕ್ತಿವಿನೋದನು ಪ್ರತಿದಿನ ಅದನ್ನು ಸುಖಪೂರ್ವಕವಾಗಿ ಸ್ವೀಕರಿಸುತ್ತೇನೆ.

ಏಕಾದಶಿಯನ್ನು ಕುರಿತು ಶ್ರೀಲ ಗುರುದೇವರ ಮೂಲಕ ನೀಡಲ್ಪಟ್ಟ ಪ್ರವಚನೆಗಳ ಮಾಹಿತಿ

೦೪/೦೭/೧೯೯೪	ಶ್ರೀಕೇಶವಜೀ ಗೌಡಿಯ ಮಠ, ಮಥುರ	ಏಕಾದಶಿ ಕಥೆ
೦೫/೦೬/೧೯೯೮	ಲಾಸ್ ಏಂಜಲಸ್, ಕೇಲಿಫೋರ್ನಿಯ	ಏಕಾದಶಿ ಎಂಬುದು ಒಂದು ದಿನವಲ್ಲ ಅದು ಸ್ವಯಂ ಶ್ರೀಕೃಷ್ಣ.
೧೩/೦೫/೨೦೦೦	ಹವಾಯಿ ದ್ವೀಪ	ಏಕಾದಶಿ ವ್ರತ
೨೦೦೧	ಹ್ಯಾಸ್ಟನ್, ಟೆಕ್ಸಾಸ್	ಏಕಾದಶಿ ಸಮಸ್ತ ಕಾಮನೆಗಳನ್ನು ಪೂರ್ಣಮಾಡುತ್ತದೆ
೨೨–೨೪/೦೮/೨೦೦೧	ಶ್ರೀಕೇಶವಜೀ ಗೌಡಿಯ ಮಠ, ಮಥುರಾ	ಅಂಬರೀಷ ಮಹಾರಾಜನ ಮಹಿಮೆ
೨೩/೦೨/೨೦೦೨	ಬ್ರಿಸ್ಬೇನ್, ಆಸ್ಟ್ರೇಲಿಯ	ಮಾಧವ ತಿಥಿ
೨೭/೦೫/೨೦೦೭	ಹ್ಯೂಸ್ಟನ್, ಟೆಕ್ಸಾಸ್	ರಾಜಾ ರುಕ್ಮಾಂಗದನ ಕಥೆ

ಅನ್ನವನ್ನು ಸ್ವೀಕರಿಸದಿರಲು ವೈಜ್ಞಾನಿಕವಾದ ಕಾರಣ

ಪ್ರತ್ಯೇಕ ಮಾಸದ ಶುದ್ಧ ಶುಕ್ಲ ಮತ್ತು ಕೃಷ್ಣ ಪಕ್ಷಗಳಲ್ಲಿ ಏಕಾದಶಿಯಿಂದ ಪೂರ್ಣಿಮೆ ಮತ್ತು ಏಕಾದಶಿಯಿಂದ ಅಮಾಸ್ಯದವರೆಗು ಸಮುದ್ರವು ಪ್ರಭಲವಾಗಿ ಉಬ್ಬರಗೊಳ್ಳುತ್ತದೆ ಮತ್ತು ಅಲೆಗಳು ಬಹಳ ಎತ್ತರ–ಎತ್ತರವಾಗಿ ಮೇಲೇಳುತ್ತದೆ. ಇದಕ್ಕೆ ಕಾರಣ ಈ ಐದು ದಿನಗಳಲ್ಲಿ ಚಂದ್ರನು ಪೃಥ್ವಿಗೆ ಸ್ವಲ್ಪ ಹತ್ತಿರ ಬರುತ್ತಾನೆ ಮತ್ತು ನೀರನ್ನು ಆಕರ್ಷಿಸಿಕೊಂಡು ತನ್ನೆಡೆಗೆ ಎಳೆದುಕೊಳ್ಳುತ್ತಾನೆ. ಮನುಷ್ಯ ಶರೀರದಲ್ಲಿ ಸುಮಾರು ೯೦ ಪ್ರತಿಶತ ನೀರಿನಾಂಶ ಇರುತ್ತದೆ, ಈ ನೀರಿನಲ್ಲೂ ಸಹ ಉಪಯುಕ್ತ ದಿನಗಳಲ್ಲಿ ಚಂದ್ರನ ಪ್ರಭಾವ ಬೀರುತ್ತದೆ. ಅನ್ನವನ್ನು ಸೇವಿಸುವುದರಿಂದ ಅನ್ನವು ಈ ನೀರನ್ನು ಹೀರಿಕೊಳ್ಳುತ್ತದೆ ಮತ್ತು ಚಂದ್ರನ ಮುಕಾಂತರದಿಂದ ನೀರು ಕಡಿಮೆಯಾಗುವ ಕಾರಣ ಅನಾರೋಗ್ಯ ಉಂಟಾಗುವ ಸಾಧ್ಯತೆಗಳಿವೆ. ಮನುಷ್ಯ ಶರೀರ ಒಂದು ಯಂತ್ರದಂತೆ (ಒಚಿಛಿಟಿಜ), ನಾವು ದಿನದಲ್ಲಿ ಮೂರು ಬಾರಿ ಊಟ ಮಾಡುತ್ತೇವೆ ಇದರಿಂದ ಯಂತ್ರಕ್ಕೆ ವಿಶ್ರಾಮ ಸಿಗುವುದಿಲ್ಲ ಆದ್ದರಿಂದ ಏಕಾದಶಿ ದಿನದಂದು ಊಟವನ್ನು ಮಾಡದಿದ್ದರೆ ಶರೀರಕ್ಕೆ ವಿಶ್ರಾಮ ಸಿಗುತ್ತದೆ ಮತ್ತು ನಾಮ–ಭಜನೆ ಮಾಡಲು ಅಧಿಕ ಸಮಯವು ಸಹ ಸಿಗುತ್ತದೆ ಹಾಗೂ ಭಕ್ತಿಯೂ ಸಹ ಪುಷ್ಪಗೊಂಡು ವೃದ್ಧಿಸುತ್ತದೆ.

–ಶ್ರೀಲ ಭಕ್ತಿವೇದಾಂತ ನಾರಾಯಣ ಗೋಸ್ವಾಮಿ ಮಹಾರಾಜರು
(ಹವಾಯಿ, ೧೩ ಮೇ ೨೦೦೦)

ಅಪರಾ ಏಕಾದಶಿ

ಈ ಜ್ಯೇಷ್ಠ ಕೃಷ್ಣ ಪಕ್ಷದ 'ಅಪರಾ' ಎಂಬ ಹೆಸರಿನ ಏಕಾದಶಿಯ ವ್ರತದ ಕಥೆಯು ಬ್ರಹ್ಮಾಂಡ ಪುರಾಣದ ಯುಧೀಷ್ಠಿರ–ಶ್ರೀಕೃಷ್ಣ ಸಂವಾದದಲ್ಲಿ ವರ್ಣಿಸಲಾಗಿದೆ.

ಈ ಗ್ರಂಥದಲ್ಲಿ ಈ ಪ್ರಕಾರವಾಗಿ ವರ್ಣಿಸಲಾಗಿದೆ, ಒಮ್ಮೆ ಮಹಾರಾಜ ಯುಧೀಷ್ಠಿರರು ಭಗವಾನ್ ಶ್ರೀಕೃಷ್ಣನಲ್ಲಿ ಕೇಳಿದರು– ಹೇ ಜನಾರ್ದನ! ಜ್ಯೇಷ್ಠ ಕೃಷ್ಣ–ಪಕ್ಷದ ಏಕಾದಶಿಯ ಹೆಸರೇನು ಮತ್ತು ಈ ವ್ರತದ ಮಹಿಮೆ ಎಂತಹದ್ದು? ನೀವು ಕೃಪೆಮಾಡಿ ನನಗೆ ಇದನ್ನು ವಿವರಿಸಿರಿ.

ಮಹಾರಾಜ ಯುಧಿಷ್ಠಿರರ ಪ್ರಶ್ನೆಗೆ ಭಗವಾನ್ ಶ್ರೀಕೃಷ್ಣ ಉತ್ತರಿಸಿದನು– ಮಹಾರಾಜ ಯುಧಿಷ್ಠಿರ! ಜನರ ಶ್ರೇಯಸ್ಸಿಗಾಗಿ ನೀವು ಬಹಳ ಉತ್ತಮವಾದ ಪ್ರಶ್ನೆಯನ್ನು ಕೇಳಿದ್ದೀರಿ. ನಿಜವಾಗಲು ಈ ಏಕಾದಶಿ ಬಹಳ ಪುಣ್ಯದಾಯಕವು ಮತ್ತು ದೊಡ್ಡ–ದೊಡ್ಡ ಪಾಪಗಳ ರಾಶಿಯನ್ನು ಧ್ವಂಸಗೊಳಿಸುತ್ತದೆ. ಈ ಏಕಾದಶಿ ಮಿತಿಯಿಲ್ಲದ ಫಲಗಳನ್ನು ಪ್ರಸಾದಿಸುವಂತಹದ್ದು. ಆದ್ದರಿಂದ ಈ ಏಕಾದಶಿಯ ಹೆಸರು 'ಅಪರಾ' ಎಂದು.

ದೇವಪುರಾಧಿಪತಿ ಮಹಾಭಾಗವತ ಮಹಾರಾಜ ರುಕ್ಮಾಂಗದನು ತನ್ನ ರಾಜ್ಯದಲ್ಲಿ

ಒಂದು ಸುಂದರ ಪುಷ್ಪೋದ್ಯಾನ–ವನವನ್ನು ಮಾಡಿದ್ದನ್ನು. ಈ ಉದ್ಯಾನವು ಎಷ್ಟು ಮನೋರಮವಾಗಿದ್ದಿತು ಎಂದರೆ ಜನರಿಗೆ ಅದು ಒಂದು ದರ್ಶನೀಯ ಸ್ಥಳವಾಗಿದ್ದಿತು. ಆ ಉದ್ಯಾನವನಕ್ಕೆ ಬರುವಂತಹ ಜನರು ಅಲ್ಲಿ ಬೆಳೆದಿರುವಂತಹ ಪುಷ್ಪಗಳನ್ನು ಒಂದೊಂದಾಗಿ ಕಿತ್ತು ತೆಗೆದುಕೊಂಡು ಹೋಗುತ್ತಿದ್ದರು. ಇದರ ಪರಿಣಾವಾಗಿ ರಾಜನಿಗೆ ಒಂದು ಪುಷ್ಪವೂ ಸಹ ಸಿಗಲು ಕಷ್ಟವಾಗುತಿತ್ತು. ಪುಷ್ಪಗಳ ಕೊರತೆಯಿಂದ ಉದ್ಯಾನವು ಮರುಳುಗಾಡಿನಂತೆ ಆಗತೊಡಗಿತು. ಉದ್ಯಾನದ ಇಂತಹ ದುರ್ದಶನವನ್ನು ಕಂಡು ರಾಜ ಬಹಳ ಉದಾಸೀನನಾದನು. ರಾಜನು ಕಾವಲುಗಾರರ ಸಂಖ್ಯೆಯನ್ನು ಹೆಚ್ಚಿಸಿದನು. ಜನರು ಪುಷ್ಪವನ್ನು ಕಿತ್ತುವುದನ್ನು ನಿಲ್ಲಿಸಿದರು ಆದರೆ ಪುಷ್ಪದ ಕಳ್ಳತನವಾಗತೊಡಗಿತು, ಯಾವುದೇ ದೃಢವಾದ ಪರಿಣಾಮ ಸಿಗಲಿಲ್ಲ. ಇದಕ್ಕೆ ಅತಿರಿಕ್ತವಾಗಿ ಬೇರೆ ಎಲ್ಲ ಉಪಾಯಗಳನ್ನು ಮಾಡಿದರು, ಆದರೆ ಯಾವುದೇ ಪ್ರಭಾವವು ಸಫಲವಾಗಲಿಲ್ಲ. ಏಕೆಂದರೆ ಈಗ ಪುಷ್ಪಗಳನ್ನು ಕದಿಯುತ್ತಿರುವವರನ್ನು ಮನುಷ್ಯರಿಂದ ಹಿಡಿಯಲು ಸಾದ್ಯವಿಲ್ಲ. ಅವರು ಯಾರೆಂದರೆ ಸ್ವರ್ಗದ ದೇವಿ–ದೇವತೆಗಳು ಮತ್ತು ಅಪ್ಸರೆಯರು, ಆದ್ದರಿಂದ ಅವರನ್ನು ಹಿಡಿಯಲು ಸಾಧ್ಯವಾಗಲಿಲ್ಲ.

ಕೊನೆಗೆ ರಾಜ ತನ್ನ ಕುಲಪುರೋಹಿತರಿಂದ ಈ ಸಮಸ್ಯೆಯ ಪರಿಷ್ಕಾರಕ್ಕಾಗಿ ಏನಾದರು ಮಾಡಲು ಪ್ರಾರ್ಥಿಸಿದನು. ಕುಲಪುರೋಹಿತರು ಇದಕ್ಕೆ ಸಮಾಧಾನ ತಿಳಿಸಿದರು, "ಸಾಯಂಕಾಲದಲ್ಲಿ ಉದ್ಯಾನವನದ ಎಲ್ಲ ಗಿಡಗಳ ಹತ್ತಿರ, ಭಗವಾನ್ ವಿಷ್ಣುವಿನ ಚರಣಾಮೃತ ಅಥವಾ ಭಗವಂತನ ವಿಗ್ರಹದ ಕೊರಳಿಗೆಹಾಕಿರುವಂತಹ ಪವಿತ್ರ ಮಾಲೆಯ ಪುಷ್ಪ ಅಥವಾ ಭಗವಂತನ ಚರಣಗಳಿಗೆ ಅರ್ಪಿಸಿದಂತಹ ಪುಷ್ಪಗಳನ್ನು ಹಾಕಿದರೆ ಆಗ ಕಳ್ಳರನ್ನು ಹಿಡಿಯಲು ಸಾಧ್ಯವಾಗುತ್ತದೆ." ರಾಜ ಅವರು ಹೇಳಿದಂತೆ ಮಾಡಿದನು.

ರಾತ್ರಿಯಾದಂತೆ ಸ್ವರ್ಗದ ದೇವಿ–ದೇವತೆಗಳು ಹಾಗೂ ಅಪ್ಸರೆಯರು ಪ್ರತಿದಿನದಂತೆ ಆ ಉದ್ಯಾನವನಕ್ಕೆ ಇಳಿದರು. ಅವರಲ್ಲಿ ಒಬ್ಬಳು ಅಪ್ಸರೆ ಗಿಡಗಳ ಅಕ್ಕ–ಪಕ್ಕದಲ್ಲಿ ಭಗವಂತನ ಚರಣಗಳಲ್ಲಿ ಅರ್ಪಿತವಾದಂತಹ ಪುಷ್ಪಗಳ ಮೇಲೆ ತನ್ನ ಪಾದಗಳನ್ನು ಇರಿಸಿದಳು ಅದೇ ಸಮಯದಲ್ಲಿ ತಕ್ಷಣವೇ ಅವಳ ಎಲ್ಲ ಪುಣ್ಯವು ನಷ್ಟವಾಯಿತು. ಅವಳು ಸ್ವರ್ಗಕ್ಕೆ ಹಿಂತಿರುಗಲು ಸಮಸ್ತ ಶಕ್ತಿಯು ನಶಿಸಿಹೋಗಿತ್ತು. ಅನ್ಯ ದೇವತಾ–ದೇವಿಯರು ಅವಳನ್ನು ನೋಡುತ್ತ ಸುಮ್ಮನಿದ್ದರು ಆದರೆ ಅವಳನ್ನು ಅವರೊಂದಿಗೆ ಕರೆದೊಯ್ಯಲು ಯಾವುದೇ ಉಪಾಯವನ್ನು ಕಾಣದೆ ಅವಳನ್ನು ಅದೇ ಅಸಹಾಯಕ ಸ್ಥಿತಿಯಲ್ಲಿ ಬಿಟ್ಟು ಸ್ವರ್ಗಕ್ಕೆ ಹಿಂತಿರುಗಿದರು, ಅವಳು ಒಬ್ಬಳೇ ಅಲ್ಲೇ ಉಳಿದಳು ಏಕೆಂದರೆ ಪುಣ್ಯವು ಸಮಾಪ್ತವಾದರೆ ಅವಳಿಗೆ ಹಾರಲು ಸಾಧ್ಯವಾಗುವುದಿಲ್ಲ ಹಾಗು ಮತ್ತೆ ಸ್ವರ್ಗಕ್ಕೆ ಹಿಂತಿರುಗಲು ಸಾಧ್ಯವಾಗುವುದಿಲ್ಲ. ತನ್ನ ಜೊತೆಗಾರರೊಂದಿಗೆ ಬೇರ್ಪಟ್ಟು ಮತ್ತು ಈ ಮೃತ್ಯುಲೋಕದಲ್ಲಿ ವ್ಯಾಪ್ತವಾದ ಜರಾ, ವ್ಯಾಧಿ ಮುಂತಾದ ದುಃಖಗಳಿಂದ ತುಂಬಿರುವಂತಹ ಸ್ಥಳದಲ್ಲಿ ಚಿಂತಿಸುತ್ತ ಅಯ್ಯೋ, ನನಗೆ ಈ ಮೃತ್ಯುಲೋಕದಲ್ಲಿ ಇರಬೇಕಾಯಿತ್ತಲ್ಲ ಎಂದು ದುಃಖಿತಳಾಗಿದ್ದಳು.

ಬೆಳಗಾಗುತ್ತಿದ್ದಂತೆಯೇ ಉದ್ಯಾನವನದಲ್ಲಿ ತೋಟಗಾರರು ಕಾವಲುಗಾರರು

ಅವಳನ್ನು ಕಂಡರು, ಅವಳ ದಿವ್ಯ ತೇಜಸ್ಸು ಅದ್ಭುತವಾದ ರೂಪವನ್ನು ಕಂಡು ಆಶ್ಚರ್ಯಚಕಿತರಾದರು. ಅವರು ರಾಜನ ಅರಮನೆಗೆ ಹೋಗಿ ರಾಜನಿಗೆ ವಿಷಯವನ್ನು ತಿಳಿಸಿದರು. ರಾಜ ಅಲ್ಲಿಗೆ ಬಂದನು ಮತ್ತು ಅವನೂ ಸಹ ಆ ಅಪ್ಸರೆಯನ್ನು ಕಂಡನು. ಅವಳ ಅಲೌಕಿಕ ರೂಪವನ್ನು ಕಂಡ ಕೂಡಲೇ ಅವಳಲ್ಲಿ ದುರ್ಗ, ಲಕ್ಷ್ಮೀ, ಸರಸ್ವತಿ ಮುಂತಾದ ದೇವಿಯರ ಕಲ್ಪನೆಯನ್ನು ಮಾಡಿಕೊಂಡನು ಮತ್ತು ಇದೇ ಭಾವನೆಯಿಂದ ರಾಜನು ಅವಳಿಗೆ ನಮಸ್ಕಾರ ಮಾಡಿದನು.



ಅಪ್ಸರೆಯು ಅಳುತ್ತಿರುವುದನ್ನು ಕಂಡು ರಾಜನಿಗೆ ಬಹಳ ದಯೆ ಉಂಟಾಯಿತು. ರಾಜ ಕೇಳಿದನು– ದೇವಿ! ನೀನು ಏತಕ್ಕಾಗಿ ಅಳುತ್ತಿರುವೆ? ನಿನ್ನ ಕಷ್ಟವೇನು?

ಆ ಅಪ್ಸರೆಯು ನಡೆದ ಎಲ್ಲ ವೃತ್ತಾಂತವನ್ನು ವಿವರಿಸಿದಳು ಮತ್ತು ನಾನು ಸ್ವರ್ಗಕ್ಕೆ ಹಿಂತಿರುಗಬೇಕು ಏಕೆಂದರೆ ಮನುಷ್ಯ–ಲೋಕದಲ್ಲಿ ವೃದ್ಧಾಪ್ಯವು ಬಹಳ ಬೇಗ ಬರುತ್ತದೆ. ಶರೀರ ರೋಗಗ್ರಸ್ತವಾಗುತ್ತದೆ. ವಿಷಯ ಭೋಗವನ್ನು ಸಹ ಇಚ್ಛಾನುಸಾರವಾಗಿ ಭೋಗಿಸಲಾಗುವುದಿಲ್ಲ. ಮಹಾರಾಜ! ಏನಾದರು ನಿಮ್ಮ ಪ್ರಜೆಗಳಲ್ಲಿ ಯಾರಾದರೂ ಸಹ ಸ್ತ್ರೀ ಅಥವಾ ಪುರುಷರು ನನಗೆ ತಮ್ಮ ಒಂದು ಏಕಾದಶಿಯ ಫಲವನ್ನು ದಾನ ಮಾಡಿದರೆ ಆಗ ನಾನು ಮರಳಿಹೋಗಲು ಸಾಧ್ಯವಾಗುತ್ತದೆ. ಒಂದು ಏಕಾದಶಿಯ ಫಲದಿಂದ ನಾನು ಒಂದು ಕಲ್ಪ ಕಾಲದವರೆಗೂ ಸ್ವರ್ಗದ ದಿವ್ಯ ಸುಖವನ್ನು ಭೋಗಿಸಬಲ್ಲೆ.

ರಾಜಾ ರುಕ್ಮಾಂಗದನಿಗೆ ಏಕಾದಶಿಯನ್ನು ಕುರಿತು ಏನೂ ತಿಳಿದಿರಲಿಲ್ಲ. ಅವನು ತನ್ನ ರಾಜಗುರುಗಳನ್ನು ಕೇಳಿದನು ಅವರೂ ಸಹ ಅನಭಿಜ್ಞತೆಯನ್ನು ಪ್ರಕಟಿಸಿದರು ಮತ್ತು ಹೇಳಿದರು ಏಕಾದಶಿ ವ್ರತವನ್ನು ಕುರಿತು ನಾನು ಇದೇ ಮೊದಲಬಾರಿ ಕೇಳುತ್ತಿದ್ದೇನೆ. ಹೀಗೆ ಕುಲಗುರುಗಳಿಗೆ ಇದರ ಬಗ್ಗೆ ತಿಳಿದಿಲ್ಲವೆಂದರೆ ಸಾಧಾರಣ ಪ್ರಜೆಗಳು ಹೇಗೆ ತಿಳಿದಿರುತ್ತಾರೆ. ರಾಜನು ತನ್ನ ನಗರದಲ್ಲಿ ಢಂಗೂರವನ್ನು ಹೊಡೆಸಿದನು

ಯಾವ ನಾಗರಿಕರು ಒಂದು ಏಕಾದಶಿ ವ್ರತದ ಫಲವನ್ನು ನೀಡಿದರೆ ಅವರಿಗೆ ಉನ್ನತ ಬಹುಮಾನ ನೀಡಲಾಗುವುದು. ಮೂರು ನಾಲ್ಕು ದಿನಗಳು ಕಳೆದರೂ ಸಹ ಯಾವುದೇ ನಾಗರಿಕರು ಮುಂದೆ ಬಾರಲಿಲ್ಲ ಹೀಗಾಗಿ ಬಹುಮಾನದ ಅಳತೆಯೂ ಬೆಳೆಯುತ್ತ–ಬೆಳೆಯುತ್ತ ಅದು ಅರ್ಧ ರಾಜ್ಯದವರೆಗು ಬಂದಿತ್ತು ಆದರೆ ಅನುಕೂಲ ಪರಿಣಾಮ ಯಾವುದೂ ಬಾರಲಿಲ್ಲ, ಆಗ ಅಪ್ಸರೆ ತನ್ನ ಮನಸ್ಸಿನಲ್ಲೇ ಯಮರಾಜನ ಗಣಕರಾದ ಚಿತ್ರಗುಪ್ತರನ್ನು ಸ್ಮರಿಸಿಕೊಂಡಳು. ಚಿತ್ರಗುಪ್ತರ ಪ್ರೇರಣೆಯಿಂದ ರಾಜನ ರಾಜ್ಯದಲ್ಲಿ ಒಬ್ಬ ವ್ಯಾಪಾರಿ ಇದ್ದಾನೆ ಅವನ ಹೆಂಗಸು ಒಂದು ಬಾರಿ ತನಗೇ ತಿಳಿಯದೆ ಏಕಾದಶಿ ವ್ರತವನ್ನು ಮಾಡಿದ್ದಳು ಎಂಬುದು ಅಪ್ಸರೆಗೆ ತಿಳಿದುಬಂತು.

ವ್ಯಾಪಾರಿಯ ಹೆಂಡತಿಯ ವಿಳಾಸವನ್ನು ತಿಳಿಸುತ್ತ ಅಪ್ಸರೆಯು ರಾಜನಿಗೆ ಆ ವ್ಯಕ್ತಿಯ ಕುರಿತು ಹೇಳಿದಳು, ಒಂದು ದಿನ ವ್ಯಾಪಾರಿಯ ಹೆಂಡತಿ ಹಾಗೇ ಓಡಾಡುತ್ತ ತನ್ನ ಮನೆಯ ಹತ್ತಿರ ಏಕಾಂತವಾಗಿ ಹಸುಗಳ ಕೊಟ್ಟಿಗೆಯಲ್ಲಿ ಇರಿಸಿದಂತಹ ಪದಾರ್ಥಗಳನ್ನು ನೋಡಲು ಹೋದಳು, ವ್ಯಾಪಾರಿಯ ನೌಕರರಿಗೆ ಅವನ ಹೆಂಡತಿ ಹಸುಗಳ ಕೊಟ್ಟಿಗೆಯ ಒಳಗೆ ಹೋದದ್ದು ಗೊತ್ತಿರಲಿಲ್ಲ. ಅವರು ವ್ಯಾಪಾರಿ ಕರೆದೊಡನೆ ಕೊಟ್ಟಿಗೆಯ ಬಾಗಿಲನ್ನು ಜಡಿದು ಬೀಗಹಾಕಿಕೊಂಡು ಹೊರಟು ಬಿಟ್ಟರು.

ನೌಕರರು ಹೊರಟು ಹೋದರು ಆದರೆ ವ್ಯಾಪಾರಿಯ ಹೆಂಡತಿ ಅಲ್ಲೆ ಬಂದಿತಳಾಗಿದ್ದಳು ಅವಳು ಎಷ್ಟೇ ಕಿರುಚಿಕೊಂಡರು ಆ ಏಕಾಂತದಲ್ಲಿ ಯಾರಿಗೂ ಕೇಳಿಸಲಿಲ್ಲ. ಗೊಂದಲಗೊಂಡ ಆ ಒಂಟಿ ಸ್ತ್ರೀ ಏನು ಮಾಡುತ್ತಾಳೆ; ಬೆಳಿಗ್ಗೆ ಯಾರಾದರು ಕೊಟ್ಟಿಗೆಯ ಬಾಗಿಲು ತೆಗೆಯುತ್ತಾರೆ ಎಂದು ಯೋಚಿಸಿ ಅವಳು ಅಲ್ಲೆ ಮಲಗಿದಳು, ಆದರೆ ಅವಳ ಭಾಗ್ಯ ಹೀಗಿತ್ತು, ಮರುದಿನ ಅಂಗಡಿಗೆ ರಜೆ ನೀಡಲಾಗಿತ್ತು. ಹೀಗಾಗಿ ಹಸುವಿನ ಕೊಟ್ಟಿಗೆಯ ಕಡೆಗೆ ಯಾರು ಬಾರಲಿಲ್ಲ. ಹಸಿವು ಬಾಯಾರಿಕೆಯಿಂದ ಅವಳು ವ್ಯಾಕುಲಳಾಗಿದ್ದಳು. ಇಲ್ಲಿ ವ್ಯಾಪಾರಿ ಮತ್ತು ಅವನ ಮನೆಯವರು ಎಲ್ಲರು ಅವಳನ್ನು ಕಾಣದೆ ಭಯಬೀತರಾಗಿದ್ದರು, ಅವರೆಲ್ಲರು ಬಹಳ ಹುಡುಕಿದರು ಅವಳು ಸಿಗಲಿಲ್ಲ. ಕೊಟ್ಟಿಗೆಯ ಕಡೆಗೆ ಯಾರ ಗಮನವೂ ಹೋಗಲಿಲ್ಲ ಏಕೆಂದರೆ ಅವಳು ಅಲ್ಲಿಗೆ ಎಂದಿಗೂ ಹೋಗುತ್ತಿರಲಿಲ್ಲ. ಆ ದಿನ ಮಾತ್ರ ಹಾಗೆ ಸುಮ್ಮನೆ ಕುತೂಹಲದಿಂದ ಹೋಗಿದ್ದಳು.

ರಜೆಯನ್ನು ಮುಗಿಸಿಕೊಂಡು ಮರು ದಿನ ಒಬ್ಬ ನೌಕರನು ಯಾವುದೋ ಸಾಮಾನಿಗಾಗಿ ಹಸುವಿನ ಕೊಟ್ಟಿಗೆಯ ಬಾಗಿಲನ್ನು ತೆರೆಯುತ್ತಾನೆ ಆಗ ಒಳಗೆ ಜ್ಞಾನವಿಲ್ಲದ ಸ್ಥಿತಿಯಲ್ಲಿ ವ್ಯಾಪಾರಿಯ ಹೆಂಡತಿ ಬಿದ್ದಿದ್ದಳು. ಈ ಸಮಾಚಾರವನ್ನು ವ್ಯಾಪಾರಿಗೆ ತಿಳಿಸಿದರು. ಆ ವ್ಯಾಪಾರಿ ಹತ್ತಿರದ ವೈದ್ಯರನ್ನು ಕರೆತಂದನು. ಅವಳ ಮೇಲೆ ನೀರನ್ನು ಪ್ರೋಕ್ಷಿಸಿದರು ಮತ್ತು ಅವಳ ಪಾದ–ಹಸ್ತಗಳನ್ನು ಉಜ್ಜಿದರು ಮತ್ತು ಅವಳನ್ನು ಎಚ್ಚರಿಸಿ ಮರುಸ್ಥಿತಿಗೆ ತಂದರು ಮತ್ತು ಅವಳ ಊಟಕ್ಕೆ ವ್ಯವಸ್ಥೆ ಮಾಡಿದರು. ಮೆಲ್ಲಗೆ ಅವಳು ಸರಿಯಾದಳು. ಸಂಯೋಗದಿಂದ ಯಾವ ದಿನ ಹಸುವಿನ ಕೊಟ್ಟಿಗೆ ನೋಡಲು ಹೋದಳು, ಅದು ದಶಮಿ ತಿಥಿಯಾಗಿತ್ತು ಮತ್ತು ಮರು ದಿನ ಏಕಾದಶಿ ಆಗಿತ್ತು. ಈ ರೀತಿ ಆ ವ್ಯಾಪಾರಿಯ ಹೆಂಡತಿಯ ಮೂಲಕ ತಿಳಿಯದೆ ಪರಮ ಪವಿತ್ರ ಏಕಾದಶಿಯ

ವ್ರತ ಮಾಡಿದಂತಾಯಿತು.

ಅಪ್ಸರೆಯ ಎಲ್ಲ ಮಾತುಗಳನ್ನು ಕೇಳಿ ರಾಜ ತನ್ನ ಮಂತ್ರಿಗಳು ಮತ್ತು ಸೈನಿಕರನ್ನು ಆ ವ್ಯಾಪಾರಿ ಹಾಗೂ ಅವನ ಹೆಂಡತಿಯನ್ನು ಸಮ್ಮಾನಪೂರ್ವಕವಾಗಿ ಕರೆತರಲು ಹೇಳಿದನು. ವ್ಯಾಪಾರಿ ಹಾಗೂ ಆತನ ಹೆಂಡತಿ ಬಂದು ರಾಜನನ್ನು ಮತ್ತು ಅಪ್ಸರೆಯನ್ನು ಕಂಡು ನಮಸ್ಕಾರ ಮಾಡಿದರು ಮತ್ತು ಹೇಳಿದರು "ನಿಮ್ಮ ಮಂತ್ರಿಗಳು ನಮಗೆ ಎಲ್ಲ ವಿಚಾರವನ್ನು ತಿಳಿಸಿದ್ದಾರೆ, ಈಗ ನಾವು ಏನು ಮಾಡಬೇಕು ಎಂಬುದನ್ನು ಆಜ್ಞೆ ನೀಡಿರಿ".

ಅಪ್ಸರೆ ವ್ಯಾಪಾರಿಯ ಹೆಂಡತಿಗೆ ಹೇಳಿದಳು, "ನೀವು ಏನಾದರು ಕೃಪ ಮಾಡಿ ನನಗೆ ನಿಮ್ಮ ಏಕಾದಶಿ ವ್ರತದ ಫಲವನ್ನು ಸಂಕಲ್ಪ ಪೂರ್ವಕವಾಗಿ ದಾನ ನೀಡಿದರೆ ನಾನು ಈ ವ್ರತದ ಪುಣ್ಯದಿಂದ ಸ್ವರ್ಗಕ್ಕೆ ಹಿಂದಿರುಗುತ್ತೇನೆ." ಆಗ ರಾಜ ತನ್ನ ರಾಜಗುರುವಿನ ಮೂಲಕ ವ್ಯಾಪಾರಿಯ ಹೆಂಡತಿಯಿಂದ ಸಂಕಲ್ಪವನ್ನು ಮಾಡಿಸಿ ಏಕಾದಶಿ ಫಲವನ್ನು ಸ್ವರ್ಗದ ದೇವಿಗೆ ಕೊಡಿಸಿದರು ಆಗ ಆ ದೇವಿ ರಾಜ ಮತ್ತು ವ್ಯಾಪಾರಿ ಹಾಗೂ ಅವನ ಹೆಂಡತಿಗೆ ಧನ್ಯವಾದಗಳನ್ನು ಹೇಳಿ ಎಲ್ಲರಿಗೂ ಔದಾರ್ಯವನ್ನು ಪ್ರಕಟಿಸಿ ಸ್ವರ್ಗಕ್ಕೆ ತೆರಳಿದಳು. ರಾಜ ತನ್ನ ಘೋಷಣೆಯ ಅನುಸಾರವಾಗಿ ವ್ಯಾಪಾರಿಯ ಹೆಂಡತಿಗೆ ತನ್ನ ಅರ್ಧ ರಾಜ್ಯವನ್ನು ನೀಡಿದನು. ಮಹಾರಾಜ ರುಕ್ಮಾಂಗದ ಈ ಘಟನೆಯನ್ನು ಪ್ರತ್ಯಕ್ಷ ಕಂಡು ಏಕಾದಶಿಯು ಬಹಳ ಮಹತ್ಕರವಾದದ್ದು, ಇದು ಬಹಳ ಮಹಿಮೆಯುಳ್ಳದ್ದು ಎಂದು ಪೂರ್ಣವಿಶ್ವಾಸ ಪಡೆದುಕೊಂಡನು. ಒಂದು ದಿನ ರಾಜ ಹೀಗೆ ವಿಚಾರ ಮಾಡಿದನು, "ಇಷ್ಟು ಪುಣ್ಯದಾಯಿನಿ ಮತ್ತು ಕಲ್ಯಾಣಕಾರಿಯಾದ ಏಕಾದಶಿ ವ್ರತವನ್ನು ನನ್ನ ರಾಜ್ಯದ ಪ್ರತ್ಯೇಕ ನಾಗರಿಕರೆಲ್ಲರು ಕಡ್ಡಾಯವಾಗಿ ಆಚರಿಸಬೇಕು." ಆದ್ದರಿಂದ ಅವನು ಈ ನಿಯಮಿತ ರೂಪದಿಂದ ನಿಯಮ ಮಾಡಿದನು.

ರಾಜ ಹೇಳಿದನು–

ಅಷ್ಟವರ್ಷಾಧಿಕೋ ಮರ್ತ್ಯೋ ಹ್ಯಶೀತಿರ್ ನೈವ ಪೂರ್ಯತೇ ।
ಯೋ ಭುಂಕ್ತೇ ಮಾಮಕೇ ರಾಷ್ಟ್ರೇ ವಿಷ್ಣೋರಹನಿ ಪಾಪಕೃತ್ ॥
ಸ ಮೇ ವಧ್ಯಶ್ಚ ನಿರ್ವಾಸ್ಯೋ ದೇಶತಃ ಕಾಲತಶ್ಚ ಮೇ ।
ಏತಸ್ಮಾತ್ ಕಾರಣಾದ್ ವಿಪ್ರ ಏಕಾದಶ್ಯಾಮುಪೋಷಣಮ್ ।
ಕುರ್ಯಾನ್ನರೋ ವಾ ನಾರೀ ವಾ ಪಕ್ಷಯೋರುಭಯೋರಪಿ ॥

(ನಾರದೀಯ ಪುರಾಣ)

ಅರ್ಥಾತ್ 'ಯಾರ ವಯಸ್ಸು ಎಂಟು ವರ್ಷಕ್ಕಿಂತ ಅಧಿಕ ಅಥವಾ ಎಂಬತ್ತು ವರ್ಷಕ್ಕಿಂತ ಕಡಿಮೆ ಇರುವುದೋ, ಅಂತಹ ವ್ಯಕ್ತಿಗಳು ಏನಾದರು ನನ್ನ ರಾಜ್ಯದಲ್ಲಿ ಏಕಾದಶಿಯ ದಿನದಂದು ಅನ್ನ–ಭೋಜನ ಮಾಡಿದರೆ ನಾನು ಅವರಿಗೆ ಮೃತ್ಯು ದಂಡವನ್ನು ನೀಡುವೆನು ಅಥವಾ ನನ್ನ ರಾಜ್ಯದಿಂದ ಬಹಿಷ್ಕಾರ ಮಾಡುವೆನು. ಆದ್ದರಿಂದ ಸ್ತ್ರೀ ಅಥವಾ ಪುರುಷ, ಎಲ್ಲರಿಗೂ ಶುಕ್ಲ ಮತ್ತು ಕೃಷ್ಣ ಪಕ್ಷದ ಎರಡು ಏಕಾದಶಿ ತಿಥಿಯಂದು ಉಪವಾಸವನ್ನು ತಪ್ಪದೇ ಮಾಡಲೇಬೇಕು. ಈ ನಿಯಮ ನನ್ನ ಪುತ್ರ, ತಂದೆ–ತಾಯಿ, ಪತ್ನಿ, ಮಿತ್ರ, ಸಂಬಂಧಿಗಳು ಯಾರೇ ಆಗಿರಲಿ ಎಲ್ಲರಿಗೂ ಇದು ಅನ್ವಯ. ಮಾಡದಿದ್ದಲ್ಲಿ ಎಲ್ಲರಿಗೂ ದಂಡ ವಿಧಿಸಲಾಗುತ್ತದೆ.' ಈ ರೀತಿ

ಘೋಷಣೆಯನ್ನು ರಾಜ ತನ್ನ ಸಮಸ್ತ ರಾಜ್ಯದಲ್ಲಿ ಢಂಗೂರ ಹೊಡೆಸಿದನು. ರಾಜನ ಈ ಆದೇಶವನ್ನು ಒಪ್ಪಿಕೊಂಡು ಆ ರಾಜ್ಯದಲ್ಲಿ ಎಲ್ಲ ಜನರು ಏಕಾದಶಿ ವ್ರತವನ್ನು ಪಾಲಿಸುತ್ತ ವೈಕುಂಠಕ್ಕೆ ಹೋಗುತ್ತಿದ್ದರು.

ಬ್ರಹ್ಮಪುರಾಣದಲ್ಲಿ ಹೀಗೆ ಬರೆದಿದ್ದಾರೆ, ಏಕಾದಶಿ ಬಹಳ ಪುಣ್ಯ ನೀಡುವಂತಹದ್ದು. ಮಹಾಪಾಪ ನಾಶ ಮಾಡುವಂತಹದ್ದು. ಅನಂತ ಫಲಗಳನ್ನು ನೀಡುವಂತಹದ್ದು. ಬ್ರಹ್ಮ–ಹತ್ಯಾ, ಗೋಹತ್ಯಾ, ಭ್ರೂಣಹತ್ಯಾ, ಪರ–ಸ್ತ್ರೀ ಸಂಗ, ಸುಳ್ಳು ನುಡಿಯುವುದು, ಸುಳ್ಳು ಸಾಕ್ಷಿ ನೀಡುವುದು, ಇತರರಿಗೆ ಸುಳ್ಳು ಪ್ರಶಂಸೆಯನ್ನು ಮಾಡುವುದು, ಕಡಿಮೆ ತೂಕಮಾಡುವುದು, ವೇದಗಳನ್ನು ಓದುವ ಅಥವಾ ಪಾಠಮಾಡುವ ಹೆಸರಿನಲ್ಲಿ ಇತರರಿಗೆ ಮೋಸ ಮಾಡುವುದು ಅಥವಾ ಕಾಲ್ಪನಿಕ ಗ್ರಂಥಗಳನ್ನು ಬರೆಯುವುದು ಮುಂತಾದ ಬೇರೆ ದೊಡ್ಡ–ದೊಡ್ಡ ಪಾಪಗಳನ್ನು ಈ ವ್ರತದಿಂದ ಸಮಾಪ್ತಿಗೊಳಿಸಬಹುದು.

ಕಪಟಿ, ಸುಳ್ಳು–ಜ್ಯೋತಿಷೀ ಅಥವಾ ಸುಳ್ಳು ವೈದ್ಯನೂ ಸಹ ತಪ್ಪು ಔಷದಿಯನ್ನು ನೀಡಿದಂತಹ ಪಾಪಿಗಳಿದ್ದರೂ ಈ ವ್ರತವನ್ನು ಆಚರಿಸುವುದರಿಂದ ಈ ಎಲ್ಲ ದೋಷಗಳನ್ನು ಧ್ವಂಸ ಮಾಡುತ್ತದೆ. ಏನಾದರು ಒಬ್ಬ ಕ್ಷತ್ರಿಯನು ತನ್ನ ಕ್ಷತ್ರಿಯ ಧರ್ಮವನ್ನು ತ್ಯಾಗಮಾಡಿ ಯುದ್ಧದಲ್ಲಿ ಓಡಿಹೋದರೆ ಮತ್ತು ಒಬ್ಬ ಶಿಷ್ಯ ತನ್ನ ಗುರುಗಳಿಂದ ದೀಕ್ಷೆ ಪಡೆದು ಭ್ರಮಿತನಾಗಿ ಮತ್ತೆ ಅದೇ ಗುರುಗಳನ್ನು ನಿಂದಿಸಿದರೆ ಆಗ ಯಾವ ಪಾಪಗಳು ಬರುವುದೋ, ಆ ಎಲ್ಲ ಪಾಪಗಳು ಈ ಏಕಾದಶಿ ವ್ರತವನ್ನು ಪಾಲಿಸುವುದರಿಂದ ನಷ್ಟವಾಗುತ್ತದೆ.

ಹೇ ರಾಜ! ಈ ಏಕಾದಶಿಯ ಮಹಿಮೆ ಎಷ್ಟಿರುವುದೆಂದರೆ ಪವಿತ್ರ ಕಾರ್ತಿಕ ಮಾಸದಲ್ಲಿ ಮೂರು ದಿನ ಪ್ರಯಾಗರಾಜದಲ್ಲಿ ಸ್ನಾನ ಮಾಡಿದ, ಮಕರರಾಶಿಯಲ್ಲಿ ಸೂರ್ಯದೇವರು ಅವಸ್ಥಾನ ಮಾಡುವಾಗ, ಇಂತಹ ಮಾಘ ಮಾಸದಲ್ಲಿ ಗಂಗಾ, ಯಮುನಾ ಮತ್ತು ಸರಸ್ವತೀ ಸಂಗಮಸ್ಥಳದಲ್ಲಿ ಸ್ನಾನ ಮಾಡುವುದರಿಂದ, ಕಾಶಿಯಲ್ಲಿ ಶಿವರಾತ್ರಿಯ ವ್ರತವನ್ನು ಮಾಡುವುದರಿಂದ ಅಥವಾ ಗಯಾದಲ್ಲಿ ವಿಷ್ಣು ಪಾದಪದ್ಮಗಳಲ್ಲಿ ಪಿಂಡ ದಾನ ಮಾಡುವುದರಿಂದ ಯಾವ ಫಲ ದೊರಕುವುದೋ, ಅದೇ ಫಲಗಳು ಈ ಏಕಾದಶಿಯ ವ್ರತದಿಂದ ಅನಾಯಾಸವಾಗಿ ಲಭಿಸುತ್ತವೆ. ಹೇ ರಾಜ! ಈ ವ್ರತವು ಪಾಪ ರೂಪಿ ವೃಕ್ಷಗಳನ್ನು ಕಡೆಯಲು ಚೂಪಾದ ಕೊಡ್ಲಿಯಂತೆ, ಪಾಪಗಳನ್ನು ಭಸ್ಮಗೊಳಿಸಲು ಕಾಡ್ಗಿಚ್ಚಿನಂತೆ, ಪಾಪ ರೂಪಿ ಅಂಧಕಾರವನ್ನು ದೂರಮಾಡಲು ತೇಜೋಮಯವಾದ ಸೂರ್ಯನಂತೆ ಹಾಗೂ ಪಾಪ ರೂಪಿ ಮೃಗಕ್ಕೆ ಸಿಂಹ ಸ್ವರೂಪದಂತಹದ್ದು. ಹೇ ರಾಜ! ಅಪರಾ ಏಕಾದಶಿಯ ದಿನದಂದು ಶ್ರದ್ಧಾಪೂರ್ವಕವಾಗಿ ಈ ವ್ರತವನ್ನು ಮಾಡುವುದರೊಂದಿಗೆ ಯಾರು ತ್ರಿವಿಕ್ರಮ ಭಗವಾನ್ ವಿಷ್ಣುವಿನ ಅರ್ಚನೆ ಮಾಡುವರೋ, ಅವರಿಗೆ ಪರಮ ಮಂಗಳವಾಗುತ್ತದೆ ಮತ್ತು ಮೃತ್ಯುವಿನ ನಂತರ ವಿಷ್ಣುಲೋಕವನ್ನು ಪ್ರಾಪ್ತಿಸಿಕೊಳ್ಳುತ್ತಾರೆ. ಸಿಂಹ ರಾಶಿಯಲ್ಲಿ ಬೃಹಸ್ಪತಿಯ ಸ್ಥಿತಿಯಲ್ಲಿ ಗೌತಮೀ ನದಿಯಲ್ಲಿ ಸ್ನಾನ, ಕುಂಭಪರ್ವದಲ್ಲಿ ಕೇದಾರನಾಥನ ದರ್ಶನ, ಬದ್ರೀನಾಥಧಾಮದ ಯಾತ್ರೆ, ದರ್ಶನ ಮತ್ತು ಸೇವೆ, ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರ ಸ್ನಾನ ಮತ್ತು ಸ್ನಾನಕ್ಕೆ ಸಮಯದಲ್ಲಿ ಆನೆ, ಗೋವು, ಕುದುರೆ ಅಥವಾ ಬಂಗಾರ ಮತ್ತು ಭೂಮಿಯ ದಾನ ಮಾಡಿದರೆ

ಯಾವ ಫಲ ಲಭಿಸುವುದೋ ಆ ಎಲ್ಲ ಫಲಗಳೂ 'ಅಪರಾ' ಏಕಾದಶಿಯನ್ನು ಪಾಲನೆ ಮಾಡುವುದರಿಂದ ಸ್ವತಃ ಲಭಿಸುವುದು, ಇಲ್ಲಿಯವರೆಗು ಇದರ ಮಹಿಮೆಯನ್ನು ಕೇಳುವುದರಿಂದಲೂ ಸಹ ಬಹಳ ಪುಣ್ಯ ಲಭಿಸುತ್ತದೆ.

ಇತಿ ಜ್ಯೇಷ್ಠ ಕೃಷ್ಣ–ಪಕ್ಷೀಯ 'ಅಪಾರ ಏಕಾದಶೀ' ಮಹಾತ್ಮ್ಯ ಸಾಮಾಪ್ತ ।

ಶ್ರೀಏಕಾದಶಿ ವ್ರತವು ಭಕ್ತಿಯ ನವಮ ಅಂಗ

ಶ್ರೀಭಕ್ತಿರಸಾಮೃತಸಿಂಧುಬಿಂದು ಗ್ರಂಥದಲ್ಲಿ ಭಕ್ತಿಯ ಅರವತ್ತು ನಾಲ್ಕು ಅಂಗಗಳ ವರ್ಣನೆಯನ್ನು ಮಾಡಲಾಗಿದೆ. ಶ್ರೀಏಕಾದಶಿ ವ್ರತ ಭಕ್ತಿಯ ನವಮ ಅಂಗ. ಶುದ್ಧ ಏಕಾದಶಿಯ ಹೆಸರು ಹರಿವಾಸರ. ವಿದ್ಧಾ ಏಕಾದಶಿಯನ್ನು ತ್ಯಾಗಮಾಡಬೇಕು. ಮಹಾದ್ವಾದಶಿ ಉಪಸ್ಥಿತವಾದರೆ ಏಕಾದಶಿಯನ್ನು ತೊರೆದು ಮಹಾದ್ವಾದಶಿಯನ್ನು ಪಾಲಿಸ ಬೇಕು. ಹಿಂದಿನ ದಿನ ಬ್ರಹ್ಮಚರ್ಯ, ಹರಿವಾಸರದ ದಿನದಂದು ನಿರ್ಜಲ ಉಪವಾಸ ಮತ್ತು ರಾತ್ರಿ ಜಾಗರಣೆಯೊಂದಿಗೆ ನಿರಂತರ ಭಜನೆ ಮತ್ತು ಉಪವಾಸದ ಮರುದಿನ ಬ್ರಹ್ಮಚರ್ಯ ಮತ್ತು ಉಪಯುಕ್ತ ಸಮಯದಲ್ಲಿ ಪಾರಣೆಯನ್ನು ಮಾಡುವುದೇ ಹರಿವಾಸರವನ್ನು ಪಾಲಿಸುವುದು. ಮಹಾಪ್ರಸಾದವನ್ನು ತ್ಯಾಗಮಾಡದಿದ್ದರೆ ನಿರಂಬು (ಜಲರಹಿತ) ಉಪವಾಸವಾಗುವುದಿಲ್ಲ. ಸಾಮರ್ಥ್ಯಹೀನ ಅಥವಾ ಶಕ್ತಿಹೀನ ಸ್ಥಿತಿಗಳಲ್ಲಿ ಪ್ರತಿನಿಧಿ ಅಥವಾ ಅನುಕಲ್ಪದ ವ್ಯವಸ್ಥೆಯುಂಟು– 'ನಕ್ತಂ ಹರಿಷ್ಯಾನ್ನಂ' (ಹರಿಭಕ್ತಿವಿಲಾಸ ೧೨/೩೯ ಧೃತ ವಾಯುಪುರಾಣ) ವಚನಗಳ ಮೂಲಕ ಅನುಕಲ್ಪದ ವಿಧಿ ಉಂಟು. ಪ್ರತಿನಿಧಿಯ ಮೂಲಕ ಉಪವಾಸದ ವಿಧಿಯನ್ನು ಹರಿಭಕ್ತಿವಿಲಾಸ ೧೨/೩೪ ರಲ್ಲಿ ನೀಡಲಾಗಿದೆ.

ಉಪವಾಸೇತ್ವಶಕ್ತಸ್ಯ ಆಹಿತಾಗ್ನೇರಥಾಪಿ ವಾ ।
ಪುತ್ರಾನ್ ವಾ ಕಾರಯೇದನ್ಯಾನ್ ಬ್ರಾಹ್ಮಣಾನ್ ವಾಪಿ ಕಾರಯೇತ್ ॥

ಅರ್ಥಾತ್ ಸಾಗ್ನಿಕ ಬ್ರಾಹ್ಮಣ ಉಪವಾಸವನ್ನು ಮಾಡುವುದರಲ್ಲಿ ಅಸಮರ್ಥರಾಗಿದ್ದರೆ ಪುತ್ರರ ಮೂಲಕ ಅಥವಾ ಬ್ರಾಹ್ಮಣರ ಮೂಲಕ ಉಪವಾಸವನ್ನು ಮಾಡಿಸಬಹುದು.

ಹವಿಷ್ಯಾನ್ನ ಇತ್ಯಾದಿಯ ಮೂಲಕ ಉಪವಾಸದ ವಿಧಿಯು ಹರಿಭಕ್ತಿವಿಲಾಸ ೧೨/೩೯ ಧೃತ ವಾಯುಪುರಾಣದಲ್ಲಿ ಉಂಟು– "ನಕ್ತಂ ಹವಿಷ್ಯಾನ್ನಮನೋದನಮ್ವಾ ಫಲಂ ತಿಲಾಃ ಕ್ಷೀರಮಥಾಂಬುಚಾಜ್ಯಂ । ಯತ್ ಪಂಚಗವ್ಯಂ ಯದಿ ವಾಪಿ ವಾಯುಃ ಪ್ರಶಸ್ತಮತ್ರೋತ್ತರಮುತ್ತಂಚ ॥" ಅರ್ಥಾತ್ ರಾತ್ರಿಯಲ್ಲಿ ಹವಿಷ್ಯಾನ್ನ – ಅನ್ನವನ್ನು ಬಿಟ್ಟು ಬೇರೆ–ಇತರ ದ್ರವ್ಯ– ಹಣ್ಣು, ಹಾಲು, ನೀರು, ಘೃತ, ಪಂಚಗವ್ಯ ಅಥವಾ ವಾಯು– ಈ ಎಲ್ಲ ವಸ್ತುಗಳು ಕ್ರಮವಾಗಿ ಒಂದಕ್ಕಿಂತ ಒಂದು ಶ್ರೇಷ್ಠವಾದದ್ದು. ಮಹಾಭರತ ಉದ್ಯೋಗ ಪರ್ವದ ಅನುಸಾರವಾಗಿ ನೀರು, ಮೂಲಿಕೆ, ಹಣ್ಣು, ಹಾಲು, ಘೃತ, ಬ್ರಾಹ್ಮಣ ಕಾಮನಾ, ಗುರುವಚನ ಮತ್ತು ಔಷಧಿ– ಈ ಏಂಟರಿಂದ ವ್ರತವು ನಷ್ಟವಾಗುವುದಿಲ್ಲ– "ಅಷ್ಟೈತಾನ್ಯ–ವ್ರತಹಾನಿ ಆಪೋ ಮೂಲಂ ಫಲಂ ಪಯಃ । ಹವಿರ್ಬ್ರಾಹ್ಮಣಕಾಮ್ಯ ಚ ಗುರೋರ್ವಚನಮೌಷಧಮ್ ॥"

ಹರಿವಾಸರದಿಂದ ಏಕಾದಶಿ ಮತ್ತು ಜನ್ಮಾಷ್ಟಮೀ, ನೃಸಿಂಹ–ಚತುರ್ದಶಿ, ಗೌರಪೂರ್ಣಿಮಾ ಮುಂತಾದ ವೈಷ್ಣವ ವ್ರತಗಳನ್ನು ಆಚರಿಸಬೇಕು. ನಾಲ್ಕು ವರ್ಣ ಮತ್ತು ನಾಲ್ಕು ಆಶ್ರಮದವರು ಸ್ತ್ರೀ–ಪುರುಷ, ಎಲ್ಲರಿಗೂ ಏಕಾದಶಿ ಪಾಲನೆಯ ವಿಧಾನವನ್ನು ಹರಿಭಕ್ತಿವಿಲಾಸದಲ್ಲಿ ನೀಡಲಾಗಿದೆ. ಸ್ತ್ರೀಯರಲ್ಲಿ ವಿಧವೆ ಮತ್ತು ಮುತ್ತೈದೆ ಎಲ್ಲರಿಗೂ ಏಕಾದಶಿ ಪಾಲನೀಯವದದ್ದು. ಏಕಾದಶಿಯ ದಿನ ಅನ್ನ ಸೇವನೆಯಿಂದ ಗೋಮಾಂಸವನ್ನು ಭಕ್ಷಿಸಿದಂತಹ ಪಾಪವು ಲಬಿಸುತ್ತದೆ. ಪ್ರತ್ಯೇಕ ಮಾಸದ ಎರಡು ಪಕ್ಷಗಳ ಏಕಾದಶಿಯನ್ನು ವಿಧಿವತ್ತಾಗಿ ಪಾಲಿಸಬೇಕು.

ಸುಪುತ್ರಶ್ಚ ಸಭಾರ್ಯಶ್ಚ ಸ್ವಜನೈರ್ಭಕ್ತಿಸಂಯುತಃ ।
ಏಕಾದಶ್ಯಾಮುಪವಸೇತ್ ಪಕ್ಷಯೋರುಭಯೋರಪಿ ॥

(ಹರಿಭಕ್ತಿವಿಲಾಸ ೧೨/೧೯)

ಇಲ್ಲಿ ಸ್ವಭಾರ್ಯದ ತಾತ್ಪರ್ಯದಲ್ಲಿ ಪತ್ನಿಯೊಂದಿಗೆ ವ್ರತವನ್ನು ಪಾಲಿಸುವ ವಿಧಾನವನ್ನು ನೀಡಲಾಗಿದೆ. ಇದರ ಮೂಲಕ ಮುತ್ತೈದೆ ಸ್ತ್ರೀಯರಿಗೂ ಸಹ ಏಕಾದಶಿ ವ್ರತ ಆಚರಣೆಯ ವಿಧಾನವನ್ನು ನೀಡಲಾಗಿದೆ. ಏಕಾದಶಿ ವ್ರತ ನಿತ್ಯವ್ರತ, ಇದನ್ನು ಪಾಲಿಸದಿದ್ದರೆ ದೋಷ ಉಂಟಾಗುತ್ತದೆ "ಅತ್ರ ವ್ರತಸ್ಥ ನಿತ್ಯತ್ವಾದವಶ್ಯಂ ತತ್ ಸಮಾಚರೇತ್ ।" ಆದರೆ ಬೇರೆ–ಬೇರೆ ಇತರ ಕಾಮನೆಗಳ–ಮೂಲಕ ಮಾಡುವ ಉಪವಾಸವನ್ನು ಮುತ್ತೈದೆ ಸ್ತ್ರೀಯರಿಗೆ ನಿಷೇದಿಸಲಾಗಿದೆ, ಏಕಾದಶಿಯನ್ನು ಅಲ್ಲ.

ಶ್ರೀಶ್ರೀಚೈತನ್ಯ–ಶಿಕ್ಷಾಮೃತ ಗ್ರಂಥದಲ್ಲಿ ಶ್ರೀಲ ಭಕ್ತಿವಿನೋದ ಠಾಕುರರು ಹೀಗೆ ಬರೆದಿದ್ದಾರೆ– "ಭಗವತ್–ಸೇವೆಗೆ ಮೊದಲು ನೀರನ್ನು ಸೇವಿಸುವುದು, ಭಗವಂತನಿಗೆ ಅನಿವೇದಿತ ದ್ರವ್ಯಗಳನ್ನು ಸೇವಿಸುವುದು, ಶ್ರೀಮೂರ್ತಿ ಮತ್ತು ಅದರ ಸೇವಾದಿಯನ್ನು ನಿತ್ಯ ದರ್ಶನ ಮಾಡದಿರುವುದು, ತನ್ನ ಪ್ರಿಯವಸ್ತು ಮತ್ತು ಕಾಲೋಚಿತ ಸ್ವಾದಿಷ್ಟ ಫಲಾದಿ ದ್ರವ್ಯಗಳನ್ನು ಭಗವಂತನಿಗೆ ಅರ್ಪಿಸದಿರುವುದು, ಹರಿವಾಸರ ಏಕಾದಶಿ ಅಥವಾ ಭಗವಂತನ ಜನ್ಮ–ದಿನ ಇತ್ಯಾದಿಗಳನ್ನು ಪಾಲನೆ ಮಾಡದಿರುವುದು– ಈ ಎಲ್ಲ ಕಾರ್ಯಗಳು ನಿಷ್ಠೆಯ ಅಭಾವಕ್ಕೆ ಒಳಪಟ್ಟಿದೆ."

ಏಕಾದಶಿಯ ದಿನದಂದು ಪ್ರಯೋಗ ಮಾಡಲು ಯೋಗ್ಯ – ದಂತ ಕಾಷ್ಟೆ

ಪ್ರಾಯಶಃ ಒಸಡುಗಳು ಬಲಹೀನವಾದಾಗ ಹಲ್ಲುಗಳು ಬಿದ್ದುಹೋಗುತ್ತವೆ. ಇದರಿಂದ ತಪ್ಪಿಸಿಕೊಳ್ಳಲು ೧೦೦ ಗ್ರಾಮ್ ಸ್ಫಟಿಕ ಪುಡಿ, ೫೦ ಗ್ರಾಮ್ ಕಲ್ಲುಪ್ಪು ಮತ್ತು ೨ ಚಮೇಚ ಶುದ್ಧ ಅರಿಶಿನ (ಮನೆಯಲ್ಲಿ ಒರಳಿನಿಂದ ಕುಟ್ಟಿ ಮಾಡಿದಂತಹ)– ಈ ಮೂರನ್ನು ಸೇರಿಸಿ ಒಂದು ಡಬ್ಬಿಯಲ್ಲಿ ತುಂಬಿಸ ಬೇಕು. ಬೆಳಿಗ್ಗೆ ಮತ್ತು ರಾತ್ರಿ ಬೆರಳಿನಿಂದ ಹಲ್ಲು ಮತ್ತು ಒಸಡುಗಳನ್ನು ಸ್ವಚ್ಛ ಮಾಡುವುದರಿಂದ ನೂರು ವರ್ಷಗಳವರೆಗು ಹಲ್ಲುಗಳು ಶಕ್ತಿಯುತವಾಗಿ ಇರುತ್ತದೆ ಮತ್ತು ಒಸಡುಗಳಿಂದ ರಕ್ತಬರುವುದು ನಿಲ್ಲುತ್ತದೆ.

ಏಕಾದಶಿಯ ದಿನ ಪ್ರಯೋಗ ಮಾಡಲು ಯೋಗ್ಯ ಪ್ರಾಕೃತಿಕ ಸಾಬುನು ಪೌಡರ್

೧೦೦ ಗ್ರಾಮ್ ಮೂಲ್ತಾನಿ ಮಿಟ್ಟಿ, ೧೦೦ ಗ್ರಾಮ್ ಸಿಗೇಕಾಯಿ ಪುಡಿ, ೧೦೦ ಗ್ರಾಮ್ ಅರೀತಾ ಪುಡಿ (Soap Nut Powder)- ಈ ಮೇಲಿನ ಮೂರು ಪದಾರ್ಥಗಳನ್ನು ಸೇರಿಸಿ ಒಂದು ಡಬ್ಬಿಯಲ್ಲಿ ತುಂಬಿರಿ. ಶೌಚದ ನಂತರ ಹಾಗೂ ಸ್ನಾನದ ಸಮಯ ಇದನ್ನು ಬಳಸುವುದರಿಂದ ಪ್ರಾಣಿಗಳ ಕೊಬ್ಬಿನಿಂದ ಮಾಡಿದಂತಹ ಸಾಬುನುನಿಂದ ದೂರವಿರಬಹುದು.

ಏಕಾದಶಿಯ ದಿನ ಪ್ರಯೋಗ ಮಾಡಲು ಯೋಗ್ಯ ಪ್ರಾಕೃತಿಕ ಶಾಂಪು

೧ ಲೀಟರ್ ಶುದ್ಧ ನೀರು, ೨೦ ನಿಂಬು ಹಣ್ಣಿನ ರಸ, ೨ ಚಮಚ ಸಿಗೇಕಾಯಿ ಪುಡಿ, ೨ ಚಮಚ ಅರೀತಾ ಪುಡಿ (Soap Nut Powder), ೧ ಚಮಚ ಹುಣಸೆ ಪುಡಿ– ಈ ಸಾಮಾಗ್ರಿಗಳನ್ನು ಸೇರಿಸಿ ಒಂದು ಸೀಸನಲ್ಲಿ ಸಂಗ್ರಹಿಸಿರಿ. ಇದರಿಂದ ಸ್ನಾನ ಮಾಡುವುದರಿಂದ ತಲೆ ಕೂದಲು ಉದ್ದಕ್ಕೆ ಬೆಳೆಯುವುದು ಮತ್ತು ದಟ್ಟವಾಗುವುದು.

ಶ್ರೀಗುರುದೇವರ ಏಕಾದಶಿಗೆ ಸಂಬಂಧಿತ ಅಮೂಲ್ಯ ವಚನಗಳು

ಕಡಿಮೆ ಊಟಮಾಡಿ ಮತ್ತು ಅಧಿಕ ಜಪ ಮಾಡಿ

ನಾವು ಈ ರೀತಿಯಾಗಿ ಏಕಾದಶಿಯನ್ನು ಆಚರಿಸಲು ಪ್ರಯತ್ನಿಸಬೇಕು,– ತುಂಬ ಸಾರಿ ನೀರು, ಜೂಸ್, ಹಣ್ಣು ಅಥವಾ ಹಾಲನ್ನು ಸ್ವೀಕರಿಸಬಾರದು. ಏನಾದರು ನೀವು ಯುವಾ ಅಥವಾ ಧೃಡಕಾಯರಾಗಿದ್ದು ಸ್ವಾಸ್ಥರಾಗಿದ್ದರೆ, ಆಗ ನೀವು ಏನನ್ನೂ ಸೇವಿಸದೆ ಅಂದರೆ ನೀರನ್ನು ಸಹ ಸೇವಿಸದೆ ಪೂರ್ತಿ ದಿನ ಮಾತ್ತು ಪೂರ್ತಿ ರಾತ್ರಿಯನ್ನು ಕಳೆಯಬಹುದು. ಏನಾದರು ನಿಮಗೆ ಹೀಗೆ ಮಾಡಲಾಗಲಿಲ್ಲ ಎಂದರೆ, ಆಗ ನೀವು ಮದ್ಯಾಹ್ನ ಅಥವಾ ಸಾಯಂಕಾಲ ಒಂದು ಬಾರಿ ತಿನ್ನುವುದೋ ಅಥವಾ ಕುಡಿಯುವುದನ್ನೋ ಮಾಡಬಹುದು. ಏನಾದರು ನೀವು ಅನಾರೋಗ್ಯ ಅಥವಾ ಬಲಹೀನರಾಗಿದ್ದರೆ, ಆಗ ನೀವು ನಿಮ್ಮ ಜೀವವನ್ನು ಉಳಿಸಿಕೊಳ್ಳಲು ದಿನದಲ್ಲಿ ಎರಡು ಬಾರಿ ಸ್ವಲ್ಪ ಆಹಾರವನ್ನು ಸ್ವೀಕರಿಸ ಬಹುದು ಆದರೆ ನೀವು "ಹರೇ ಕೃಷ್ಣ, ಹರೇ ಕೃಷ್ಣ" ಜಪವನ್ನು ಮಾಡುತ್ತಿರಬೇಕು.

ಪಶ್ಚಿಮ ಭಕ್ತರಿಗೆ ಅಧಿಕ ರಿಯಾಯತಿಗಳನ್ನು ನೀಡಲಾಗಿದೆ ಏಕೆಂದರ ಕೆಲವರು ಭಕ್ತರ ಶರೀರವು ಬಲಹೀನರಾಗಿರುತ್ತಾರೆ. ಇತರ ಭಕ್ತರು ಬಹಳ ಶಕ್ತಿವಂತರಾಗಿರುತ್ತಾರೆ. ನಾನು ಕೆಲವರು ಪಶ್ವಿಮ ಭಕ್ತರನ್ನು, ಪ್ರತ್ಯೇಕವಾಗಿ ಮಹಿಳೆಯರನ್ನು, ಪೂರ್ತಿ ದಿನ ಮತ್ತು ರಾತ್ರಿ ನಿದ್ದೆ ಮಾಡದೆ ಉಪವಾಸವನ್ನು ಮಾಡುವುದನ್ನು ನೋಡಿದ್ದೇನೆ.

ಏಕಾದಶಿಯನ್ನು ಪಾಲನೆ ಮಾಡುವುದರಿಂದ ಎಲ್ಲ ಉಪಯೋಗಗಳು ಆಗುತ್ತದೆ. ಕಾಲೇಜುಗಳು, ಆಸ್ಪತ್ರೆಗಳು ಮತ್ತು ಕೆಲಸದ ವಿಭಿನ್ನ ಸ್ಥಾನಗಳಲ್ಲಿ ಛಾತ್ರರಿಗೆ ಮತ್ತು ಶ್ರಮಿಕರಿಗೆ ವಾರದಲ್ಲಿ ಒಂದು ದಿನ ರಜೆ ನೀಡಲಾಗುತ್ತದೆ, ಏಕೆಂದರೆ ಅವರು

ವಿಶ್ರಾಂತಿ ತೆಗೆದುಕೊಳ್ಳಲಿ ಮತ್ತು ಮರುದಿನ ಅವರು ಪೂರ್ಣ ಉತ್ತೇಜನದೊಂದಿಗೆ ಕೆಲಸ ಮಾಡುವರು ಎಂದು. ಇಲ್ಲದಿದ್ದರೆ, ಅವರಿಗೆ ತಮ್ಮ ಗತಿವಿಧಿಗಳನ್ನು ಅನೇಕ ವರ್ಷಗಳವರೆಗು ಜಾರಿಗೆ ಇಡಲು ಸಾಧ್ಯವಾಗುವುದಿಲ್ಲ. ಅವರಿಗೆ ಸ್ವಲ್ಪ ವಿಶ್ರಾಂತಿ ತೆಗೆದು ಕೊಳ್ಳಲು ಆವಶ್ಯಕತೆ ಇರುತ್ತದೆ.

ಇದು ನಮ್ಮ ಹೊಟ್ಟೆಯ ವಿಚಾರದಲ್ಲೂ ಸಹ ಇದು ಸತ್ಯ. ನಮ್ಮ ಹೊಟ್ಟೆಯಲ್ಲಿ ಬ್ಯಾಕ್ಟೀರಿಯ ಇರುತ್ತದೆ ಅದು ನಮ್ಮ ಆರೋಗ್ಯಕ್ಕೆ ಸಹಾಯ ಮಾಡುತ್ತದೆ. ಈ ಜೀವಾಣು ಸದಾಕಾಲ ನಾವು ತಿಂದಿರುವುದನ್ನು ಜೀರ್ಣ ಮಾಡಲು ಕೆಲಸ ಮಾಡುತ್ತಿರುತ್ತದೆ. ಏನಾದರು ಅವುಗಳ ಆರೋಗ್ಯ ಕೆಟ್ಟರೆ ಅಥವಾ ಸುಸ್ತಾದರೆ, ಆಗ ನಿಮಗೂ ಸಹ ಅನಾರೋಗ್ಯ ಉಂಟಾಗುವುದು. ಅವುಗಳಿಗೆ ಕಡಿಮೆ ಎಂದರು ಒಂದು ದಿನವಾದರು ವಿಶ್ರಾಂತಿ ನೀಡಲು ನಾವು ಪ್ರಯಾಸ ಪಡಬೇಕಾಗುತ್ತದೆ ಆಗ ಮುಂದಿನ ದಿನ ಅವು ಬಹಳ ಉತ್ತೇಜನದೊಂದಿಗೆ ಮತ್ತೆ ಕೆಲಸ ಮಾಡುತ್ತವೆ.

ಮತ್ತೊಂದು ಮಾತೇನೆಂದರೆ, ನೀವು ನೋಡಬಹುದು, ವಿಶೇಷವಾಗಿ ಏಕಾದಶಿಯಿಂದ ಹುಣ್ಣಿಮೆಯವರೆಗು ಸಮುದ್ರದಲ್ಲಿ ಬಹಳ ದೊಡ್ಡ–ದೊಡ್ಡ ಅಲೆಗಳು ಮೇಲೇಳುತ್ತವೆ. ಇದಕ್ಕೆ ಕಾರಣವೇನೆಂದರೆ ಚಂದ್ರನು ಈ ಗ್ರಹದ ಎಲ್ಲ ನೀರನ್ನು ಆಕರ್ಷಿಸುತ್ತಾನೆ. ಎಲ್ಲೆಲ್ಲಿ ನೀರಿದೆಯೋ ಚಂದ್ರನು ಅದೆಲ್ಲವನ್ನು ಆಕರ್ಷಿಸುತ್ತಾನೆ. ನಮ್ಮ ಶರೀರದಲ್ಲಿ ಹೆಚ್ಚು ನೀರಿದೆ, ವಿಶೇಷವಾಗಿ ಏಕಾದಶಿಯ ದಿನದಂದು ಚಂದ್ರನು ಇದನ್ನು ಆಕರ್ಷಿಸುತ್ತಾನೆ. ಯಾವುದರು ರೋಗವಿದ್ದರೆ, ಇದು ಬಹಳ ವೃದ್ಧಿಸುತ್ತದೆ. ನಾವು ಈ ಕೆಲವು ಪದಾರ್ಥಗಳನ್ನು ಮಿತವಾಗಿ ಬಳಸುವುದರಿಂದ ಒಳ್ಳೆಯದಾಗುವುದು. ವಿಶೇಷವಾಗಿ ಧಾನ್ಯಗಳು, ಜೋಳ, ಗೋದಿ, ಮೆಕ್ಕೆಜೋಳ, ರಾಗಿ ಮತ್ತು ಇವುಗಳಿಂದ ಮಾಡಿರುವಂತಹ ಭೋಜನವನ್ನು ತ್ಯಜಿಸಬೇಕು.

ಇಲ್ಲೂ ಸಹ ಹೀಗೆ ಹೇಳಲಾಗಿದೆ, ಕೆಲವೊಮ್ಮೆ ನೀವು ನೀರನ್ನು ಕುಡಿಯಬಹುದು; ಅದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಏನಾದರು ನೀವು ಒಂದು ಕಲ್ಲಿಗೆ ನೀರನ್ನು ಹಾಕಿದರೆ, ಆಗ ಆ ಕಲ್ಲು ತಕ್ಷಣವೆ ಶುಷ್ಕವಾಗುವುದು; ಮತ್ತೊಂದೆಡೆ, ನೀವು ಏನಾದರು ಹತ್ತಿ ಅಥವಾ ಮಸಿ ಹೀರುವ ಕಾಗದದಲ್ಲಿ (Blotting Paper) ನೀರನ್ನು ಹಾಕಿದರೆ, ಆಗ ಆ ನೀರನ್ನು ಹೀರಿಕೊಳ್ಳುತ್ತದೆ ಮತ್ತು ಅದು ಒಣಗಲು ಘಂಟೆಗಳ ಸಮಯ ತೆಗೆದುಕೊಳ್ಳುತ್ತದೆ.

ಗೋಧಿ, ಜೋಳ, ಅಕ್ಕಿ, ಕಾಳು ಮತ್ತು ಬೇಳೆ ಇವುಗಳಿಂದ ಮಾಡಿದಂತಹ ವ್ಯಂಜನವು ನಮ್ಮ ಹೊಟ್ಟೆಯಲ್ಲಿ ಹತ್ತಿಯಂತೆ ಆಗುತ್ತದೆ. ಚಂದ್ರ ಅವುಗಳಿಂದ ನೀರನ್ನು ಎಳೆದುಕೊಳ್ಳುತ್ತಾನೆ, ಇದರ ಕಾರಣ ರೋಗಗಳ ವೃದ್ಧಿಯಾಗುತ್ತದೆ. ಕೆಲವು ಜನರು ಏಕಾದಶಿಯಿಂದ ಹುಣ್ಣಿಮೆ ಮತ್ತು ಏಕಾದಶಿಯಿಂದ ಅಮಾಸ್ಯದ ನಡುವೆ ಅಸ್ಪತ್ರೆಗಳಲ್ಲಿ ಪ್ರಾಣಬಿಡುತ್ತಾರೆ. ರೋಗಗಳನ್ನು ನಿಯಂತ್ರಿಸಲು ಏಕಾದಶಿ ಪಾಲನೆ ಮಾಡುವುದು ಆವಶ್ಯಕ.

[**ಶ್ರೀಲ ಗುರುದೇವರ ೫ ಜೂನ್, ೧೯೯೮ ರಂದಿನ ಏಕಾದಶಿ ವ್ಯಾಖ್ಯಾನದಿಂದ ಉದ್ಧೃತ:**– ಏಕಾದಶಿಯ ದಿನ ಚಂದ್ರನು ಪೃಥ್ವಿಗೆ ಹತ್ತಿರ ಬರುತ್ತಾನೆ, ಮತ್ತು ಆದ್ದರಿಂದ ಅವನು ಪ್ರತಿಯೊಂದು ಕಡೆಯಿಂದಲೂ– ಸಮುದ್ರ, ನದಿಗಳು, ನಮ್ಮ ದೇಹ ಮುಂತಾದುವುಗಳಲ್ಲಿನ ನೀರನ್ನು ಸೆಳೆದುಕೊಳ್ಳುತ್ತಾನೆ. ಏನಾದರು ಈ ದಿನದಂದು ಯಾರಾದರು ಅನ್ನವನ್ನು ಸೇವಿಸಿದರೆ ಆಗ ಆ ಅನ್ನವು Blotting Paper ನಂತೆ ಆಗುತ್ತದೆ. ನೀವು ನೀರನ್ನು ಕುಡಿಯುವಿರಿ, ಆದರೆ ಅದು ಬಹಳ ಬೇಗನೆ ಕಡಿಮೆಯಾಗುತ್ತದೆ. ಏನಾದರು ನೀವು ಒಂದೇ ಸಮ ಅನ್ನ ಮತ್ತು ನೀರನ್ನು ಸೇವಿಸಿದರೆ ಆಗ ಆ ಅನ್ನವು Blotting Paper ನಂತೆ ಅಥವಾ ಹತ್ತಿಯಂತೆ ಆಗಿ ನೀರನ್ನು ಹಿಡಿದಿಟ್ಟುಕೊಳ್ಳುತ್ತದೆ.

ಎಷ್ಟೇ ನೀವು ಹತ್ತಿಯನ್ನು ಹಿಂಡಿದರು, ಸ್ವಲ್ಪ ನೀರು ಇದ್ದೇಇರುತ್ತದೆ. ಅದೇ ರೀತಿ ನೀವು ಏನಾದರು ಧಾನ್ಯಗಳನ್ನು ತಿಂದರೆ, ಆಗ ಅದು ಒಂದು ಸ್ಪಂಜ್ ನಂತೆ ಆಗುತ್ತದೆ. ಅದು ಬಹಳ ನೀರನ್ನು ಸಂಗ್ರಹಿಸಿಕೊಳ್ಳುತ್ತದೆ. ಚಂದ್ರನು ನೀರನ್ನು ಎಳೆದುಕೊಳ್ಳುತ್ತಾನೆ, ಮತ್ತು ನಿಮ್ಮ ಎಲ್ಲ ರೋಗಗಳು ವೃದ್ಧಿ ಆಗುತ್ತದೆ. ನೀವು ಸಮುದ್ರ ಅಥವಾ ಮಹಾಸಾಗರದಲ್ಲಿ ಇದನ್ನು ನೋಡಬಹುದು; ಈ ಸಮಯದಲ್ಲಿ ಸಮುದ್ರ ಉಬ್ಬರಿಸುತ್ತದೆ ಮತ್ತು ಅಲೆಗಳು ಬಹಳ ಅಧಿಕವಾಗಿ ಮೇಲೇಳುತ್ತವೆ.]

ಇವೆಲ್ಲವು ಶರೀರಕ್ಕೆ ಸಂಬಂಧಪಟ್ಟ ಬಾಹ್ಯ ಕಾರಣಗಳು. ತಮ್ಮ ಶರೀರದ ಮೇಲೆ ಯಾರಿಗೆ ಆಸಕ್ತಿ ಉಳ್ಳವರಾಗಿರುತ್ತಾರೋ ಅಂತಹವರ ಪ್ರಯೋಜನಕ್ಕಾಗಿ ನಾನು ಇದರ ಉಲ್ಲೇಖನೆ ಮಾಡಿದ್ದೇನೆ.

ಯಾವ ವ್ಯಕ್ತಿ ಭಗವಂತನಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿರುವನೋ, ಅವನೂ ಸಹ ಏಕಾದಶಿ ಪಾಲನೆ ಮಾಡಬೇಕು. ಭಾರತದಲ್ಲಿ ಎಲ್ಲ ಪ್ರಕಾರದ ಭಕ್ತರು ಏಕಾದಶಿಯನ್ನು ಆಚರಿಸುತ್ತಾರೆ– ಮಾಯಾವಾದಿ (ನಿರ್ವಿಶೇಷವಾದಿಗಳು), ಶೈವರು (ಭಗವಾನ್ ಶಿವನ ಉಪಾಸಕರು), ಶಾಕ್ತರು (ದುರ್ಗಾ ದೇವಿಯ ಉಪಾಸಕರು) ಮತ್ತು ಗಣೇಶ ಭಕ್ತರೂ ಸಹ ಇದರ ಪಾಲನೆ ಮಾಡುತ್ತಾರೆ. ಮಹಿಳೆಯರು, ಪುರುಷರು ಮತ್ತು ಮಕ್ಕಳೂ ಸಹ ಇದರ ಪಾಲನೆ ಮಾಡುತ್ತಾರೆ, ಆದರೆ ಇಂದಿನ ದಿನಗಳಲ್ಲಿ ಈ ಪ್ರವೃತ್ತಿಯು ಕಡಿಮೆಯಾಗಿದೆ. ಸುಮಾರಾಗಿ ಪ್ರತಿಯೊಬ್ಬರು ಏಕಾದಶಿಯಿಂದ ಮಿತ್ಯಾಚಾರ ಮಾಡಲಾರಂಬಿಸಿದ್ದಾರೆ; ಹೇಗೆಂದರೆ ಪಶ್ಚಿಮ ದೇಶಗಳಿಂದ ಒಂದು ದೊಡ್ಡ ಬಿರುಗಾಳಿ ಭಾರತಕ್ಕೆ ಹೋದಂತೆ ಮತ್ತು ಪ್ರತಿಯೊಂದು ಪ್ರದೇಶಗಳಲ್ಲೂ ಪ್ರಭಾವಿತವಾದಂತೆ.

ಏನಾದರು ನೀವು ಅಂಬರೀಷ ಮಹಾರಾಜರಂತೆ ಅಥವಾ ಕೃಷ್ಣನ ತಾಯಿ–ತಂದೆ ನಂದ ಮತ್ತು ಯಶೋದೆಯಂತೆ ಭಕ್ತರಾಗಲು ಬಯಸಿದರೆ, ಆಗ ನಿಮಗೆ ಏಕಾದಶಿಯ ಪಾಲನೆ ಅವಶ್ಯ ಮಾಡಲೇಬೇಕು. ನಂದ ಮತ್ತು ಯಶೋದೆ ವೃಂದಾವನದಲ್ಲಿ ಏಕಾದಶಿಯನ್ನು ಆಚರಿಸಿದರು ಮತ್ತು ವೃಂದಾವನದಿಂದ ಅವರು ಮಥುರೆಯ ಹತ್ತಿರ ಅಂಬಿಕಾ–ಕಾನನಕ್ಕೆ ಹೋದರು ಮತ್ತು ಅಲ್ಲಿ ಏಕಾದಶಿಯನ್ನು ಆಚರಿಸಿದರು. ಅವರೇ ಇದನ್ನು ಪಾಲಿಸಿದ್ದಾರೆ, ನಾವು ಏಕೆ ಪಾಲಿಸಬಾರದು? ನಾವು ಬಹಳ ಶ್ರದ್ಧೆಯಿಂದ ಏಕಾದಶಿಯನ್ನು ಪಾಲಿಸಬೇಕು. ಮತ್ತೆ, ಭಕ್ತಿಯು ಅವಿವೇಚಿತ ರೂಪದಿಂದ ನಮ್ಮ ಹತ್ತಿರ ಬರುವುದು.

ನಾವು ಶುದ್ಧ ವೈಷ್ಣವರ ಮಾರ್ಗದರ್ಶನದಿಂದ ಏಕಾದಶಿಯ ಪಾಲನೆ ಮಾಡಬೇಕು ಮತ್ತು ಕೀರ್ತನೆಯ ಅನುಷ್ಠಾನವನ್ನು ಮಾಡಬೇಕು. ಯಾರಾದರು ಭಕ್ತಿ ಮಾಡಿದರೆ ಅದು ಸರಿ, ಆದರೆ ಯಾರಿಗೆ ವ್ರಜದ ಸಂಬಂಧವಿರುವುದೋ, ಯಾರಲ್ಲಿ ವ್ರಜ–ಭಕ್ತಿಯುಂಟೋ ಮತ್ತು ಯಾರು ರಸಿಕಭಕ್ತರಾಗಿರುವರೋ, ಇಂತಹ ಭಕ್ತರ ಆನುಗತ್ಯದಲ್ಲಿ ಒಬ್ಬ ವ್ಯಕ್ತಿ ಏನಾದರು ಭಜನೆ ಮಾಡಿದರೆ ಆಗ ಅವರು ಅವನ ಎಲ್ಲ ಸಂದೇಹಗಳನ್ನು ದೂರಮಾಡುತ್ತರೆ ಮತ್ತು ರಾಧಾ, ಕೃಷ್ಣ ಹಾಗೂ ಮಹಾಪ್ರಭುಗಳನ್ನು ಅವನ ಹೃದಯದಲ್ಲಿ ಸ್ಥಾಪಿಸುತ್ತಾರೆ. ಸದಾ ಕಾಲ ಕರುಣಾಮಯರಾದ ವೈಷ್ಣವರ ಮಾರ್ಗದರ್ಶನದಲ್ಲಿ ವೃಂದಾವನದಲ್ಲಿ ವಾಸಮಾಡಿರಿ ಮತ್ತು ಸದಾ ಕಾಲ ಮಂತ್ರವನ್ನು ಜಪಿಸುತ್ತ ಮತ್ತು ಭಗವತ್–ಸ್ಮರಣೆ ಮಾಡುತ್ತಿರಿ. ಅದರೊಂದಿಗೆ ಕೃಷ್ಣನ ಪವಿತ್ರ ನಾಮವನ್ನು ಜಪಿಸುತ್ತಿರಿ ಮತ್ತು ಆ ನಾಮದಿಂದ ಸಂಬಂಧಿತ ಲೀಲೆಗಳನ್ನು ಸ್ಮರಣೆ ಮಾಡುತ್ತಿರಿ.

ಶ್ಯಾಮಾರಾಣಿ ದಾಸಿ: ಗುರುದೇವ, ನಾವು ಯಾವಾಗಲು ಏಕಾದಶಿಯ ದಿನದಂದು ಧಾನ್ಯಗಳನ್ನು ಸೇವಿಸಬಾರದು ಎಂದು ಕೇಳಿದ್ದೇವೆ, ಏಕೆಂದರೆ ಆ ದಿನ ಅವುಗಳಲ್ಲಿ ಪಾಪವು ತುಂಬಿಕೊಂಡಿರತ್ತದೆ, ಆದರೆ ಟೊಮೆಟೊ ಮತ್ತು ಸೋರೆಕಾಯಿ ಮುಂತಾದ ಕೆಲವು ತರಕಾರಿಗಳನ್ನು ಏತಕ್ಕಾಗಿ ತಿನ್ನಬಾರದು?

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಇದು ಧಾನ್ಯಗಳಿಗೆ ಸಮಾನವಲ್ಲ? ಇವುಗಳಲ್ಲಿ ಅಕ್ಕಿ, ಮಕ್ಕೆ, ಗೋದಿ ಮತ್ತು ಬೇಳೆಗಳ ಗುಣ ಇರುವುದಿಲ್ಲ [ಅಂದರೆ ಅವುಗಳಲ್ಲಿ Blotting Paper ನಂತೆ ಅಥವಾ ಹತ್ತಿಯಂತೆ ನೀರನ್ನು ಹಿಡಿದಿಟ್ಟುಕೊಳ್ಳುವುದಿಲ್ಲ.] ನಮಗೆ ಒಂದು ವಿಶೇಷವಾದ ಕಥೆಯಿಂದ ತಿಳಿಯುವುದೇನೆಂದರೆ ಏಕಾದಶಿಯ ದಿನ ಬ್ರಹ್ಮ–ಹತ್ಯಾ (ಒಬ್ಬ ಬ್ರಾಹ್ಮಣನನ್ನು ಕೊಲ್ಲುವುದು), ಮಾತೃ–ಹತ್ಯಾ (ತನ್ನ ಸ್ವಂತ ತಾಯಿಯನ್ನು ಕೊಲ್ಲುವುದು) ಮತ್ತು ಗೋಹತ್ಯಾ (ಒಂದು ಗೋವನ್ನು ಕೊಲ್ಲುವುದು) ಈ ಎಲ್ಲ ಪಾಪಗಳು ಧಾನ್ಯದಲ್ಲಿ ಮತ್ತು ಧಾನ್ಯದಿಂದ ಮಾಡಿರುವಂತಹ ವ್ಯಂಜನಗಳಲ್ಲಿ ನೆಲಸಿರುತ್ತವೆ. ಇದನ್ನು ಹೊರತಾಗಿ ಶಾಸ್ತ್ರಗಳು ಕೆಲವು ತರಕಾರಿಗಳನ್ನು ಮತ್ತು ಇತರ ಆಹಾರ ಪದಾರ್ಥಗಳನ್ನು ಸ್ವೀಕರಿಸುವುದನ್ನು ನಿಷೇಧಿಸಲಾಗಿದೆ.

ಪಶ್ಚಿಮ ಭಕ್ತರಿಗೆ ಮತ್ತು ಭಾರತದ ಬಲಹೀನ ವ್ಯಕ್ತಿಗಳಿಗೆ ಒಂದು ರಿಯಾಯಿತಿಯನ್ನು ನೀಡಲಾಗಿದೆ. ಏನಾದರು ನೀವು ವಿಧಿ–ನಿಷೇಧಗಳನ್ನು ಪಾಲನೆ ಮಾಡದಿದ್ದರೆ, ನಿಮಗೆ ಎಲ್ಲ ಪಾಪಗಳ ಭಾಗಿ ಆಗಬೇಕಾಗುತ್ತದೆ. ಏನಾದರು ನಿಮ್ಮಲ್ಲಿ ಸ್ವಲ್ಪ ಭಕ್ತಿ ಇದ್ದರೆ, ಆಗ ಅದು ನಷ್ಟವಾಗುವುದು.

ನೀವು ಎಲ್ಲರೂ ಇಂದು ಏಕಾದಶಿಯನ್ನು ಪಾಲನೆ ಮಾಡುತ್ತಿರುವಿರಿ. ನಾವು ನಿಶ್ಚಯವಾಗಿ ಏಕಾದಶಿಯನ್ನು ಪಾಲಿಸಬೇಕು– ಎಲ್ಲ ಪ್ರಕಾರದ ಧಾನ್ಯಗಳನ್ನು ಗೋಧಿ, ಜೋಳ, ಅಕ್ಕಿ, ರಾಗಿ ಇತ್ಯಾದಿಗಳಿಂದ ಮಾಡಿರುವಂತಹ ಆಹಾರ– ಈ ಎಲ್ಲ ಪದಾರ್ಥಗಳಿಂದ ದೂರ ಸರಿಯಬೇಕು. ಏನಾದರು ನೀವು ಏಕಾದಶಿಯ ಪಾಲನೆ ಮಾಡಿದರೆ, ಭಗವಂತನ ಪವಿತ್ರ ನಾಮವನ್ನು ಜಪ ಮಾಡಿದರೆ, ಶ್ರೇಷ್ಠ ಸಾಧು–ಸಂಗದಲ್ಲಿ ಹರಿ–ಕಥೆ ಶ್ರವಣ ಮಾಡಿದರೆ, ಉನ್ನತ ಭಕ್ತರ ಸಂಗ ಮಾಡಿದರೆ ಮತ್ತು ಭಕ್ತಿಯ ಒಂಬತ್ತು ಅಂಗಗಳಲ್ಲಿ ಯಾವುದಾದರು ಒಂದು ಅಂಗವನ್ನು ಪಾಲನೆ ಮಾಡಿದರೆ, ನೀವು ಎಂದಿಗೂ ಸಹ ಪತನ ಹೊಂದುವುದಿಲ್ಲ.

ಬಲಹೀನ ವ್ಯಕ್ತಿಯ ಇಚ್ಛೆಗೆ ಅನುಸಾರವಾಗಿ ಸ್ವಲ್ಪ ಏನಾದರು ಸ್ವೀಕರಿಸಬಹುದು, ಆದರೆ ಈ ಏಕಾದಶಿಗೆ ಅನುಜ್ಞಪ್ತ ಖಾದ್ಯ ಪದಾರ್ಥವನ್ನು ಮಾತ್ರ ಸೇವಿಸಬಹುದು. ಮಕ್ಕಳೂ ಸಹ ತಮ್ಮ ಇಚ್ಛೆಯಂತೆ ಸ್ವಲ್ಪ ಏನಾದರು ಸ್ವೀಕರಿಸಬಹುದು ಆದರೆ ಅವರ ಮೇಲೆ ಅವರ ತಾಯಿ–ತಂದೆಯರು ಧ್ಯಾನವಹಿಸಬೇಕಾಗುತ್ತದೆ, ತಮ್ಮ ಮಕ್ಕಳಿಗೆ ಕೇವಲ ಹಣ್ಣು ಮತ್ತು ಏಕಾದಶಿಗೆ ವಿಹಿತವಾದ ಇತರ ಆಹಾರ ಪದಾರ್ಥಗಳನ್ನು ಮಾತ್ರ ತಿನ್ನಿಸಬೇಕು.

ಕೆಲವೊಮ್ಮೆ, ಕಲಿಯುಗ ಮತ್ತು ಮಾಯೆಯ ಪ್ರಭಾವದಿಂದ ನಾವು ಬಲಹೀನರಾಗುತ್ತೇವೆ ಮತ್ತು ಪಾಲನೆ ಮಾಡಲಾಗುವುದಿಲ್ಲ; ಇದೇ ಕಾರಣದಿಂದ ನಾವು ಅಧಃಪತರಾಗುತ್ತೇವೆ. ಯಾವುದೇ ಸ್ಥಿತಿಯಲ್ಲೂ ಸಹ ನಾವು ಮಂತ್ರದ ಜಪ, ಕೃಷ್ಣನ ಸ್ಮರಣೆ ಮತ್ತು ಏಕಾದಶಿ ವ್ರತದ ಪಾಲನೆ– ಇವುಗಳನ್ನು ಮರೆಯಬಾರದು. ಎಷ್ಟೇ ನೀವು ಬಲಹೀನರಾದರು, ಈ ಸಿದ್ಧಾಂತವನ್ನು ಪಾಲಿಸಲು ಪ್ರಯಾಸ ಪಡಬೇಕು.

ಇದನ್ನು ಬಿಟ್ಟು ಏಕಾದಶಿಯನ್ನು ಪಾಲನೆ ಮಾಡಲು ಎಲ್ಲದಕ್ಕಿಂತಲು ಮಹತ್ವಪೂರ್ಣವಾದ ಕಾರಣ ಏನೆಂದರೆ ಏಕಾದಶಿ ಸ್ವಯಂ ಕೃಷ್ಣನ ರೂಪ. ಕೃಷ್ಣನೇ ಏಕಾದಶಿ ಆಗಿದ್ದಾನೆ. ಅವನು ಏಕಾದಶಿ ದಿನದಂದು ಈ ಜಗತ್ತಿನಲ್ಲಿ ಅವತರಿಸುತ್ತಾನೆ. ಯಾವ ಜನರು ಏಕಾದಶಿ ವ್ರತದ ಪಾಲನೆ ಮಾಡುವರೋ, ಭಗವಂತನು ಸ್ವಯಂ ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳುತಾನೆ ಮತ್ತು ಅವರಿಗೆ ವಿಶೇಷವಾದ ದಯೆಯನ್ನು ಪ್ರಸಾದಿಸುತ್ತಾನೆ. ಆದ್ದರಿಂದ ನಾವು ಏಕಾದಶಿಯನ್ನು ಆಚರಿಸಬೇಕು.

ಒಮ್ಮೆ ಏಕಾದಶಿ ದಿನದಂದು ಶ್ರೀ ಚೈತನ್ಯ ಮಹಾಪ್ರಭುಗಳು ತಮ್ಮ ಪರಿವಾರದ– ಸ್ವರೂಪ ದಾಮೋದರ, ರಾಯರಮಾನಂದ, ನಿತ್ಯಾನಂದ ಪ್ರಭು ಮತ್ತು ಅನ್ಯ ಸಾವಿರಾರು ಭಕ್ತರೊಂದಿಗೆ ಪುರಿಯಲ್ಲಿ ನೆಲಸಿದ್ದರು. ಒಂದು ಕ್ಷಣವೂ ಸಹ ನಿದ್ದೆ ಮಾಡದೆ ಕೃಷ್ಣನ ಸ್ಮರಣೆ ಮತ್ತು ಹರಿ–ಕಥೆಯ ಶ್ರವಣವನ್ನು ಮಾಡುತ್ತ ಅಹೋರಾತ್ರಿ ಕೀರ್ತನೆಯನ್ನು ಮಾಡುತ್ತಿದ್ದರು. ಇದರ ನಡುವಿನಲ್ಲಿ ರಾತ್ರಿ ಸುಮಾರು ೮:೦೦ ಘಂಟೆಗೆ ಜಗನ್ನಾಥ ಪುರಿಯ ಪಾಂಡ (ಪೂಜಾರಿ) ಬಹಳ ಹೆಚ್ಚಿನ ಪ್ರಮಾಣದ ಸ್ವಾದಿಷ್ಟ, ಮಧುರವಾದ ಮಹಾ–ಪ್ರಸಾದವನ್ನು ತಂದರು ಮತ್ತು ಅದನ್ನು ಮಹಾಪ್ರಭು ಮತ್ತು ಅವರ ಭಕ್ತರ ಮುಂದೆ ಇರಿಸಿದರು.

ಪುರಾಣಗಳಲ್ಲಿ ಮತ್ತು ಅನ್ಯ ಶಾಸ್ತ್ರಗಳಲ್ಲಿ ಹೀಗೆ ಬರೆದಿದ್ದಾರೆ, 'ಯಾರಿಗಾದರು ಮಹಾಪ್ರಸಾದವು ಪ್ರಾಪ್ತವಾದರೆ ಅದನ್ನು ಒಂದು ಕ್ಷಣವೂ ಸಹ ತಡಮಾಡದೆ ಸೇವಿಸಬೇಕು' ಎಂದು. ಆಗ ಚೈತನ್ಯ ಮಹಾಪ್ರಭುಗಳು ಆ ಪ್ರಸಾದವನ್ನು ಕಂಡಾಗ ಅವರು ಅತ್ಯಾಧಿಕವಾಗಿ ಪ್ರಸನ್ನರಾದರು. ಅವರು ವಿಭಿನ್ನ ರೀತಿಗಳಿಂದ ಆ ಮಹಾಪ್ರಸಾದವನ್ನು ಪ್ರಾರ್ಥಿಸಿದರು ಮತ್ತು ರಾತ್ರಿ ಎಲ್ಲ ಅದನ್ನು ಪರಿಕ್ರಮ ಮಾಡಿದರು. ಅವರು ಶಾಸ್ತ್ರದ ಕೆಲವು ಶ್ಲೋಕಗಳನ್ನು ಉದ್ಧೃತ ಮಾಡಿದರು ಮತ್ತು ಅವುಗಳನ್ನು ವ್ಯಾಖ್ಯಾಯನ ಮಾಡುತ್ತ ಅವರು ತಿಳಿಸಿದರು, "ಮಹಾಪ್ರಸಾದವನ್ನು ಹಂದಿ, ಕಾಗೆ ಮತ್ತು ನಾಯಿಗಳ ಮೂಲಕ ಸ್ವೀಕರಿಸಲ್ಪಟ್ಟರೂ ಸಹ ಅದು ಮಹಾಪ್ರಸಾದವೇ ಆಗಿರುತ್ತದೆ. ಅದು ಅಷ್ಟು ಶಕ್ತಿಶಾಲಿಯಾದದ್ದು. ನಾವು ಅದನ್ನು ಅಗೌರವಿಸ ಕೂಡದು; ಬದಲಾಗಿ ನಾವು ಅದನ್ನು ಸ್ವೀಕರಿಸಬೇಕು. ಅದು ಕೆಟ್ಟಿದ್ದರು ಅಥವಾ ಒಣಗಿಹೋಗಿದ್ದರು, ದೂರ ಸ್ಥಾನಗಳಿಂದ ತಂದಿದ್ದರೂ, ಸಹ ನಾವು ಅದನ್ನು ಗೌರವಿಸಬೇಕು."

ಬೆಳಗಾದಾಗ, ಮಹಾಪ್ರಭುಗಳು ಅವರ ಸಮಸ್ತ ಪರಿವಾರದೊಂದಿಗೆ ಸಮುದ್ರದಲ್ಲಿ ಸ್ನಾನ ಮಾಡಿದರು ಮತ್ತು ಮತ್ತೆ ಅವರಿಗೆ ಹೀಗೆ ಹೇಳಿದರು, "ಈಗ ನಾವು ಈ ಪ್ರಸಾದವನ್ನು ಹಂಚಿಕೊಂಡು ಗೌರವಪೂರ್ವಕವಾಗಿ ಸೇವಿಸೋಣಾ" ಎಂದರು.

ಏಕಾದಶಿಯ ದಿನ, ಧಾನ್ಯವನ್ನು ಸ್ವೀಕಾರ ಮಾಡದೆ ನಾವು ಏಕಾದಶಿಯನ್ನು ಗೌರವಿಸಬೇಕು. ಏಕಾದಶಿ ಕೃಷ್ಣ–ಭಕ್ತಿ, ಪ್ರೇಮ ಮತ್ತು ಸ್ನೇಹದ ಜನನಿ. ನೀವು ಏನಾದರು ಏಕಾದಶಿಯನ್ನು ಪಾಲನೆ ಮಾಡದಿದ್ದರೆ, ಆಗ ನಿಮಗೆ ಕೃಷ್ಣ–ಭಕ್ತಿ ಎಂದಿಗೂ ಸಹ ದೊರಕುವುದಿಲ್ಲ.

ನೀವು ಏನಾದರು ಯುವ ಮತ್ತು ಶಕ್ತರಾಗಿದ್ದರೆ, ನೀವು ಹಣ್ಣು, ತರಕಾರಿ, ರಸ, ಮತ್ತು ನೀರನ್ನೂ ಸಹ ಸ್ವೀಕರಿಸದೆ ಪೂರ್ತಿ ದಿನ ಉಪವಾಸವನ್ನು ಮಾಡಬಹುದು. ಏನಾದರು ನೀವು ಅಷ್ಟು ಸಶಕ್ತರಲ್ಲದಿದ್ದರೆ, ಅಥವಾ ನೀವು ಅಸ್ವಸ್ಥ ಅಥವಾ ವೃದ್ಧರಾಗಿದ್ದರೆ, ಸ್ವಲ್ಪ ಹಣ್ಣು, ಸ್ವಲ್ಪ ರಸ ಅಥವಾ ಹಾಲನ್ನು ಸ್ವೀಕರಿಸಬಹುದು.

ಒಂದು ದಿನದಲ್ಲಿ ಮೂರು ಅಥವಾ ನಾಲ್ಕು ಬಾರಿ ಬಹಳಷ್ಟು ಪ್ರಮಾಣದಲ್ಲಿ ಹಣ್ಣಿನ ರಸವನ್ನು ಕುಡಿಯುವುದು, ಒಂದು ಅಥವಾ ಎರಡು ಕಿಲೊ ಸಿಹಿ ರಬ್ಬಡಿ (ಹಾಲುಕೋವ) ಅಥವಾ ಅನ್ಯ ತಿಂಡಿ ಪದಾರ್ಥಗಳನ್ನು ತಿನ್ನಬೇಡಿ. ಕೇವಲ ತಮ್ಮ ಜೀವ ಉಳಿಸಿಕೊಳ್ಳಲು ಬೇಕಾದಷ್ಟು, ಸ್ವಲ್ಪ ಮಾತ್ರವೇ ಸ್ವೀಕರಿಸಬೇಕು. ದಿನದ ಮಧ್ಯದಲ್ಲಿ ಖಂಡಿತವಾಗಿಯು ನಿದ್ದೆ ಮಾಡಬಾರದು ಮತ್ತು ಶ್ರೀಲ ಹರಿದಾಸ ಠಾಕುರರಂತೆ ಜಪವನ್ನು ಮಾಡತ್ತಿರಬೇಕು; ಆಗ ಏಕಾದಶಿಯ ಫಲ ಪ್ರಾಪ್ತವಾಗುತ್ತದೆ.

ಇಂದುಲೇಖಾ ದಾಸಿಯ ಸೋದರಿಯ ಮಗಳು: ನಿನ್ನೇ ಮದಲ ಬಾರಿ ನಾನು ಏಕಾದಶಿಯನ್ನು ಆಚರಿಸಿದೆ. ಅದಾಗ್ಯೂ ನಾನು ನನ್ನ ತಾಯಿಗೋಸ್ಕರ ಮಾಡಿದೆ ಏಕೆಂದರೆ ಅವಳ ಜೀವನಯಾತ್ರೆ ಲೀವರ್ ಕೆನ್ಸರ್‌ನಿಂದ ಸಮಾಪ್ತವಾಗುತ್ತಿದೆ.

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಇದು ಒಳ್ಳೆಯದು. ಒಮ್ಮೆ ದಾರಿಯಲ್ಲಿ ಬಿದ್ದಿದ್ದ ಹಸು ಸಾಯುತ್ತಿತ್ತು. ಅದರ ಶರೀರವು ಸೆಣಸಾಡುತಿತ್ತು, ಆದರೆ ಅದರ ಪ್ರಾಣ ಶರೀರವನ್ನು ಬಿಡುತ್ತಿರಲಿಲ್ಲ.

ನನ್ನ ಒಬ್ಬ ಶಿಷ್ಯನು ಅದನ್ನು ಕಂಡು ಹೇಳಿದ, “ಹೇ ಗೋಮಾತ, ನಾನು ನಿನಗೆ ನನ್ನ ಒಂದು ಏಕಾದಶಿಯ ಫಲವನ್ನು ನೀಡುತ್ತಿದ್ದೇನೆ. ಈಗ ನೀನು ಬಹಳ ಸುಲಭವಾಗಿ ನಿನ್ನ ಪ್ರಾಣ ತ್ಯಾಗಮಾಡಲು ಕ್ಷಮತೆ ಉಂಟಾಗುವುದು.” ತಕ್ಷಣವೆ ಸ್ವಲ್ಪವೂ ತಡವಾಗದೆ, ಆ ಗೋವು ತನ್ನ ಶರೀರವನ್ನು ಬಿಟ್ಟಿತು.

ಹಿಂದಿನ ವರ್ಷ, ನಂದ–ಗೋಪಾಲನ ಕುದುರೆಗಳಲ್ಲಿ ಒಂದು ಕುದುರೆ ಸಾಯುತಿತ್ತು, ಆದರೆ ಅದರ ಪ್ರಾಣವು ಶರೀರವನ್ನು ಬಿಟ್ಟು ಹೋಗುತ್ತಿರಲಿಲ್ಲ. ನಾನು ಅದರ ಕಿವಿಯಲ್ಲಿ “ಹರೇ ಕೃಷ್ಣ” ಎಂದು ಹೇಳಿದೆ, ಮತ್ತು ಅದು ಬಹಳ ಸುಲಭವಾಗಿ ತನ್ನ ಪ್ರಾಣವನ್ನು ಬಿಟ್ಟಿತು. ಈ ಜಪವು ಚಮತ್ಕಾರಿ ಮತ್ತು ಬಹಳ ಶಕ್ತಿಶಾಲಿಯಾದದ್ದು.

ರಾಮ–ತುಳಸೀ ದಾಸ್: ಏನು ಏಕಾದಶಿ–ದೇವಿ ಸ್ವಯಂ ರಾಧಾಮಾತೆಯೇ?

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಏಕಾದಶಿ ರಾಧಮಾತೆಯಲ್ಲ, ಆದರೆ ಅದನ್ನು ರಾಧಿಕಾರವರ ಒಂದು ಪ್ರಕಾಶವೆಂದು ಭಾವಿಸಲಾಗುತ್ತದೆ. ಕೃಷ್ಣ ಸ್ವಯಂ ಏಕಾದಶಿ ಆಗುತ್ತಾನೆ. ಏಕಾದಶಿ ಮತ್ತು ಕೃಷ್ಣ ಒಂದೇ ಆಗಿದ್ದಾರೆ, ರಾಧಾ ಮತ್ತು ಕೃಷ್ಣ ಇಬ್ಬರೂ ಒಂದೇ, ಆದ್ದರಿಂದ ಏಕಾದಶಿ ರಾಧಿಕಾರವರ ಅಭಿವ್ಯಕ್ತಿ (ಅಥವಾ ಪ್ರಕಾಶ) ಎಂದು ಹೇಳಲಾಗಿದೆ.

ಶ್ರೀಮತಿ ರಾಧಿಕಾರವರು ಹ್ಲಾದಿನೀ–ಶಕ್ತಿ–ಸ್ವರೂಪರಾಗಿದ್ದಾರೆ (ಕೃಷ್ಣನ ಸರ್ವೋಚ್ಚ ಆನಂದ–ಪ್ರದಾಯಿನಿ ಶಕ್ತಿಯ ಸಾರ), ಏಕಾದಶಿಗಿಂತಲೂ ಅಧಿಕ. ಗೋಲೋಕ ವೃಂದಾವನದಲ್ಲಿ ಏಕಾದಶಿಯ ಯಾವುದೇ ಪಾಲನೆ ಇರುವುದಿಲ್ಲ. ಏಕಾದಶಿಯ ಪಾಲನೆ ಈ ಭೌತಿಕ ಸಂಸಾರದಲ್ಲಿ ಸಾಧನ ಭಕ್ತಿಯಲ್ಲಿ ಒಲವುಪಡೆದಂತಹ ಜನರಿಗೆ ಮಾತ್ರ. ಗೋಲೋಕ ವೃಂದಾವನದಲ್ಲಿ ಶ್ರೀಮತಿ ರಾಧೆ ಕೃಷ್ಣನ ಸರ್ವೋಚ್ಚ ಶಕ್ತಿಯಾಗಿದ್ದಾಳೆ, ಆದ್ದರಿಂದ ಅವಳಲ್ಲಿ ಮತ್ತು ಏಕಾದಶಿಯಲ್ಲಿ ಸ್ವಲ್ಪ ಅಂತರವುಂಟು.

[ಸೂಚನೆ: ನಂದ ಮಹಾರಾಜರು ಏಕಾದಶಿಯನ್ನು ಪಾಲನೆ ಮಾಡುತ್ತಿದ್ದರು, ಆದರೆ ಅವರು ಗೋಲೋಕ ವೃಂದಾವನದ ನಿವಾಸಿಗಳಾಗಿದ್ದರು ಎಂದು ಹೀಗೆ ತರ್ಕ ಮಾಡಬಹುದು. ವಾಸ್ತವದಲ್ಲಿ ನಂದ ಮಹಾರಾಜರು ಕೇವಲ ಪ್ರಕಟ

ವೃಂದಾವನದಲ್ಲಿ ಮಾತ್ರ ಏಕಾದಶಿಯನ್ನು ಪಾಲನೆ ಮಾಡುತ್ತಿದ್ದರು. ಈ ಭೌಮ ವೃಂದಾವನವು ಈ ಜಗತ್ತಿನಲ್ಲಿ ಪ್ರಕಟವಾಗಿದೆ ಮತ್ತು ಒಂದು ಸಾಧನ–ಭೂಮಿಯಾಗಿದೆ. ಅವರು ಕೇವಲ ಇತರರಿಗೆ ತಿಳಿಸಿಕೊಡುವ ಸಲುವಾಗಿ ಹೀಗೆ ಆಚರಿಸುತ್ತಿದ್ದರು. (ಶ್ರೀಪಾದ ಭಕ್ತಿವೇದಾಂತ ಮಾಧವ ಮಹಾರಾಜರು)]

ಶ್ರೀಪಾದ ನೆಮೀ ಮಹಾರಾಜರು: ಏನಾದರು ನಾವು ವಾಸ್ತವದಲ್ಲಿ ಕೆಲವು ಕಾರಣಗಳಿಂದ ಇತರ ಏಕಾದಶಿಗಳನ್ನು ಪಾಲನೆ ಮಾಡದಿದ್ದರೆ, ಆಗ (ಪಾಂಡವ) ನಿರ್ಜಲ ಏಕಾದಶಿಯ ಪಾಲನೆ ಮಾಡುವುದರಿಂದ ನಾವು ಕ್ಷತಿಪೂರ್ತಿ (ದೋಷ ಪರಿಹಾರ) ಮಾಡಬಹುದೇ?

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ನಾನು ಈಗಲೇ ಇದಕ್ಕೆ ಉತ್ತರವನ್ನು ನೀಡಿದ್ದೇನೆ. ನೀವು ಕೇವಲ ಹರಿನಾಮದ ಮೂಲಕ ಮಾತ್ರ ಕ್ಷತಿಪೂರ್ತಿ ಮಾಡಲು ಸಾಧ್ಯ, ಕೇವಲ ಉಚಿತ ರೀತಿಯಿಂದ (ಪಾಂಡವ) ನಿರ್ಜಲ ಏಕಾದಶಿಯನ್ನು ಆಚರಿಸುವುದರಿಂದ ಅಲ್ಲ. ನೀವು ಪ್ರತಿಯೊಂದು ಏಕಾದಶಿಯನ್ನು ಪಾಲನೆ ಮಾಡಬೇಕು. ಕೇವಲ ಭೀಮನಿಗೆ ಮಾತ್ರ ಈ ರಿಯಾಯತಿಯನ್ನು ನೀಡಲಾಗಿತ್ತು.

ಬಲರಾಮ ದಾಸ್: ನಾವು ನಿರ್ಜಲ ಏಕಾದಶಿ ದಿನದಂದು ಹಲ್ಲನ್ನು ಸ್ವಚ್ಛಮಾಡಿಕೊಳ್ಳಬಹುದೇ?

ಶ್ರೀಲ ನಾರಾಯಣ ಮಹಾರಾಜರು: ಏಕಿಲ್ಲ? ನಿಮಗೆ ಏನು ಸ್ನಾನ ಮಾಡಬೇಡವೆ? (ಯಾವ ರೀತಿ ಸ್ನಾನ ಆವಶ್ಯಕವೋ, ಅದೇ ರೀತಿ ಹಲ್ಲನ್ನು ಸ್ವಚ್ಛ ಮಾಡಿಕೊಳ್ಳುವುದು ಆವಶ್ಯಕ.)

ಬಲರಾಮ ದಾಸ್: ಆದರೆ ಸ್ನಾನದಲ್ಲಿ ನೀರು ಕುಡಿದಂತಾಗುವುದಿಲ್ಲ.

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಆದರೆ ಯಾವುದಾದರು ರೀತಿಯಿಂದ ನೀರು ನಿಮ್ಮ ಶರೀರದಲ್ಲಿ ಪ್ರವೇಶವಿರುತ್ತದೆ. ತಪ್ಪದೆ ನೀವು ಸ್ನಾನ ಮಾಡಲೇಬೇಕು, ಆದರೆ ಆ ದಿನದಂದು ಚರಣಾಮೃತವನ್ನು ಸ್ವೀಕರಿಸಬಾರದು, ಕೇವಲ ಚರಣಾಮೃತವನ್ನು ನಮಸ್ಕರಿಸಬೇಕು.

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಅವರು ಭೀಮರಲ್ಲ. ಪ್ರಾಚೀನ ಕಾಲದಿಂದಲೂ ಶ್ರೀ ರೂಪ, ಶ್ರೀ ಸನಾತನ ಮುಂತಾದ ಆರು ಗೋಸ್ವಾಮಿಗಳ ಕಾಲದವರೆಗು ಭಕ್ತ ಜನರು ಎಲ್ಲ ಏಕಾದಶಿಗಳ ಅನುಷ್ಠಾನವನ್ನು ನೀರನ್ನು ಸೇವಿಸದೆ ನಿರ್ಜಲ ಏಕಾದಶಿ ರೀತಿಯಲ್ಲೇ ಮಾಡುತ್ತಿದ್ದರು.

ಅಂಬರೀಷ ಮಹಾರಾಜರು ಪ್ರತ್ಯೇಕ ಏಕಾದಶಿಯ ಅನುಷ್ಠಾನವನ್ನು ಮೂರು ದಿನಗಳವರೆಗು ಆಚರಿಸುತ್ತಿದ್ದರು. ಮೊದಲ ದಿನ ತಮ್ಮ ಆಹಾರವನ್ನು ನಿಯಂತ್ರಿಸುತ್ತಿದ್ದರು,

ಮರು ದಿನ ಅವರು ತಿನ್ನುವುದರಿಂದ ಮತ್ತು ಕುಡಿಯುವುದರಿಂದ ದೂರಸರಿಯುತ್ತಿದ್ದರು ಮತ್ತು ಮೂರನೇ ದಿನ ಅವರು ಕೇವಲ ಒಂದು ಬಾರಿ ಮಾತ್ರ ಆಹಾರವನ್ನು ಸ್ವೀಕರಿಸುತ್ತಿದ್ದರು.

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಭಾರತದಲ್ಲಿ ಪ್ರತಿಯೊಂದು ಏಕಾದಶಿಯ ಪಾಲನೆಯು ಕಡ್ಡಾಯವಾಗಿ ಭೋಜನ ಅಥವಾ ನೀರು ಇಲ್ಲದೇ ಮಾಡಲಾಗುತ್ತದೆ. ಪೂಜ್ಯಪಾದ ಶ್ರೀಲ ಭಕ್ತಿವೇದಾಂತ ಸ್ವಾಮಿ ಮಹಾರಾಜರು ಪಶ್ಚಿಮ ದೇಶದ ಭಕ್ತರು ಸ್ವಲ್ಪ ಹಂತದವರೆಗು ಬಲಹೀನರಾಗಿರುವರು ಎಂಬುದನ್ನು ಗಮನಿಸಿದರು, ಆದ್ದರಿಂದ ಅವರು ಇವರಿಗಾಗಿ ರಿಯಾಯತಿಯ ಸೂತ್ರವನ್ನು ತಿಳಿಸಿಕೊಟ್ಟರು.

ಅವರು ಹೇಳಿದರು, ದಿನದಲ್ಲಿ ಮೂರು ಬಾರಿ ಅನುಕಲ್ಪವನ್ನು ಸ್ವೀಕರಿಸಬಹುದು. ಆದರೆ, ಅನುಕಲ್ಪವನ್ನು ಸ್ವೀಕರಿಸುವುದನ್ನು ಬಿಟ್ಟು, ಅವರು ಬೃಹತ್–ಕಲ್ಪ (ಬೃಹತ್–ಫಲಹಾರವನ್ನು) ತೆಗೆದುಕೊಳ್ಳುತ್ತಿದ್ದಾರೆ. ಎಷ್ಟು ಅವರು ತಿಂದು–ಕುಡಿಯ ಬಹುದೋ, ಅಷ್ಟು ಪ್ರಮಾಣದಲ್ಲಿ ಫಲಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಏನು ನಿಮಗೆ ಅರ್ಥವಾಯಿತೇ? ಇದು ಸರಿಯಲ್ಲ.

ಯಶಸ್ವಿನೀ ದಾಸಿ: ಏನಾದರು ಒಬ್ಬ ವ್ಯಕ್ತಿ ನಿರ್ಜಲ ಏಕಾದಶಿ ಮಾಡುತ್ತ ನಿಮ್ಮ ಪ್ರಸಾದದ ಅವಶೇಷವನ್ನು ತಿಂದರೆ ಆಗ ಅದರಿಂದ ಏನು ಅವನ ಏಕಾದಶಿ ಭಂಗವಾಗುವುದೆ?

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಹಾಂ!

ಶ್ರೀಪಾದ ಮಾಧವ ಮಹಾರಾಜರು: ನೀವು ಶ್ರೀಲ ಗುರುದೇವರ ಉಚ್ಚಿಷ್ಟ ಪ್ರಸಾದವನ್ನು ಬೇರೆಡೆ ಇಟ್ಟು ನಿರ್ಜಲ ಏಕಾದಶಿ ನಂತರದ ದಿನದಂದು ಸೇವಿಸಬಹುದು. [ಇದರಿಂದ ನಿರ್ಜಲ ಏಕಾದಶಿ ವ್ರತದ ರಕ್ಷಣೆಯೂ ಸಹ ಆಗುವುದು ಮತ್ತು ಭಕ್ತರು ಗುರುದೇವರ ಪ್ರಸಾದವನ್ನೂ ಸಹ ಗೌರವಿಸಿದಂತಾಗುತ್ತದೆ.]

ಭಕ್ತ: ನಾನು ಕೆಲವು ಅಪರಾಧವನ್ನು ಮಾಡಿದ್ದೇನೆ.

ಶ್ರೀಲ ನಾರಾಯಣ ಗೋಸ್ವಾಮಿ ಮಹಾರಾಜರು: ಅಪರಾಧವನ್ನು ಮಾಡಬೇಡಿ. ಏನಾದರು ನೀವು ನಿಮ್ಮ ಜಪವನ್ನು ಹೆಚ್ಚಿಸಿದರೆ, ಅಪರಾಧಗಳ ವಿನಾಶವಾಗುತ್ತದೆ.

ಏಕಾದಶಿ ವ್ರತ ಪಾರಣೆಯ ನಿಯಮ

ಏನಾದರು ಏಕಾದಶಿ ವ್ರತದ ಪಾಲನೆಯನ್ನು ನಿರ್ಜಲ ಮಾಡಿದ್ದರೆ, ಆಗ ಚರಣಾಮೃತದ ಮೂಲಕ ಪಾರಣೆಯನ್ನು ಮಾಡಬಹುದು, ಏನಾದರು ಫಲಹಾರಗಳಿಂದ ಮಾಡಿದ್ದರೆ ಅನ್ನ–ಪ್ರಸಾದದ ಮೂಲಕ ಪಾರಣೆ ಮಾಡಬಹುದು. ಸಮಯಕ್ಕೆ ಸರಿಯಾಗಿ ಪಾರಣೆ ಮಾಡುವುದರಿಂದ ಏಕಾದಶಿ ವ್ರತವು ಸಂಪೂರ್ಣವಾಗುತ್ತದೆ. ಮಹಾದ್ವಾದಶಿ ಉಪಸ್ಥಿತವಿದ್ದಾಗ ಏಕಾದಶಿಯ ಸ್ಥಾನದಲ್ಲಿ ಮಹಾದ್ವಾದಶಿ ತಿಥಿಯಂದೇ ವ್ರತವನ್ನು ಪಾಲಿಸಬೇಕು ಎಂಬ ನಿಯಮವಿದೆ. ಎಲ್ಲ ಏಕಾದಶಿ ಮಹಾದ್ವಾದಶಿ ಪಾರಣೆಯ ಸಮಯ ಮುಂತಾದವುಗಳ ವಿವರಣೆಯು ಗೌಡೀಯ ವೇದಾಂತ ಪ್ರಕಾಶನದ ಮೂಲಕ ಪ್ರಸ್ತುತ ವೈಷ್ಣವ ವ್ರತೋತ್ಸವ ಪಟ್ಟಿಯಲ್ಲಿ ಪಡೆಯಬಹುದು.

ಅನುಕಲ್ಪ
(ಏಕಾದಶಿಯಂದು ಸ್ವೀಕರಿಸಲು ಯೋಗ್ಯವಾದ ಖಾದ್ಯ ಪದಾರ್ಥಗಳು)

(೧) ಎಲ್ಲ ಹಣ್ಣುಗಳು (ತಾಜ ಮತ್ತು ಒಣಗಿದ), ಒಣಗಿದ ಬೀಜ ಮತ್ತು ಅವುಗಳಿಂದ ತೆಗೆದಂತಹ ತೈಲ, ಸಿಂಗಾಡುಬೀಜ, ಕಬ್ಬು ಮತ್ತು ಕಬ್ಬಿನಿಂದ ಮಾಡಿರುವಂತಹ ಪದಾರ್ಥಗಳು. ಸಕ್ಕರೆಯಲ್ಲಿ ಗೋವು, ಹಂದಿ ಮತ್ತು ನಾಯಿಯ ಮೂಳೆಗಳ ಪುಡಿಯನ್ನು ಸೇರಿಸಿರುತ್ತಾರೆ ಆದಕಾರಣ ಶುದ್ಧ ಬೆಲ್ಲವನ್ನು (ಮೈದಾ ಮಿಶ್ರಿತವಲ್ಲದನ್ನು) ಬಳಸಿದರೆ ಒಳ್ಳೆಯದು.

(೨) ಆಲುಗಡ್ಡೆ, ಗೆಣಸು, ಕುಂಬಳಕಾಯಿ, ಸೌತೆಕಾಯಿ, ಮೂಲಂಗಿ, ನಿಂಬೆ, ತೆಂಗು, ಅವಕಾಡೊ (ಮೆಕ್ಸಿಕೋ ಪ್ರದೇಶದಲ್ಲಿ ಹುಟ್ಟುವ ಹಣ್ಣು), ನೀರು ಕಣಿಗಳು, ಆಲಿವ್ ಮತ್ತು ಕಡ್ಲೆಕಾಯಿ ಬೀಜ ಇವುಗಳನ್ನು ಸ್ವೀಕರಿಸಬಹುದು.

(೩) ಹಾಲು ಮತ್ತು ಇದರಿಂದ ಮಾಡಿರುವಂತಹ ಎಲ್ಲ ಪದಾರ್ಥಗಳು. ಚಾತುರ್ಮಾಸದ ಎರಡೇ ಮಾಸದಲ್ಲಿ (ದಧ್ಧಿ ವ್ರತ) ಮೊಸರನ್ನು ತ್ಯಜಿಸತಕ್ಕದ್ದು ಮತ್ತು ಮೂರನೇ ಮಾಸದಲ್ಲಿ (ಕ್ಷೀರ ವ್ರತ) ಹಾಲನ್ನು ತ್ಯಜಿಸತಕ್ಕದ್ದು.

(೪) ಭಾರತೀಯ ಹಸುವಿನ ಹಾಲಿನಿಂದ ಮಾಡಿರುವಂತಹ ಶುದ್ಧ ತುಪ್ಪ, ಕಡ್ಲೆಕಾಯಿ ಎಣ್ಣೆ, ತೆಂಗಿನ ಎಣ್ಣೆ ಮತ್ತು ಬಾದಾಮಿ ಎಣ್ಣೆಯನ್ನು ಬಳಸಬಹುದು.

ಏಕಾದಶಿಯಂದು ಬಳಸಲು ಯೋಗ್ಯವಾದ ಮಸಾಲೆ

ಮೆಣಸು, ಹಸಿ ಶುಂಟಿ, ಶುದ್ಧ ಕಲ್ಲುಪ್ಪು (ಸಮುದ್ರದ ಉಪ್ಪನ್ನು ಏಕಾದಶಿಯಂದು ಬಳಸಬಾರದು) ಮತ್ತು ತಾಜ ಅರಿಶಿನ (ಮೈದಾ ಹಿಟ್ಟಿ ಮಿಶ್ರಿತವಲ್ಲದ ಶುದ್ಧವಾದ ಅರಿಶಿನ).

ಏಕಾದಶಿಯಂದು ನಿಷೇಧಿಸಲಾದ ಆಹಾರ ಪದಾರ್ಥಗಳು

(೧) ಟಮೇಟೊ, ಬದನೇಕಾಯಿ, ಹೂಕೋಸು, ಬ್ರಾಂಕೊಲಿ, ದೊಡ್ಮೆಣಸಿನಕಾಯಿ,

ಮೆಣಸಿನಕಾಯಿ, ಕಡ್ಲೆ ಬೇಳೆ, ತೊಗರೀ ಬೇಳೆ, ಕಾಬುಲ್ಕಡ್ಲೆ ಮತ್ತು ಎಲ್ಲ ತರಹದ ಬೇಳೆಗಳು ಮತ್ತು ಇವುಗಳಿಂದ ಮಾಡಿರುವಂತಹ ಪದಾರ್ಥಗಳನ್ನು ಸೇವಿಸಬಾರದು.

(೨) ಹಾಗಲಕಾಯಿ, ಸೋರೆ ಕಾಯಿ, ತೊಂಡೆ ಕಾಯಿ, ಹೀರೆ ಕಾಯಿ, ಅವರೇ ಕಾಯಿ, ಚಪ್ಪರದ ಅವರೇ ಕಾಯಿ, ಬಾಳೆಹೂವು.

(೩) ಎಲ್ಲ ಪ್ರಕಾರದ ಸೊಪ್ಪಿನ ಪಲ್ಯಗಳು– ಪಾಲಕ್, ದಂಟಿನ ಸೊಪ್ಪು, ಕರಿಬೇವು, ನಿಂಬೆ ಎಲೆ ಇತ್ಯಾದಿ.

(೪) ಅನ್ನ ಜಾತಿಯ ಪದಾರ್ಥಗಳು– ಗೋದಿ, ಜೋಳ, ಸಜ್ಜೆ, ಜವೆಗೋಧಿ, ರಾಗಿ, ಅಕ್ಕಿ, ರವೆ, ನುಚ್ಚು, ಕುಸಲಕ್ಕಿ, ಅವಲಕ್ಕಿ, ಹಿಟ್ಟು ಇತ್ಯಾದಿ.

(೫) ಧಾನ್ಯಗಳಿಂದ ಮಾಡಿರುವಂತಹ ಎಣ್ಣೆ– ಮೆಕ್ಕೆಜೋಳದ ಎಣ್ಣೆ, ಸಾಸಿವೆ ಎಣ್ಣೆ, ಎಳ್ಳು ಎಣ್ಣೆ, ಸೋಯಬೀನ್ ಎಣ್ಣೆ ಮತ್ತು ಸಾಮಾನ್ಯ ವನಸ್ಪತಿ ಎಣ್ಣೆ ಮತ್ತು ಈ ಎಣ್ಣೆಗಳಿಂದ ಹುರಿದಿರುವಂತಹ ಪದಾರ್ಥಗಳು ಅಂದರೆ ಕಡ್ಲೆ, ಗೋಡಂಬಿ, ಆಲುಗಡ್ಡೆ ಚಿಪ್ಸ್ ಇತ್ಯಾದಿ.

(೬) ಜೋಳ ಅಥವಾ ಅಕ್ಕಿಯಿಂದ ಮಾಡಿರುವಂತಹ ಹಿಟ್ಟು ಮಿಶ್ರಿತವಾದ ಬೇಕಿಂಗ್ ಸೋಡ, ಬೇಕಿಂಗ್ ಪೌಡರ್, ಸಬ್ಬಕ್ಕಿ ಹಿಟ್ಟು, ಕಸ್ಟರ್ಡ್, ಕೇಕ್, ಹಲ್ವಾ, ಕ್ರೀಮ್, ಮಿಠಾಯಿ ಇತ್ಯಾದಿ.

(೭) ಜೇನು ತುಪ್ಪ.

ಏಕಾದಶಿಯಂದು ನಿಷೇಧಿಸಲಾದ ಮಸಾಲೆಗಳು

ಇಂಗು, ಸಾಸಿವೆ, ಜೀರಿಗೆ, ಮೆಂತ್ಯ, ಎಳ್ಳು, ಹುಣಿಸೆ, ಸೋಂಪು, ಏಲಕ್ಕಿ, ಕರಿ ಜೀರಿಗೆ, ಜಾಯಿಕಾಯಿ, ಗಸಗಸೆ, ಓಂ ಕಾಳು, ಲವಂಗ ಇತ್ಯಾದಿ.

ಏಕಾದಶಿಯನ್ನು ಹೇಗೆ ಪಾಲಿಸಬೇಕು?

ಎಂದಿಗೂ ಸಹ ಮಾಂಸ, ಮೀನು, ಮೊಟ್ಟೆ, ಈರುಳ್ಳಿ, ಬೆಳ್ಳುಳ್ಳಿ, ಕ್ಯಾರೆಟ್, ಕೆಂಪು ಮಸೂರ, ಹಸಿರು ಮಸೂರ ಬೇಳೆ (Green Flat Lentiles), ಅಣಬೆ ಇವುಗಳಿಂದ ಮಾಡಿರುವಂತಹ ಅಡುಗೆಯನ್ನು ಸೇವಿಸಬಾರದು. ಏಕಾದಶಿಯಂದು ಟೀ, ಕಾಫಿ, ಎಲೆ–ಅಡಿಕೆ, ಗುಟ್ಕ, ತಂಬಾಕು ಪುಡಿ, ಬೀಡಿ, ಸಿಗರೆಟ್, ಸುಪಾರಿ, ಸಾರಾಯಿ ಇವುಗಳನ್ನು ತ್ಯಾಗಮಾಡಬೇಕು. ಏಕಾದಶಿಯಂದು ಸ್ತ್ರೀಸಂಗವನ್ನು ಮಾಡಿದರೆ ಕ್ಷಯರೋಗ (Tuberculosis TB) ಉಂಟಾಗುವುದು.

ನಿಮಗೆ ಸಬ್ಬಕ್ಕಿಯ ನಿಜಾಂಶ ಗೊತ್ತೇ?

ಸಾಮಾನ್ಯವಾಗಿ ಸಬ್ಬಕ್ಕಿಯನ್ನು ಸಸ್ಯಾಹಾರಿಯೆಂದು ಭಾವಿಸಲಾಗುತ್ತದೆ ಮತ್ತು ಅದನ್ನು ವ್ರತ ಉಪವಾಸಗಳಲ್ಲಿ ಕೆಲವುಕಡೆ ಬಳಸಲಾಗುತ್ತದೆ. ಆದರೆ ನಿಮಗೆ ಗೊತ್ತೇ ಸಸ್ಯಹಾರಿ ಎಂದು ಬಿಂಬಿಸಿಕೊಳ್ಳುವ ಸಬ್ಬಕ್ಕಿಯು ಅಸಲಿಗೆ ಮಾಂಸಾಹಾರಿಗೆ ಸಮಾನವಾದದ್ದು

ಮತ್ತು ಅತ್ಯಂತ ಅಪವಿತ್ರವಾದದ್ದು ಎಂದು? ನಿಮಗೆ ಅದರ ನಿಜ ರೂಪ ಗೊತ್ತೆ?

ಸಬ್ಬಕ್ಕಿ (Tapioca) 'ಎಂಬ ಮರಗೆಣಸು ಸಸ್ಯದ ಮೂಲಕ ತಯಾರಿಸಲಾಗುತ್ತದೆ, ಇದು ನಿಜ. ಆದರೆ ಸಬ್ಬಕ್ಕಿಯನ್ನು ತಯಾರಿಸುವ ವಿಧಾನವು ಎಷ್ಟು ಅಪವಿತ್ರವಾದದ್ದು ಎಂದರೆ ಸಸ್ಯಾಹಾರಿ ಅಥವಾ ಆರೋಗ್ಯಕರ ಎಂದು ಹೇಳಲು ಸತ್ಯಕ್ಕೆ ಬಹಳ ದೂರವಾದದ್ದು.

ಸಬ್ಬಕ್ಕಿಯನ್ನು ತಯಾರಿಸುವ ವಿಧಾನ, ಮೊದಲು ಮರಗೆಣಸಿನ ಸಸ್ಯವನ್ನು ದೊಡ್ಡ ಮೈದಾನದಲ್ಲಿ ಹೊಂಡವನ್ನು ಮಾಡಿ ಅದರಲ್ಲಿ ಹಾಕುತ್ತಾರೆ. ತದನಂತರ ರಸಾಯನಗಳನ್ನು ಬಳಸಿ ಅದನ್ನು ದೀರ್ಘಕಾಲದವರೆಗೆ ನೆನೆಸುತ್ತಾರೆ. ಈ ರೀತಿಯಾಗಿ ನೆನೆಸಿದನಂತರ ಅದನ್ನು ಅನೇಕ ತಿಂಗಳಕಾಲ ಕೊಳೆಯುತ್ತ ತೆರೆದ ಸ್ಥಿತಿಯಲ್ಲಿ ಧೂಳ ಮಳೆ–ಕೊಳೆಯೊಂದಿ ಬಿದ್ದಿರುತ್ತದೆ. ರಾತ್ರಿಯ ವೇಳೆ ಇದು ಬೇಗ ಒಣಗಲೆಂದು ದೊಡ್ಡ ದೊಡ್ಡ ಬಲ್ಬಗಳನ್ನು ಬಳಸುತ್ತಾರೆ, ಇದರಿಂದ ಚಿಕ್ಕ–ಚಿಕ್ಕ ಕ್ರಿಮಿ ಕೀಟಗಳು ಅದರಲ್ಲಿ ಬಿದ್ದು ಸಾಯುತ್ತವೆ.

ಹೀಗೆ ಹೊಂಡದಲ್ಲಿ ಕೊಳೆಯುತ್ತಿರುವ ಸಬ್ಬಕ್ಕಿಗೆ ಸ್ವಲ್ಪ ನೀರನ್ನು ಹಾಕುತ್ತಾರೆ, ಇದರಿಂದಾಗಿ ಅದರಲ್ಲಿ ಬಿಳೀಬಣ್ಣದ ಕೋಟ್ಯಾನು–ಕೋಟಿ ಕ್ರಿಮಿಗಳು ಉತ್ಪನ್ನವಾಗುತ್ತದೆ. ತದನಂತರ ಇದನ್ನು ಅಲ್ಲಿನ ಕೆಲಸದವರು ತಮ್ಮ ಕಾಲುಗಳಿಂದ ತುಳಿಯುತ್ತಾರೆ. ಈ ಪ್ರಕ್ರಿಯೆಯನಂತರ ಅದರಲ್ಲಿ ಕೊಳೆತು ನಾರುವ ಸಬ್ಬಕ್ಕಿಯನ್ನು ಒಣಗಿಸಿ ಯಂತ್ರಗಳ ಮೂಲಕ ಹೊಳೆಯುವಂತೆ ಮಾಡಿ ನಮಗೆ ನೀಡುತ್ತಾರೆ. ಇಷ್ಟು ಹೊಳೆಯುವ ಬಿಳುಪಿನ ಸಬ್ಬಕ್ಕಿಯನ್ನು ತಯಾರಿಸುವ ಅಪವಿತ್ರತೆಯು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ.

ಕೂರ್ಮ ಅವತಾರ

ಭಗವಾನ್ ವಿಷ್ಣುವಿನ ಹತ್ತು ಅವತಾರಗಳಲ್ಲಿ ಕೂರ್ಮ ಅವತಾರ ಒಂದು. ಕೂರ್ಮ ಅವತಾರದ ಕಥೆ ಈ ಪ್ರಾಕಾರವಾಗಿದೆ. ಬ್ರಹ್ಮದೇವರು ಭೃಗು, ಮರೀಚಿ, ಅತ್ರಿ, ದಕ್ಷ, ಕರ್ದಮ, ಪುಲಸ್ತ್ಯ, ಪುಲಹ, ಅಂಗೀರ ಮತ್ತು ಕೃತು– ಈ ಒಂಬತ್ತು ಪ್ರಜಾಪತಿಗಳನ್ನು ಉತ್ಪನ್ನ ಮಾಡಿದರು. ಮಹರ್ಷಿ ಅತ್ರಿಯ ಪುತ್ರ ದುರ್ವಾಸರು ಬಹಳ ದೊಡ್ಡ ತೇಜಸ್ವಿ ಮುನಿಗಳಾಗಿದ್ದರು. ಅವರು ಮಹಾನ್ ತಪಸ್ವಿಗಳು, ಅತ್ಯಂತ ಕೋಪಿಷ್ಟರು ಮತ್ತು ಸಂಪೂರ್ಣ ಲೋಕವನ್ನು ಕ್ಷೋಭೆಗೆ ತಳ್ಳುವಂತಹವರು.

ಒಂದು ಸಮಯದ ಮಾತೇನೆಂದರೆ– ದುರ್ವಾಸರು ದೇವರಾಜ ಇಂದ್ರನನ್ನು ಭೇಟಿಮಾಡಲು ಸ್ವರ್ಗಲೋಕಕ್ಕೆ ಹೋದರು. ಆ ಸಮಯದಲ್ಲಿ ಇಂದ್ರ ಆನೆಯ ಮೇಲೆ ಕುಳಿತು ಸಂಪೂರ್ಣ ದೇವತೆಗಳಿಂದ ಪೂಜಿಸಲ್ಪಟ್ಟು ಎಲ್ಲೋ ಹೋಗಲು ಸಿದ್ಧನಾಗಿದ್ದ. ಅವನನ್ನು ಕಂಡು ಮಹಾತಪಸ್ವಿ ದುರ್ವಾಸರ ಮನಸ್ಸು ಪ್ರಸನ್ನವಾಯಿತು. ಅವರು ವಿನಯ

ಭಾವದಿಂದ ದೇವರಾಜನಿಗೆ ಪಾರಿಜಾತದ ಮಾಲೆಯನ್ನು ಹಾಕಿದರು. ದೇವರಾಜನು ಅದನ್ನು ತೆಗೆದು ಆನೆಯ ತಲೆಯ ಮೇಲೆ ಹಾಕಿದ ಮತ್ತು ಅವನು ನಂದನವನದ ಕಡೆಗೆ ಹೊರಟುಹೋದ. ಆನೆ ಮಧದಿಂದ ಉನ್ಮತ್ತವಾಗಿದ್ದಿತು. ಅದು ತನ್ನ ಸೊಂಡಲಿನಿಂದ ಆ ಮಾಲೆಯನ್ನು ತೆಗೆದು ನೆಲಕ್ಕೆ ಎಸೆಯಿತು.

ಇದರಿಂದ ದುರ್ವಾಸರು ಕೋಪಗೊಂಡರು ಮತ್ತು ಅವರು ಶಾಪವನ್ನು ನೀಡುತ್ತ ಹೇಳಿದರು– "ದೇವರಾಜ! ನೀನು ತ್ರಿಭುವನದ ರಾಜ್ಯಲಕ್ಷ್ಮೀಯಿಂದ ಸಂಪನ್ನಾದ ಕಾರಣ ನನ್ನನ್ನು ಅಪಮಾನ ಮಾಡಿರುವೆ. ಆದ್ದರಿಂದ ಮೂರು ಲೋಕಗಳ ಲಕ್ಷ್ಮೀ ನಷ್ಟವಾಗುತ್ತದೆ ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ." ದುರ್ವಾಸರು ಈ ರೀತಿಯಾಗಿ ಶಾಪವನ್ನು ನೀಡಿರುವುದರಿಂದ ಇಂದ್ರನು ಪುನಃ ತನ್ನ ನಗರಕ್ಕೆ ಹಿಂತಿರುಗಿದನು. ತದನಂತರ ಜಗನ್ಮಾತೆ ಲಕ್ಷ್ಮೀ ಅಂತರ್ಧನಳಾದಳು. ಬ್ರಹ್ಮ ಮುಂತಾದ ದೇವತೆಗಳು, ಗಂಧರ್ವರು, ಯಕ್ಷರು, ಕಿನ್ನರರು, ದೈತ್ಯರು, ದಾನವರು, ನಾಗರು, ಮನುಷ್ಯರು, ರಾಕ್ಷಸರು, ಪಶು–ಪಕ್ಷಿ ಹಾಗೂ ಕೀಟ ಇತ್ಯಾದಿ ಜಗತ್ತಿನ ಸಮಸ್ತ ಚರಾಚರ ಪ್ರಾಣಿಗಳು ದಾರಿದ್ರತೆಯ ಹೊಡೆತದಿಂದ ದುಃಖವನ್ನು ಅನುಭವಿಸುತ್ತಿದ್ದವು.

ಎಲ್ಲರು ಹಸಿವು–ಬಾಯಾರಿಕೆಯಿಂದ ಪೀಡಿತರಾಗಿ ಬ್ರಹ್ಮದೇವರ ಹತ್ತಿರ ಹೋಗಿ ಹೇಳಿದರು– "ಭಗವಾನ್! ಮೂರು ಲೋಕಗಳು ಹಸಿವು–ಬಾಯಾರಿಕೆಯಿಂದ ಪೀಡಿತವಾಗಿವೆ. ನೀವು ಎಲ್ಲ ಲೋಕಗಳ ಸ್ವಾಮಿ ಮತ್ತು ರಕ್ಷಕ. ನಾವು ನಿಮ್ಮ ಆಶ್ರಯದಲ್ಲಿ ಬಂದಿದ್ದೇವೆ. ದೇವೇಶ ನೀವು ನಮ್ಮನ್ನು ರಕ್ಷಿಸಿರಿ."

ಬ್ರಹ್ಮ ಈ ಮಾತನ್ನು ಕೇಳಿ ಹೀಗೆ ಹೇಳಿದರು– "ದೇವತೆಗಳೆ, ದೈತ್ಯರೆ, ಗಂಧರ್ವರೆ ಮತ್ತು ಮನುಷ್ಯರೆ ಮತ್ತು ಮುಂತಾದ ಪ್ರಾಣಿಗಳೆ! ಕೇಳಿ. ಇಂದ್ರನ ಅನಾಚಾರದಿಂದ ಈ ಎಲ್ಲ ಸಂಕಟಗಳು ಉದ್ಭವಿಸಿವೆ. ದುರ್ವಾಸರ ಕ್ರೋಧದಿಂದ ಇಂದು ಮೂರು ಲೋಕಗಳು ನಾಶವಾಗುತ್ತಿವೆ. ಯಾರ ಕೃಪೆ–ಕಟಾಕ್ಷದಿಂದ ಈ ಎಲ್ಲ ಲೋಕಗಳು ಸುಖಿಸುತ್ತವೋ, ಆ ಜಗನ್ಮಾತೆ ಮಹಾಲಕ್ಷ್ಮಿ ಅಂತರ್ಧನಳಾಗಿದ್ದಾಳೆ. ಆದ್ದರಿಂದ ನಾವು ಎಲ್ಲರು ಹೋಗಿ ಕ್ಷೀರಸಾಗರದಲ್ಲಿ ವಿರಾಜಮಾನನಾಗಿರುವ ಸನಾತನ ದೇವ ಭಗವಾನ್ ನಾರಾಯಣನನ್ನು ಆರಾಧಿಸೋಣ. ಅವನು ಪ್ರಸನ್ನನಾದರೆ ಸಂಪೂರ್ಣ ಜಗತ್ತಿಗೆ ಶ್ರೇಯಸ್ಸುಂಟಾಗುತ್ತದೆ." ಎಂದು ನಿಶ್ಚಯಗೊಳಿಸಿ ಬ್ರಹ್ಮದೇವರು, ಸಂಪೂರ್ಣ ದೇವತೆಗಳು ಮತ್ತು ಭೃಗು ಮುಂತಾದ ಮಹರ್ಷಿಗಳೊಂದಿಗೆ ಕ್ಷೀರಸಾಗರಕ್ಕೆ ಹೋದರು ಮತ್ತು ವಿಧಿಪೂರ್ವಕವಾಗಿ ಪುರುಷಸೂಕ್ತದ ಮೂಲಕ ಅವನನ್ನು ಆರಾಧಿಸಿದರು. ಇದರಿಂದ ಪ್ರಸನ್ನನಾಗಿ ಭಗವಂತನು ಎಲ್ಲ ದೇವತೆಗಳಿಗೆ ದರ್ಶನವನ್ನು ನೀಡಿದನು. ಆಗ ಭಗವಂತನು ಹೇಳಿದನು– "ದೇವತೆಗಳೆ! ಅತ್ರಿಕುಮಾರ ದುರ್ವಾಸರ ಶಾಪದಿಂದ ಭಗವತೀ ಲಕ್ಷ್ಮಿಯು ಅಂತರ್ಧನಳಾದಳು. ಆದ್ದರಿಂದ ನೀವು ಮಂದರಾಚಲ ಪರ್ವತವನ್ನು ಕಿತ್ತು ಕ್ಷೀರಸಮುದ್ರದಲ್ಲಿ ಹಾಕಿರಿ ಮತ್ತು ಅದರಿಂದ ಮಥನಮಾಡಲು ನಾಗರಾಜನಾದ ವಾಸುಕಿಯನ್ನು ಹಗ್ಗದಂತೆ ಸುತ್ತಿರಿ. ಮತ್ತೆ ದೈತ್ಯ, ಗಂಧರ್ವ ಮತ್ತು ದಾನವರೊಂದಿಗೆ ಸೇರಿ ಸಮುದ್ರದ ಮಂಥನ ಮಾಡಿರಿ. ಇದರಿಂದ ಜಗತ್ತಿನ ರಕ್ಷಣೆಗಾಗಿ ಲಕ್ಷ್ಮೀದೇವಿ ಪ್ರಕಟಿತಳಾಗುತ್ತಾಳೆ. ಅವಳ ಕೃಪಾ ದೃಷ್ಟಿಯು ಬೀಳುತ್ತಿದ್ದಂತೆಯೇ ನೀವು

ಮಹಾನ್ ಸೌಭಾಗ್ಯಶಾಲಿಗಳಾಗುವಿರಿ. ನಾನೆ ಕೂರ್ಮನಾಗಿ ಮಂದರಾಚಲ ಪರ್ವತವನ್ನು ನನ್ನ ಬೆನ್ನಿನ ಮೇಲೆ ಧಾರಣೆ ಮಾಡುವೆನು. ಮತ್ತು ನಾನೇ ಸಂಪೂರ್ಣ ದೇವತೆಗಳಲ್ಲಿ ಪ್ರವೇಶಮಾಡಿ ನನ್ನ ಶಕ್ತಿಯಿಂದ ಅವರನ್ನು ಬಲಿಷ್ಠರಾಗಿ ಮಾಡುವೆನು." ಎಂದು ಹೀಗೆ ಹೇಳಿ ಭಗವಂತನು ಅಲ್ಲಿದ ಅಂತರ್ಧಾನನಾದನು.

ತದನಂತರ ಸಂಪೂರ್ಣ ದೇವತೆಗಳು ಮತ್ತು ಮಹಾಬಲಿ ದಾನವ ಮುಂತಾದವರು ಮಂದರಾಚಲವನ್ನು ಕಿತ್ತು ಕ್ಷೀರಸಾಗರದಲ್ಲಿ ಹಾಕಿದರು. ಇದೇ ಸಮಯ ಅಮಿತ ಪರಾಕ್ರಮಿಯಾದ ಭಗವಾನ್ ನಾರಾಯಣನು ಆಮೆಯ ರೂಪದಿಂದ ಪ್ರಕಟರಾಗಿ ಆ ಪರ್ವತವನ್ನು ತನ್ನ ಬೆನ್ನಿನ ಮೇಲೆ ಧಾರಣೆ ಮಾಡಿದರು ಮತ್ತು ಒಂದು ಕೈಯಿಂದ ಆ ಸರ್ವವ್ಯಾಪಿ ಅವಿನಾಶಿ ಪ್ರಭು ಆ ಶಿಖರವನ್ನು ಸಹ ಹಿಡಿದುಕೊಂಡಿದ್ದನು. ತದನಂತರ ದೇವತೆಗಳು ಮತ್ತು ಅಸುರರು ಮಂದರಾಚಲ ಪರ್ವತಕ್ಕೆ ನಾಗರಾಜ ವಾಸುಕಿಯನ್ನು ಸುತ್ತಿ ಕ್ಷೀರಸಾಗರದ ಮಂಥನವನ್ನು ಮಾಡಿದರು. ಆ ಸಮಯದಲ್ಲಿ ಮಹಾಬಲೀ ದೇವತೆ ಲಕ್ಷ್ಮೀಯನ್ನು ಪ್ರಕಟಗೊಳಿಸಲು ಕ್ಷೀರಸಾಗರವನ್ನು ಮಥನ ಮಾಡಿದರು, ಆ ಸಮಯದಲ್ಲಿ ಸಂಪೂರ್ಣ ಮಹರ್ಷಿಗಳು ಉಪವಾಸವನ್ನು ಮಾಡಿ ಮನಸ್ಸನ್ನು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಸಮ್ಯಮಪೂರ್ವಕವಾಗಿ ಶ್ರೀಸೂಕ್ತ ಮತ್ತು ವಿಷ್ಣುಸಹಸ್ರನಾಮವನ್ನು ಪಠನೆ ಮಾಡಿದರು. ಶುದ್ಧ ಏಕಾದಶಿ ತಿಥಿಯಂದು ಸಮುದ್ರ ಮಂಥನ ಆರಂಭವಾಯಿತು. ಆ ಸಮಯ ಲಕ್ಷ್ಮೀದೇವಿಯ ಪ್ರಾದುರ್ಭಾವದ ಅಭಿಲಾಷೆಯನ್ನು ಇಟ್ಟುಕೊಂಡು ಶ್ರೇಷ್ಠ ಬ್ರಾಹ್ಮಣರು ಮತ್ತು ಮುನಿಗಳು ಭಗವಾನ್ ಲಕ್ಷ್ಮೀನಾರಾಣಯರ ಧ್ಯಾನ ಮತ್ತು ಪೂಜೆಯನ್ನು ಮಾಡಿದರು.

ಆ ಸಮಯ ಪ್ರಪ್ರಥಮವಾಗಿ ಕಾಲಕೂಟ ಎಂಬ ಮಹಾಭಯಂಕರ ವಿಷ ಪ್ರಕಟವಾಯಿತು, ಅದು ಬಹಳ ದೊಡ್ಡ ಪಿಂಡದ ರೂಪದಲ್ಲಿತ್ತು. ಅದು ಪ್ರಳಯಕಾಲದ ಅಗ್ನಿಯಂತೆ ಅತ್ಯಂತ ಭಯಂಕರವಾಗಿ ಗೋಚರಿಸಿತು. ಅದನ್ನು ನೋಡುತ್ತಿದ್ದಂತೆ ಸಮಸ್ತ ದೇವತೆಗಳು ಮತ್ತು ದಾನವರು ಓಡಿಹೋದರು. ಶ್ರೀ ಶಂಕರನು ತನ್ನ ಹೃದಯದಲ್ಲಿ ಸರ್ವದುಃಖಹಾರಿ ಭಗವಾನ್ ನಾರಾಯಣನನ್ನು ಧ್ಯಾನಮಾಡಿ ಮತ್ತು ಅವನ ಮೂರು ನಾಮರೂಪಿ ಮಹಾಮಂತ್ರವನ್ನು ಭಕ್ತಿ ಪೂರ್ವಕವಾಗಿ ಜಪವನ್ನು ಮಾಡುತ್ತ ಭಯಂಕರವಾದ ವಿಷವನ್ನು ಕುಡಿದನು. ಅಚ್ಯುತ, ಅನಂತ ಮತ್ತು ಗೋವಿಂದಾ– ಎಂಬ ಈ ಶ್ರೀ ಹರಿಯ ಮೂರು ನಾಮಗಳು. ಓಂ ಅಚ್ಯುತಾಯ ನಮಃ, ಓಂ ಅನಂತಾಯ ನಮಃ, ಹಾಗೂ ಓಂ ಗೋವಿಂದಾಯ ನಮಃ ಎಂದು ಯಾರು ಈ ಮೂರು ನಾಮಗಳನ್ನು ಏಕಾಗ್ರಚಿತ್ತರಾಗಿ ಜಪ ಮಾಡುವರೋ, ಅವರಿಗೆ ಕಾಲ ಮತ್ತು ಮೃತ್ಯುವಿನಿಂದ ಭಯ ಇರುವುದಿಲ್ಲ.

ಮತ್ತೆ ಸಮುದ್ರ ಮಂಥನವನ್ನು ಮಾಡಿದಾಗ ಲಕ್ಷ್ಮೀದೇವಿಯ ಅಕ್ಕ ದರಿದ್ರ ದೇವಿ ಪ್ರಕಟಳಾದಳು. ಅವಳು ದೇವತೆಗಳಿಗೆ ಕೇಳಿದಳು– "ನನಗೆ ಏನು ಆಜ್ಞೆ ನೀಡುವಿರಿ." ಆಗ ದೇವತೆಗಳು ಅವಳಿಗೆ ಹೇಳಿದರು– "ಯಾರ ಮನೆಯಲ್ಲಿ ಪ್ರತಿದಿನ ಕಲಹವಾಗುತ್ತಿರುವುದೋ ಅಲ್ಲೇ ನಾವು ನಿನಗೆ ಸ್ಥಾನ ನೀಡುತ್ತೇವೆ. ನೀನು ಅಮಂಗಳವನ್ನು ಕರೆದುಕೊಂಡು ಅಂತಹವರ ಮನೆಗಳಲ್ಲಿ ವಾಸಮಾಡು. ಯಾರು ಸದಾ

ಸುಳ್ಳನ್ನು ನುಡಿಯುವರೋ, ಎಲ್ಲಿ ಕಠೋರ ಮಾತುಗಳನ್ನು ಆಡುವರೋ, ಅಂತಹವರ ಮನೆಯಲ್ಲಿ ದುಃಖ ಮತ್ತು ದರಿದ್ರತೆಯನ್ನು ಪ್ರಸಾದಿಸುತ್ತ ನೀನು ನಿತ್ಯ ನಿವಾಸಮಾಡು."

ದರಿದ್ರ ದೇವಿಗೆ ಈ ಪ್ರಕಾರವಾಗಿ ಆದೇಶವನ್ನು ನೀಡಿ ಪುನಃ ದೇವತೆಗಳು ಕ್ಷೀರಸಾಗರದ ಮಂಥನವನ್ನು ಆರಂಭಿಸಿದರು. ಆಗ ಸುಂದರ ನೇತ್ರದವಳಾದ ವಾರುಣಿ ದೇವಿ ಪ್ರಕಟವಾದಳು, ಅವಳನ್ನು ನಾಗರಾಜ ಅನಂತನು ಸ್ವೀಕರಿಸಿದನು. ತದನಂತರ ಸಮಸ್ತ ಶುಭಲಕ್ಷಣಗಳಿಂದ ಸುಶೋಭಿತ ಮತ್ತು ಎಲ್ಲ ಪ್ರಕಾರದ ಆಭೂಷಣಗಳಿಂದ ವಿಭೂಷಿತಳಾಗಿ ಒಬ್ಬಳು ಸ್ತ್ರೀ ಪ್ರಕಟಿತಳಾದಳು, ಅವಳನ್ನು ಗರುಡದೇವನು ತನ್ನ ಪತ್ನಿಯಾಗಿ ಮಾಡಿಕೊಂಡನು. ಇದರ ನಂತರ ದಿವ್ಯ ಅಪ್ಸರೆಯರು ಮತ್ತು ಮಹಾತೇಜಸ್ವಿ ಗಂಧರ್ವರು ಉದ್ಭವಿಸಿದರು, ಅವರು ಅತ್ಯಂತ ರೂಪವಂತರು ಮತ್ತು ಸೂರ್ಯ ಚಂದ್ರರ ಸಮಾನರಾಗಿ ತೇಜಸ್ವಿಗಳಾಗಿದ್ದರು. ತದನಂತರ ಐರಾವತ ಆನೆ, ಉಚ್ಚೈಃಶ್ರವಾ ಅಶ್ವ, ಧನ್ವಂತರಿ ವೈದ್ಯ, ಪಾರಿಜಾತ ವೃಕ್ಷ ಮತ್ತು ಸಂಪೂರ್ಣ ಕಾಮನೆಗಳನ್ನು ಪೂರ್ಣ ಮಾಡುವಂತಹ ಸುರಭಿ ಗೋವಿನ ಪ್ರಾದುರ್ಭಾವವಾಯಿತು. ಈ ಎಲ್ಲವನ್ನು ಇಂದ್ರನು ಬಹಳ ಪ್ರಸನ್ನತೆಯೊಂದಿಗೆ ಸ್ವೀಕರಿಸಿದನು.

ದ್ವಾದಶಿಯ ಪ್ರಾತಃಕಾಲದಲ್ಲಿ ಮಹಾಲಕ್ಷ್ಮೀ ಪ್ರಕಟಳಾದಳು. ಅವಳನ್ನು ಕಂಡು ದೇವತೆಗಳು ಬಹಳ ಹರ್ಷರಾದರು. ನಂತರ ಕ್ಷೀರಸಾಗರದಿಂದ ಶೀತಲ ಹಾಗೂ ಅಮೃತಮಯವಾದ ಕಿರಣಗಳಿಂದ ಯುಕ್ತನಾದ ಚಂದ್ರನು ಪ್ರಕಟನಾದನು, ಅವನು ಮಾತಾ ಲಕ್ಷ್ಮೀದೇವಿಯ ಸೋದರ. ಇದಾದಮೇಲೆ ಶ್ರೀಹರಿಯ ಪತ್ನಿ ತುಳಸಿದೇವಿ ಪ್ರಕಟಳಾದಳು. ಜಗನ್ಮಾತಾ ತುಳಸಿಯ ಪ್ರಾದುರ್ಭಾವ ಕೇವಲ ಶ್ರೀ ಹರಿಯ ಪೂಜೆಗಾಗಿಯೇ ಆದದ್ದು. ತದನಂತರ ಎಲ್ಲ ದೇವತೆಗಳು ಪ್ರಸನ್ನ ಚಿತ್ತರಾಗಿ ಮಂದರಾಚಲವನ್ನು ಯಥಾಸ್ಥಾನದಲ್ಲಿಟ್ಟರು ಮತ್ತು ಲಕ್ಷ್ಮೀದೇವಿಯನ್ನು ಸ್ತುತಿಸಲು ಪ್ರಾರಂಭಿಸಿದರು. ಆಗ ಲಕ್ಷ್ಮೀದೇವಿ ಪ್ರಸನ್ನಳಾಗಿ ಹೇಳಿದಳು– "ನನ್ನಲ್ಲಿ ನೀವು ನಿಮ್ಮ ಮನೋವಾಂಛಿತ ವರಗಳನ್ನು ಕೇಳಿರಿ."

ದೇವತೆಗಳು ಹೇಳಿದರು– "ವಿಷ್ಣುವಿನ ಪ್ರಿಯತಮೆ ಲಕ್ಷ್ಮೀದೇವಿ! ನೀವು ನಮ್ಮಲ್ಲಿ ಪ್ರಸನ್ನರಾಗಿ ಶ್ರೀ ವಿಷ್ಣುವಿನ ವಕ್ಷಸ್ಥಳದಲ್ಲಿ ನಿವಾಸಮಾಡಿರಿ. ಎಂದಿಗೂ ಸಹ ಭಗವಂತನಿಂದ ಬೇರ್ಪಡಬೇಡಿರಿ ಮತ್ತು ಮೂರು ಲೋಕಗಳನ್ನು ಎಂದಿಗೂ ಸಹ ಪರಿತ್ಯಾಗ ಮಾಡಬೇಡಿ." ಆಗ ಬ್ರಹ್ಮ ಮತ್ತು ಭಗವಾನ್ ನಾರಾಯಣ ಪ್ರಕಟರಾದರು. ಎಲ್ಲ ದೇವತೆಗಳು ಕೈಮುಗಿದು ಹೇಳಿದರು– "ಮಹಾರಾಣಿ ಲಕ್ಷ್ಮಿಯನ್ನು ಜಗತ್ತಿನ ರಕ್ಷಣೆಗಾಗಿ ಬೇಡಿಕೊಳ್ಳಿ." ಹೀಗೆ ಹೇಳಿ ಬ್ರಹ್ಮ ಮುಂತಾದ ದೇವತೆಗಳು ದಿವ್ಯ ಪೀಠದಲ್ಲಿ ಭಗವಾನ್ ವಿಷ್ಣು ಮತ್ತು ಲಕ್ಷ್ಮಿಯನ್ನು ಆಸೀನಗೊಳಿಸಿ ಅವರಿಬ್ಬರಿಗೂ ಪೂಜೆಯನ್ನು ಮಾಡಿದರು. ಕ್ಷೀರಸಾಗರದಿಂದ ಯಾವ ಕೋಮಲ ದಳದವಳಾದ ತುಳಸಿದೇವಿ ಪ್ರಕಟಳಾದಳೋ, ಅವಳಿಂದಲೇ ಅವರು ಭಗವಾನ್ ನಾರಾಯಣನ ಯುಗಲ ಚರಣಗಳಿಗೆ ಅರ್ಚನೆ ಮಾಡಿದರು. ಇದರಿಂದ ಸರ್ವದೇವೇಶ್ವರನಾದ ಭಗವಾನ್ ಶ್ರೀಹರಿಯು ಲಕ್ಷ್ಮೀಸಹಿತನಾಗಿ ಪ್ರಸನ್ನನಾಗಿ ದೇವತೆಗಳಿಗೆ ಮನೋವಾಂಛಿತ ವರಗಳು ಪ್ರಸಾದಿಸಿದರು. ಅಂದಿನಿಂದ ದೇವತೆಗಳು ಮತ್ತು ಮನುಷ್ಯ ಮುಂತಾದ ಪ್ರಾಣಿಗಳು

ಪ್ರಸನ್ನರಾದರು. ಅಲ್ಲಿಂದ ಅವರಿಗೆ ಧನ–ಧಾನ್ಯಗಳು ಪ್ರಚುರವಾಗಿ ವೃದ್ಧಿಸಿತು ಮತ್ತು ಅವರು ನಿರೋಗರಾಗಿ ಅತ್ಯಂತ ಸುಖದ ಅನುಭವ ಪಡೆದುಕೊಂಡರು.

ಲಕ್ಷ್ಮೀಸಹಿತ ಭಗವಾನ್ ವಿಷ್ಣು ಪ್ರಸನ್ನರಾಗಿ ಸಂಪೂರ್ಣ ಲೋಕಗಳ ಹಿತಕ್ಕಾಗಿ ಮಹಾಮುನಿಗಳು ಮತ್ತು ದೇವತೆಗಳಿಗೆ ಹೇಳಿದರು– "ಏಕಾದಶಿ ತಿಥಿ ಪರಮ ಪುಣ್ಯಮಯಿಯವಾದದ್ದು. ಇದು ಎಲ್ಲ ಉಪದ್ರವಗಳನ್ನು ಶಾಂತಗೊಳಿಸುತ್ತದೆ. ನೀವು ಲಕ್ಷ್ಮಿದೇವಿಯ ದರ್ಶನ ಪಡೆದುಕೊಳ್ಳಲು ಈ ತಿಥಿಯಂದು ಉಪವಾಸ ಆಚರಿಸಿದಿರಿ, ಆದ್ದರಿಂದ ಈ ದ್ವಾದಶಿ ತಿಥಿ ನನಗೆ ಸದಾ ಪ್ರಿಯವಾದದ್ದು. ಇಂದಿನಿಂದ ಯಾವ ಜನರು ಏಕಾದಶಿಯಂದು ಉಪವಾಸವಿದ್ದು ದ್ವಾದಶಿಯಂದು ಪ್ರಾತಃಕಾಲ ಸೂರ್ಯೋದಯ ಕಾಲದಲ್ಲಿ ಬಹಳ ಶ್ರದ್ಧೆಯಿಂದ ಲಕ್ಷ್ಮೀ ಮತ್ತು ತುಳಸಿಯೊಂದಿಗೆ ನನ್ನನ್ನು ಪೂಜಿಸುವರೋ, ಅವರು ಎಲ್ಲ ಬಂಧನಗಳಿಂದ ಮುಕ್ತರಾಗಿ ಪರಮ ಪದವನ್ನು ಪ್ರಾಪ್ತಿಸಿಕೊಳ್ಳುತ್ತಾರೆ."

ಹೀಗೆ ಹೇಳಿ ಭಗವಾನ್ ವಿಷ್ಣು ಮುನಿಗಳ ಮೂಲಕ ತಮ್ಮ ಸ್ತುತಿಗಳನ್ನು ಆಲಿಸುತ್ತ ಲಕ್ಷ್ಮೀದೇವಿಯ ನಿವಾಸ ಸ್ಥಾನವಾದ ಕ್ಷೀರಸಾಗರಕ್ಕೆ ಹೊರಟರು. ಅಲ್ಲಿ ಶೇಷನಾಗ ದೇವರ ಮೇಲೆ ಶಯನಿಸುತ್ತ ಲಕ್ಷ್ಮೀದೇವಿಯೊಂದಿಗೆ ನೆಲಸಿದರು. ತದನಂತರ ಎಲ್ಲ ದೇವತೆಗಳು ಕಚ್ಛಪರೂಪಧಾರಿ ಸನಾತನ ಭಗವಂತನನ್ನು ಭಕ್ತಿಪೂರ್ವಕವಾಗಿ ಪೂಜೆಯನ್ನು ಮಾಡಿ ಪ್ರಸನ್ನಚಿತ್ತರಾದರು.

ಭಗವಂತನ ಆಜ್ಞೆಯಿಂದ ಬ್ರಹ್ಮ ಮುಂತಾದ ದೇವತೆಗಳು, ಸಿದ್ಧರು, ಮನುಷ್ಯರು, ಯೋಗಿಗಳು ಹಾಗೂ ಮುನಿಶ್ರೇಷ್ಠರು ಬಹಳ ಭಕ್ತಿಯೊಂದಿಗೆ ಏಕಾದಶಿ ತಿಥಿಯಂದು ಉಪವಾಸ ಮತ್ತು ದ್ವಾದಶಿ ತಿಥಿಯಂದು ಭಗವಂತನ ಪೂಜೆಯನ್ನು ಮಾಡತೊಡಗಿದರು.

ಏಕಾದಶಿಯ ಒಂದು ಸ್ವಾರಸ್ಯಕರವಾದ ಕಥೆ

ಒಮ್ಮೆ ನಡೆದಂತಹ ಒಂದು ಘಟನೆ– ಒಂದು ಊರಿನಲ್ಲಿ ಹರಿ ಎಂಬ ಹೆಸರಿನ ಬಾಲಕನಿದ್ದ. ಅವನು ಶಿಕ್ಷಾವಂತನಾಗಿರಲಿಲ್ಲ, ಆದ್ದರಿಂದ ಅವನು ವಿಶೇಷ ಜ್ಞಾನಹೀನನಾಗಿದ್ದ. ಅದರೊಂದಿಗೆ ಅವನು ಸ್ವಲ್ಪ ಸೋಮಾರಿಯಾಗಿದ್ದ. ಆಗ ಆ ಊರಿನ ಜನರು ಹರಿಗೆ ಹೇಳಿದರು, "ಹೇ ಹರೀ! ನೀನು ಕೇವಲ ಊಟಮಾಡುವುದರಲ್ಲೇ ಕಾಲಹರಣ ಮಾಡುತ್ತಿರುವೆ, ಭೂಮಿಗೆ ಭಾರ. ನೀನು ಯಾವುದಾದರು ಒಂದು ಮಠಕ್ಕೆ ಹೋಗಿ ಸೇರಿಕೊ, ಅಲ್ಲಿ ನೀನು ಸೇವೆ ಮಾಡುವುದರಿಂದ ಹೊಟ್ಟೆತುಂಬ ಊಟ ಸಿಗುತ್ತದೆ."

ಹರಿಯೂ ಸಹ ಇದು ಒಳ್ಳೆಯ ಯೋಚನೆ ಎಂದೇ ಭಾವಿಸಿದ. ಹೀಗಾಗಿ ಅವನು ಅಯೋಧ್ಯಾ ನಗರಕ್ಕೆ ಬಂದನು. ಅಲ್ಲಿನ ಒಂದು ಮಠಕ್ಕೆ ಬಂದ. ಆ ಮಠದ ಸಾಧು–ಸಂತರ ಶರೀರವು ದಷ್ಟ–ಪುಷ್ಟವಾಗಿರುವುದನ್ನು ಗಮನಿಸಿ, ಈ ಮಠದಲ್ಲಿ ಹೇರಳವಾಗಿ ಭೋಜನ ಸಿಗುತ್ತದೆ ಎಂದು ಆಲೋಚಿಸಿದನು ಆ ಮಠದ ಗುರುಗಳನ್ನು ಬೇಟಿಮಾಡಿ ಅಲ್ಲೇ ಸೇವೆಮಾಡಿಕೊಂಡಿರಲು ಆಜ್ಞೆಯನ್ನು ಪಡೆದ.

ಕೆಲವು ದಿನಗಳ ಕಾಲ ಹರಿ ಅಲ್ಲಿ ಚೆನ್ನಾಗಿ ಸೇವೆಯನ್ನೂ ಮಾಡುತ್ತ ಒಳ್ಳೆಯ ಪ್ರಸಾದವನ್ನು ತಿನ್ನುತ್ತ ಸಂತೋಷವಾಗಿದ್ದನು. ಒಂದು ದಿನ ಬೆಳಿಗ್ಗೆ ಆ ಮಠದಲ್ಲಿ ಯಾವುದೇ ತರಹದ ಅಡಿಗೆ ತಯಾರಿ ಮಾಡಿರಲಿಲ್ಲ, ಅದನ್ನು ಕಂಡು ಹರಿ ಅಲ್ಲಿರುವಂತಹ ಒಬ್ಬ ಸಂತನಿಗೆ ಪ್ರಶ್ನಿಸಿದ, "ಸ್ವಾಮಿ! ಇಂದು ಪ್ರಸಾದಕ್ಕೆ ಅಡಿಗೆಮನೆಯಲ್ಲಿ ಏನು ತಯಾರಿಸುತ್ತಿರುವಿರಿ? ಒಲೆಯಲ್ಲಿ ಬೆಂಕಿಯೂ ಸಹ ಉರಿಯುತ್ತಿಲ್ಲ. ಇಂದು ಅಡಿಗೆ ಮಾಡುವುದಿಲ್ಲವೇ?" ಆಗ ಅವರು ಉತ್ತರಿಸಿದರು, "ಹೇ ಹರಿ! ನಿನಗೆ ಗೊತ್ತಿಲ್ಲವೇ, ಇಂದು ಏಕಾದಶಿ. ಇವತ್ತು ಉಪವಾಸವನ್ನು ಆಚರಿಸಬೇಕು", ಎಂದರು. ಆಗ ಹರಿ ಇದನ್ನು ಕೇಳಿ ತನ್ನ ಗುರುಗಳ ಬಳಿಗೆ ಬಂದು, "ಗುರುಗಳೇ! ಇಂದು ಉಪವಾಸವಿರಬೇಕು ಎಂದು ಎಲ್ಲರು ಹೇಳುತ್ತಿದ್ದಾರೆ, ಆದರೆ ನಾನೂ ಎಂದೂ ಸಹ ಉಪವಾಸವನ್ನು ಆಚರಣೆ ಮಾಡಿರಲಿಲ್ಲ, ನನಗೆ ಊಟಮಾಡದೆ ಇರಲು ಸಾಧ್ಯವಿಲ್ಲ." ಎಂದನು. ಆ ಗುರುಗಳು ಏಕಾದಶಿ ವ್ರತವನ್ನು ಆಚರಿಸಬೇಕು, ಏನನ್ನೂ ಸಹ ತಿನ್ನಬಾರದೂ ಎಂದು ಸ್ಪಷ್ಟವಾಗಿ ತಿಳಿಸಿದರು. ಆದರೆ ಅದನ್ನು ಹರಿ ಒಪ್ಪಲಿಲ್ಲ, ಹೀಗಾಗಿ ಗುರುಗಳು ಹರಿಗೆ ಕೆಲವು ಅಡಿಗೆ ಸಾಮಾಗ್ರಿಗಳನ್ನು ಕೊಟ್ಟು, "ಹರಿ ಇಂದು ನೀನೇ ಅಡಿಗೆಮಾಡಿ ಭಗವಂತನಿಗೆ ಅರ್ಪಿಸಿ ಪ್ರಸಾದವನ್ನು ಸ್ವೀಕರಿಸು," ಎಂದರು. ಆಗ ಹರಿ ಸಂತೋಷದಿಂದ ಅಡಿಗೆಯನ್ನು ತಯಾರಿಸಲು ಹೋದನು. ಅಡಿಗೆಮನೆಯಲ್ಲಿ ತನಗೊಂದು ಭಾಗ ಮತ್ತು ಭಗವಾನ್ ಶ್ರೀರಾಮನಿಗೆ ಒಂದು ಭಾಗ ಎಂದು ಅಡಿಗೆ ತಯಾರಿಸಿದನು. ಗುರುಗಳ ಆಜ್ಞೆಯಂತೆ ಹರಿ ಪ್ರಸಾದವನ್ನು ಸಮರ್ಪಿಸಲು ಶ್ರೀರಾಮನನ್ನು ಕರೆದನು, "ಹೇ ಶ್ರೀರಾಮ, ಬೇಗನೆ ಬಾ, ನಾನು ತಯಾರಿಸಿರುವ ಈ ಪ್ರಸಾದವನ್ನು ಸ್ವೀಕರಿಸು", ಎಂದು ಬಹಳ ಪರಿ–ಪರಿಯಾಗಿ ಬೇಡಿಕೊಂಡನು. ಆಗ ಭಗವಾನ್ ಶ್ರೀರಾಮಚಂದ್ರನು ಅವನ ಮುಗ್ಧತೆಯನ್ನು ಮೆಚ್ಚಿ ಇವನನ್ನು ಉದ್ಧಾರಮಾಡಲು ಶ್ರೀಸೀತಾಸಮೇತನಾಗಿ ಶ್ರೀರಾಮ ಅವನ ಮುಂದೆ ಪ್ರತ್ಯಕ್ಷನಾದನು. ಆಗ ಹರಿ ಶ್ರೀಸೀತಾರಾಮರನ್ನು ಕಂಡು ಬಹಳ ಸಂತೋಷಿಸಿದನು. ಆದರೆ ಅವನು ಶ್ರೀರಾಮನೊಬ್ಬ ಬರುವನು ಎಂದು ಭಾವಿಸಿ ಊಟದ ಒಂದು ಭಾಗ ರಾಮನಿಗೆ ಮತ್ತೊಂದು ಭಾಗ ತನೆಗೆ ಎಂದು ತಯಾರಿಸಿದ್ದನು, ಈಗ ಸೀತಾಮಾತೆಯನ್ನು ಕಂಡು ತನ್ನ ಭಾಗವನ್ನು ಸೀತಾಮಾತೆಗೆ ಅರ್ಪಿಸಿದ. ಅವನು ಊಟಮಾಡಲು ಏನೂ ಉಳಿದಿರಲಿಲ್ಲ. ಹೀಗಾಗಿ ಅವನು ಅಂದು ಉಪವಾಸವಿರಬೇಕಾಯಿತು.

ಮತ್ತೊಮ್ಮೆ ಏಕಾದಶಿ ಬಂದಿತು, ಆಗ ಹರಿ ಗುರುಗಳ ಬಳಿಗೆ ಬಂದು ಹಿಂದಿನ ಏಕಾದಶಿಗೆ ಪಡೆದಂತಹ ಅಡಿಗೆ ಸಾಮಾಗ್ರಿಗಳಿಗಿಂತಲೂ ಹೆಚ್ಚಿ ಸಾಮಾಗ್ರಿಗಳನ್ನು ಪಡೆದ. ಈಗ ಅಡಿಗೆಯನ್ನು ಶ್ರೀರಾಮನಿಗೆ ಒಂದು ಭಾಗ, ಶ್ರೀಸೀತಾಮಾತೆಗೆ ಒಂದು ಭಾಗ ಮತ್ತು ತನಗಾಗಿ ಒಂದು ಭಾಗವನ್ನು ತಯಾರಿಸಿದನು. ಪ್ರಸಾದವನ್ನು ಸಮರ್ಪಿಸಲು ಶ್ರೀಸೀತಾರಾಮರನ್ನು ಕರೆದ. ಆಗ ಶ್ರೀರಾಮಚಂದ್ರನು ಸೀತಾಮಾತೆಯೊಂದಿಗೆ ಶ್ರೀಲಕ್ಷ್ಮಣನನ್ನೂ ಸಹ ಕರೆತಂದ. ಆಗ ಹರಿ ತಾನು ತಯಾರಿಸಿದ ಮೂರು ಭಾಗದ ಪ್ರಸಾದವನ್ನು ಶ್ರೀ ಸೀತಾರಾಮ ಲಕ್ಷ್ಮಣರಿಗೆ ಅರ್ಪಿಸಿದ. ತನಗೆ ಏನೂ ಉಳಿಯಲಿಲ್ಲ. ಹೀಗಾಗಿ ತಾನು ಉಪವಾಸವಿರಬೇಕಾಯಿತು.

ಮತ್ತೊಮ್ಮೆ ಏಕಾದಶಿ ದಿನ ಬಂದಾಗ ತನ್ನ ಗುರುಗಳಲ್ಲಿ ಮತ್ತಷ್ಟು ಹೆಚ್ಚು ಅಡಿಗೆ

ಸಾಮಾಗ್ರಿಗಳನ್ನು ಪಡೆದು ಶ್ರೀ ಸೀತಾರಾಮ ಲಕ್ಷ್ಮಣ ಮತ್ತು ತನಗಾಗಿ ಅಡಿಗೆಯನ್ನು ನಾಲ್ಕು ಭಾಗಗಳಾಗಿ ಮಾಡಿದನು. ಈ ಬಾರಿ ಶ್ರೀ ರಾಮನು ಸೀತಾ ಲಕ್ಷ್ಮಣರೊಂದಿಗೆ ಹನುಮಂತದೇವರನ್ನೂ ಸಹ ಕರೆತಂದನು. ಹರಿ ಏನೂ ಮಾಡಲಾಗದೆ ತನ್ನ ಊಟದ ಭಾಗವನ್ನು ಶ್ರೀಹನುಮಂತದೇವರಿಗೆ ಅರ್ಪಿಸಿ ಅವರನ್ನು ತೃಪ್ತಿಗೊಳಿಸಲು ಪ್ರಯತ್ನಿಸಿದನು ಮತ್ತು ತಾನು ಉಪವಾಸ ಉಳಿದನು. ಆದರೆ ಹರಿ ಶ್ರೀರಾಮನಲ್ಲಿ, "ಹೇ ಪ್ರಭು ಶ್ರೀರಾಮ, ಮುಂದೆ ಬರುವ ಏಕಾದಶಿಯಂದು ನಿಮ್ಮೊಂದಿಗೆ ಎಷ್ಟು ಜನ ಬರುವರು ಎಂದು ತಿಳಿಸಿದರೆ ಅಷ್ಟೂ ಜನರಿಗೆ ಅಡಿಗೆಯನ್ನು ಮಾಡಿಟ್ಟಿರುವೆನು, ದಯವಿಟ್ಟು ತಿಳಿಸಿರಿ," ಎಂದನು. ಆದರೆ ಶ್ರೀರಾಮಚಂದ್ರನು ನಸುನಗುತ್ತ ತನ್ನ ಪರಿವಾರದೊಂದಿಗೆ ಅದೃಶ್ಯನಾದನು.

ಮತ್ತೆ ಏಕಾದಶಿಯಂದು ಹರಿ ತನ್ನ ಗುರುಗಳ ಬಳಿಗೆ ಬಂದು ಹೆಚ್ಚು ಅಡಿಗೆಯ ಸಾಮಾಗ್ರಿಗಳನ್ನು ಬೇಡಿ ಪಡೆದ. "ಈ ಹರಿ ಇಷ್ಟು ಸಾಮಾಗ್ರಿಗಳನ್ನು ತೆಗೆದುಕೊಂಡು ಏನುಮಾಡುತ್ತಿದ್ದಾನೆ?" ಎಂದು ಅವನ ಗುರುಗಳಿಗೆ ಸಂದೇಹವುಂಟಾಯಿತು, ಹೀಗಾಗಿ ಗುರುಗಳು ಅವನನ್ನು ಪರೀಕ್ಷಿಸಲು ಅವನನ್ನು ಹಿಂಬಾಲಿಸಿದರು. ಈ ಬಾರಿ ಶ್ರೀರಾಮನೊಂದಿಗೆ ಎಷ್ಟು ಜನ ಬರುವರು ಎಂದು ತಿಳಿಯದೆ ಎಲ್ಲ ಸಾಮಾಗ್ರಿಗಳನ್ನು ಅಡಿಗೆಮನೆಗೆ ತಂದಿಟ್ಟು ಸುಮ್ಮನೆ ಕುಳಿತುಬಿಟ್ಟನು. ಆಗ ಶ್ರೀರಾಮಚಂದ್ರನು ಸೀತಾ, ಲಕ್ಷ್ಮಣ, ಹನುಮಂತ, ಜಾಂಬವಂತ, ಸುಗ್ರೀವ, ಅಂಗದ, ನಲ, ನೀಲ ಮತ್ತೆಲ್ಲ ತನ್ನ ಎಲ್ಲ ಸಹಪರಿವಾರದೊಂದಿಗೆ ಆಗಮಿದನು. ಅವರನ್ನು ಕಂಡು ಹರಿ ಆನಂದದಿಂದ ಮತ್ತು ಆಶ್ಚರ್ಯಚಕಿತನಾಗಿ ಅವರನ್ನೇ ನೋಡುತ್ತ ಸುಮ್ಮನೆ ನಿಂತುಬಿಟ್ಟಿದ್ದ. ಆಗ ಶ್ರೀರಾಮನ ಪರಿವಾರದವರು ತಾವೇ ಅಡಿಗೆಯನ್ನು ತಯಾರಿಸಿದರು ಮತ್ತು ಪ್ರಸಾದವನ್ನು ಶ್ರೀರಾಮನಿಗೆ ಅರ್ಪಿಸಿ ತಾವೂ ಸಹ ಸ್ವೀಕರಿಸಿದರು. ಹೀಗೆ ಇದೆಲ್ಲವೂ ನಡೆಯುತ್ತಿರುವಾಗ ಅಲ್ಲಿ ಹರಿ ಗುರುಗಳು ಬಂದರು. ಆದರೆ ಅವರಿಗೆ ಹರಿ ಒಬ್ಬನನ್ನು ಬಿಟ್ಟು ಬೇರಾರೂ ಕಾಣುತ್ತಿರಲಿಲ್ಲ. ಆಗ ಹರಿಯನ್ನು ಕುರಿತು, "ಹೇ ಹರಿ! ಏನು ಮಾಡುತ್ತಿರುವೆ. ನಿನಗೆ ನೀಡಿದ ಅಷ್ಟೂ ಅಡಿಗೆ ಸಾಮಾಗ್ರಿಗಳು ಏನಾದವು?" ಎಂದು ಪ್ರಶ್ನಿಸಿದರು. ಆಗ ಹರಿ ಶ್ರೀರಾಮನಲ್ಲಿ, "ಹೇ ಪ್ರಭು ಶ್ರೀರಾಮ! ನನ್ನ ಗುರುಗಳು ನನ್ನಮೇಲೆ ಸಂದೇಹಪಡುವಂತಾಗಿದೆ. ದಯವಿಟ್ಟು ಅವರ ಕಣ್ಣಿಗೆ ಕಾಣಿಸಿಕೋ ಸ್ವಾಮೀ ನಡೆದ ಘಟನೆಗಳನ್ನು ಅವರಿಗೆ ತಿಳಿಸು." ಎಂದು ಪ್ರಾರ್ಥಿಸಿದನು. ಆಗ ಅವರೆಲ್ಲರು ಹರಿಯ ಗುರುಗಳಿಗೆ ಕಾಣಿಸಿಕೊಂಡರು ಮತ್ತು ನಡೆದ ಘಟನೆಗಳೆಲ್ಲ ತಿಳಿಯಿತು. ಶ್ರೀರಾಮ ಹರಿಯಲ್ಲಿರುವ ಗುರುಭಕ್ತಿ ಮತ್ತು ನಿಷ್ಠೆಯನ್ನು ಗಮನಿಸಿ ಅವನ ಹೃದಯದಲ್ಲಿ ಭಕ್ತಿಯನ್ನು ಹುಟ್ಟಿಸಿದ. ಆಗ ತನ್ನ ಗುರುಗಳು, "ಹೇ ಹರಿ, ಶ್ರೀರಾಮನು ನಿನ್ನಮೇಲೆ ಕೃಪೆಯಿಂದ ನಿನ್ನನ್ನು ಉದ್ಧಾರಮಾಡಲೆಂದು ನಿನಗೆ ಇಚ್ಛೆ ಇಲ್ಲದಿದ್ದರೂ ಈ ಏಕಾದಶಿ ವ್ರತವನ್ನು ಮಾಡಿಸುತ್ತಿದ್ದಾನೆ. ಇದನ್ನು ಅರ್ಥ ಮಾಡಿಕೋ, ಏಕಾದಶಿಯ ಮಹತ್ವವನ್ನು ತಿಳಿದಿಕೋ." ಎಂದು ಭೋದಿಸಿದರು. ಆಗ ಹರಿ ಆಲೋಚಿಸಿದ, "ಈ ಭೋಜನದ ಮೇಲಿನ ಆಸೆಯಿಂದಲೇ ಏಕಾದಶಿಯನ್ನು ತೊರೆಯುವಂತಾಗಿದೆ, ಆದ್ದರಿಂದ ಈ ಭೋಜನದ ಮೇಲಿನ ಅತಿಯಾದ ಆಸೆಯನ್ನು ಬಿಡಬೇಕು, ಮತ್ತು ತಪ್ಪದೆ ಏಕಾದಶಿ ವ್ರತವನ್ನು ಆಚರಿಸಿ ಗುರುಗಳ ಮತ್ತು ಶ್ರೀರಾಮ ದೇವರ ಕೃಪೆಗೆ ಪಾತ್ರನಾಗಬೇಕು," ಎಂದು ನಿರ್ಧರಿಸಿದ.

ಏಕಾದಶಿಯ ಮಹತ್ವವನ್ನು ಕುರಿತು ಶಾಸ್ತ್ರಗಳ ಪ್ರಮಾಣ

೧. ಮನಸ್ಸಿನಲ್ಲಿ ಭೌತಿಕ ಇಚ್ಛೆಗಳನ್ನು ಇಟ್ಟಂತಹ ಜನರು ಮೋಕ್ಷಪ್ರಾಪ್ತಿಗಾಗಿ ಅಥವಾ ತಮ್ಮ ಉದ್ದೇಶ್ಯ-ಪೂರ್ತಿಗಾಗಿ ಪ್ರತ್ಯೇಕ ಏಕಾದಶಿಯಂದು ಉಪವಾಸವನ್ನು ಆಚರಿಸಬೇಕು. ಆದರೆ ಭಗವಂತನನ್ನು ಪ್ರಸನ್ನಗೊಳಿಸುವುದೇ ಏಕಾದಶಿಯ ವಾಸ್ತವ ಉದ್ದೇಶ.

೨. ಶುಕ್ಲ ಪಕ್ಷವಾಗಲಿ ಅಥವಾ ಕೃಷ್ಣ ಪಕ್ಷವಾಗಲಿ, ಭರಣಿ ನಕ್ಷತ್ರವಿರಲಿ ಅಥವಾ ಅನ್ಯ ಯಾವುದೇ ಕಾರಣವಿರಲಿ, ಭಗವಾನ್ ಶ್ರೀ ಹರಿಯ ಪ್ರೇಮ ಮತ್ತು ಅವನ ಧಾಮದ ಪ್ರಾಪ್ತಿಗಾಗಿ ಪ್ರತಿಯೊಬ್ಬ ವ್ಯಕ್ತಿ ಏಕಾದಶಿಯ ದಿನದಂದು ಉಪವಾಸವಿರುವುದು ಆವಶ್ಯಕ.

೩. ಕಾಶಿ, ಗಯಾ, ಗಂಗಾ, ನರ್ಮದಾ, ಗೋದಾವರಿ ಮತ್ತು ಕುರುಕ್ಷೇತ್ರ- ಇವುಗಳಲ್ಲಿ ಯಾವುದೇ ತೀರ್ಥವು ಸಹ ಏಕಾದಶಿಗೆ ಸರಿಸಾಟಿಯಾಗಲಾರವು.

೪. ಸಾವಿರ ಅಶ್ವಮೇಧಯಾಗಗಳಾಗಲಿ ಮತ್ತು ನೂರಾರು ರಾಜಸೂಯ ಯಾಗಗಳಾಗಲಿ ಏಕಾದಶಿಯ ಹದಿನಾರನೆಯ ಒಂದಂಶಕ್ಕೂ ಸಹ ಸಾಟಿ ಎನ್ನಿಸವು.

೫. ಈ ಪೃಥ್ವಿಯಲ್ಲಿ ಭಗವಾನ್ ಪದ್ಮನಾಭನ ದಿನಕ್ಕೆ ಸಮಾನವಾಗಿ (ಅರ್ಥಾತ್ ಏಕಾದಶಿಗೆ ಸಮಾನವಾಗಿ) ಶುದ್ಧಿ ಪ್ರದಾನ ಮಾಡುವಂತಹ ಮತ್ತು ಪಾಪ ದೂರ ಮಾಡುವಂತಹ ಸಮರ್ಥವಾದಂತಹ ಅನ್ಯ ಯಾವುದೇ ದಿನವೂ ಸಹ ಇಲ್ಲ.

೬. ಹೇ ಪ್ರಭು! ಹನ್ನೆರಡು ಇಂದ್ರಿಯಗಳ ಮೂಲಕ (ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ತ್ವಚೆ ಈ ಐದು ಜ್ಞಾನೇಂದ್ರಿಯಗಳು; ಬಾಯಿ, ಕೈಗಳು, ಕಾಲುಗಳು, ಗುದದ್ವಾರ ಮತ್ತು ಜನನೇಂದ್ರಿಯ ಈ ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು- ಇವುಗಳ ಮೂಲಕ) ಮಾಡಲ್ಪಟ್ಟ ಎಲ್ಲ ಪಾಪ ಕರ್ಮಗಳು ಪ್ರತಿಯೊಂದು ಪಕ್ಷದ ಹನ್ನೊಂದನೆ ದಿನದಂದು (ಏಕಾದಶಿಯಂದು) ಉಪವಾಸ ಮಾಡುವುದರಿಂದ ನಷ್ಟವಾಗುತ್ತದೆ.

೭. ಹೇ ರಾಜ! ತಮ್ಮ ಪಾಪಗಳನ್ನು ಕಳೆದುಕೊಳ್ಳಲು ಏಕಾದಶಿಗೆ ಸಮಾನವಾದ ಬೇರೆ ಪ್ರಭಾವಿತ ಉಪಾಯ ಇನ್ನೊಂದಿಲ್ಲ. ಏನಾದರು ಒಬ್ಬ ವ್ಯಕ್ತಿ ಕೇವಲ ತೋರಿಸಿಕೊಳ್ಳಲು ಏಕಾದಶಿಯನ್ನು ಮಾಡಿದರೂ ಸಹ ಆ ವ್ಯಕ್ತಿಯನ್ನು ಮೃತ್ಯುವಿನ ನಂತರ ಯಮನ ದರ್ಶನವಾಗುವುದಿಲ್ಲ.

೮. ಭಗವಾನ್ ಶ್ರೀಕೃಷ್ಣನ ಅವತಾರರಾದ ಮಹರ್ಷಿ ವೇದ ವ್ಯಾಸರು ಹೇಳುತ್ತಾರೆ- "ನನ್ನ ದಿನ (ಏಕಾದಶಿಯಂದು) ಯಾವುದೇ ವ್ಯಕ್ತಿ ನನಗೆ ಸ್ವಲ್ಪವಾದರೂ ಸಹ

ಅನ್ನವನ್ನು ಅರ್ಪಿಸಿದರೆ, ಆ ವ್ಯಕ್ತಿ ನರಕಕ್ಕೆ ಹೋಗುವನು. ಆಗಿರುವಾಗ ಒಬ್ಬ ವ್ಯಕ್ತಿ ಸ್ವಯಂ ಅನ್ನವನ್ನು ತಿಂದರೆ ಅಂತಹ ವ್ಯಕ್ತಿಯ ಗತಿ ಏನಾಗುವುದು ಎಂಬುದನ್ನು ಹೇಳುವ ಆವಶ್ಯಕತೆ ಇಲ್ಲ."

೯. ಸ್ವಮಾತೃಹತ್ಯ, ಗೋಮಾಂಸ ಭಕ್ಷಣ, ಬ್ರಾಹ್ಮಣನ ಹತ್ಯ ಮಾಡುವುದು ಮತ್ತು ಸುರಾಪಾನ ಮಾಡುವುದು- ಈ ಎಲ್ಲ ಪಾಪಗಳು ಏಕಾದಶಿಯಂದು ಅನ್ನವನ್ನು ತಿನ್ನುವ ಪಾಪದ ಮುಂದೆ ಕ್ಷುದ್ರವಾದದ್ದು.

೧೦. ಯಾವ ಮನುಷ್ಯ ಏಕಾದಶಿಯ ಪವಿತ್ರ ದಿನದಂದು ಅನ್ನವನ್ನು ತಿನ್ನುವನೋ ಅವನು ಎಲ್ಲ ಮನುಷ್ಯರಲ್ಲಿ ಹೀನನು. ಏನಾದರು ಇಂತಹ ಮನುಷ್ಯರ ಅಶುಭ ಮುಖವನ್ನು ನೋಡಿದರೆ, ಅವರು ತಕ್ಷಣವೇ ಸೂರ್ಯನ ಕಡೆ ನೋಡಿ ತಮ್ಮನ್ನು ತಾವು ಪವಿತ್ರಗೊಳಿಸಬೇಕು.

೧೧. ಏಕಾದಶಿಯ ದಿನ (ಶ್ರೀಹರಿಯ ದಿನ) ಈ ಪೃಥ್ವಿಯ ಮೇಲೆ ಎಲ್ಲ ದೊಡ್ಡ-ದೊಡ್ಡ ಪಾಪಗಳು ಅಂದರೆ ಬ್ರಹ್ಮ-ಹತ್ಯೆ (ಬ್ರಾಹ್ಮಣನನ್ನು ಕೊಲ್ಲುವ ಪಾಪ) ಮುಂತಾದ ಪಾಪಗಳು ಅನ್ನವನ್ನು ಆಶ್ರಯಿಸುತ್ತಿರುತ್ತದೆ ಮತ್ತು ಅಲ್ಲಿ ನೆಲಸಿರುತ್ತದೆ.

೧೨. ತನ್ನ ತಂದೆ, ಪುತ್ರ, ಪತ್ನಿ ಅಥವಾ ಮಿತ್ರ ಇವರು ಭಗವಾನ್ ಪದ್ಮನಾಭನ ದಿನದಂದು ಏನಾದರು ಅನ್ನವನ್ನು ತಿಂದರೂ ಸಹ ಅವನನ್ನು ಪಾಪಿ ಎಂದೇ ಪರಿಗಣಿಸಲಾಗುವುದು.

೧೩. ದಶಮಿಯ ದಿನದಂದು ಒಂದು ಬಾರಿ ಮಾತ್ರ ಊಟವನ್ನು ಮಾಡಬೇಕು. ಏಕಾದಶಿಯ ದಿನ ಪೂರ್ಣ ಉಪವಾಸ ಮಾಡಬೇಕು. ಏಕಾದಶಿಯ ದಿನ ಶ್ರಾದ್ಧ, ತಿಲೋದಕ, ಪಿಂಡ-ಪ್ರದಾನ, ಜಲ-ತರ್ಪಣ ಇತ್ಯಾದಿ ಕಾರ್ಯಗಳನ್ನು ಮಾಡಬಾರದು.

೧೪. ಯಾವುದೇ ಮಹಿಳೆಯೂ ಸಹ ಮಾಸಿಕ ಧರ್ಮದ ಸಮಯದಲ್ಲೂ ಸಹ (ರಜಸ್ವಲ ಅವಸ್ಥೆಯಲ್ಲೂ ಸಹ) ಏಕಾದಶಿಯಂದು ಅನ್ನವನ್ನು ಸ್ವೀಕರಿಸಬಾರದು.

೧೫. ವಿಧವಾ ಸ್ತ್ರೀ ಏನಾದರೂ ಏಕಾದಶಿಯ ದಿನದಂದು ಅನ್ನ ಊಟ ಮಾಡಿದರೆ ಆಗ ಎಲ್ಲ ಪುಣ್ಯಗಳಿಂದ ದೂರವಾಗುತ್ತಾಳೆ, ಪ್ರತಿ ದಿನ ಒಂದು ಗರ್ಭಪಾತ ಮಾಡುವಂತಹ ಪಾಪವು ಅವಳಿಗೆ ತಗಲುತ್ತದೆ.

ದ್ವಾದಶಿಯಂದು ತುಳಸಿ–ಎಲೆಗಳನ್ನು ಕೀಳುವುದು ವರ್ಜನೀಯ

ನ ಛಿಂದ್ಯಾತ್ ತುಳಸೀಂ ವಿಪ್ರ ದ್ವಾದಶ್ಯಾಂ ವೈಷ್ಣವಃ ಕ್ವಚಿತ್ ।

(ಹರಿಭಕ್ತಿವಿಲಾಸ್ ೭/೩೫೪, ವಿಷ್ಣು–ಧರ್ಮೋತ್ತರ ಪುರಾಣ)

ಹೇ ಬ್ರಾಹ್ಮಣರೇ, ಒಬ್ಬ ವೈಷ್ಣವನು ದ್ವಾದಶಿಯ ದಿನದಂದು ಎಂದಿಗೂ ಸಹ ತುಳಸಿ ಎಲೆಗಳನ್ನು ಕೀಳುವುದಿಲ್ಲ.

ಭಾನುವಾರಂ ವಿನಾ ದುರ್ವಾಂ ತುಳಸೀಂ ದ್ವಾದಶೀಂ ವಿನಾ ।
ಜೀವಿತಸ್ಯ ಅವಿನಾಶಾಯ ನ ವಿಚಿನ್ವಿತ ಧರ್ಮವಿತ್ ॥

(ಹರಿಭಕ್ತಿವಿಲಾಸ, ೭/೩೫೫, ಗರುಡ–ಪುರಾಣ)

ಶಾಸ್ತ್ರಗಳನ್ನು ಬಹಳ ಚೆನ್ನಾಗಿ ಅಧ್ಯಾಯನ ಮಾಡಿದಂತಹ ವ್ಯಕ್ತಿ ಏನಾದರೂ ತನ್ನ ಆಯಸ್ಸನ್ನು ಕಡಿಮೆಯಾಗಬಾರದು ಎಂದು ಬಯಸಿದರೆ ಆಗ ಅವನಿಗೆ ರವಿವಾರದ ದಿನದಂದು ಗರಿಕೆ ಹುಲ್ಲನ್ನು ಮತ್ತು ದ್ವಾದಶಿಯ ದಿನ ತುಳಸಿಯ ಎಲೆಗಳನ್ನು ಕೀಳಬಾರದು.

ದ್ವಾದಶ್ಯಾಂ ತಳಸೀ ಪತ್ರಂ ಧಾತ್ರೀ ಪತ್ರಶ್ಚ ಕಾರ್ತಿಕೇ ।
ಲುನತಿ ಸ ನರೋ ಗಚ್ಛೇತ್ ನಿರಯಂ ಅತಿ ಗರ್ಹಿತಮ್ ।

(ಹರಿಭಕ್ತಿವಿಲಾಸ ೭/೩೫೬, ಪದ್ಮ–ಪುರಾಣ, ಕೃಷ್ಣ ಮತ್ತು ಸತ್ಯಭಾಮರ ನಡುವಿನ ಸಂವಾದ)

ಏನಾದರೂ ಒಬ್ಬ ಮನುಷ್ಯ ದ್ವಾದಶಿಯ ದಿನದಂದು ತುಳಸಿ–ಎಲೆಗಳನ್ನು ಕಿತ್ತರೆ ಅಥವಾ ಕಾರ್ತಿಕ ಮಾಸದಲ್ಲಿ ಮಾವಿನ ವೃಕ್ಷದ ಎಲೆಗಳನ್ನು ಕಿತ್ತರೆ ಆಗ ಅವನಿಗೆ ಅತ್ಯಂತ ಘೋರ ನರಕ–ಲೋಕ ಪ್ರಾಪ್ತವಾಗಿ ದುಃಖವನ್ನು ಅನುಭವಿಸಬೇಕಾಗುತ್ತದೆ.

ಏಕಾದಶಿಯ ದಿನದಂದು ಕೇವಲ ಧಾನ್ಯಗಳು ನಿಷಿದ್ಧವಾಗಿದೆ

ಗರ್ವಿತ ಮತ್ತು ಆಭಾಸೀ (ಛದ್ಮ) ವೈಷ್ಣವರು ಸಜ್ಜೆ, ರಾಗಿ, ರವೆ, ಕಡ್ಲೆ ಬೇಳೆ ಮುಂತಾದವುಗಳನ್ನು ಧಾನ್ಯಗಳು ಎಂದು ಭಾವಿಸದೆ ಅವುಗಳನ್ನು ಏಕಾದಶಿಯ ದಿನದಂದು ಸೇವನೆ ಮಾಡುತ್ತಾರೆ. ಧಾನ್ಯ ಎಂಬುದರ ಅರ್ಥವೇನೆಂದರೆ 'ಅತ್ತುಂ ಯೋಗ್ಯಂ ಅನ್ನಮ್'. ಈ ಪರಿಭಾಷೆಗೆ ಒಳಗೊಂಡ ಎಲ್ಲ ಪ್ರಕಾರದ ಧಾನ್ಯಗಳ ಸಮಾವೇಷ ನೀಡಲಾಗಿದೆ. ನಿಜ ಹೇಳಬೇಕಾದರೆ ಭಗವಾನ್ ಹರಿದಿನ (ಅರ್ಥಾತ್ ಏಕಾದಶಿಯ ದಿನ) ಧಾನ್ಯಗಳಿಂದ ಮಾಡಿರುವಂತಹ ಯಾವುದೇ ವ್ಯಂಜನವನ್ನು ಸ್ವೀಕರಿಸಲು ಯೋಗ್ಯವಲ್ಲ. ಹಣ್ಣು, ಮೂಲಿಕೆ, ನೀರು ಮತ್ತು ಹಾಲು ಇವುಗಳ ರೂಪದ ಅನುಕಲ್ಪವನ್ನು ಸ್ವೀಕರಿಸುವುದರಿಂದ ಉಪವಾಸವು ಭಂಗವಾಗುವುದಿಲ್ಲ. ಒಬ್ಬರು ಏನಾದರೂ ಪೂರ್ತಿ ಹಸಿವಿನಿಂದ ಇರಲು ಅಸಮರ್ಥರಾಗಿದ್ದರೆ ಆಗ ಅನುಕಲ್ಪವನ್ನು

ಸ್ವೀಕರಿಸಲು ವ್ಯವಸ್ಥೆಯುಂಟು. ಶಂಕರ ಮತ್ತು ಪಾರ್ವತಿ ದೇವಿಯ ನಡುವೆ ನಡೆದಂತಹ ಸಂವಾದ ಪದ್ಮ–ಪುರಾಣದಲ್ಲಿ ಈ ಪ್ರಕಾರವಾಗಿದೆ–

ಅನ್ನನ್ತು ಧಾನ್ಯ–ಸಂಭೂತಂ ಗಿರಿಜೇ ಯದಿ ಜಾಯತೆ ।
ಧಾನ್ಯಾನಿ ವಿವಿಧಾನೀಹ ಜಗತ್ಯಾಂ ಶ್ರುಣು ಯತ್ನತಃ ॥

ಶ್ಯಾಮ – ಮಾಸ – ಮಸುರಾಶ್ಚ ಧಾನ್ಯ – ದೋದ್ರವ – ಸರ್ಷಣಾಃ ।
ಯವ – ಗೋಧೂಮ – ಮುಗ್ದಾಶ್ಚ ತಿಲ–ಕಂಗು–ಕೋಲಥಕಾಃ ॥

ಗವೇಧುಕಾಶ್ಚ ನಿವಾರ ಆತಕಶ್ಚ ಕಲಾಯಕಾಃ ।
ಮಾಣ್ಡುಕೋ ವಜ್ರಕೋ ರಂಕ ಕೀಚಕೋ ಬಡಕಸ್ತಯಾ ।
ತಿಲಕಶ್ಚಣಕಾದ್ಯಶ್ಚ ಧಾನ್ಯಾನಿ ಕಥಿತಾನೀಹ ॥

"ಹೇ ಗಿರಿಜೇ! ಧಾನ್ಯಗಳಿಂದ ಉತ್ಪನ್ನವಾದ ಪದಾರ್ಥಗಳನ್ನು 'ಅನ್ನ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಜಗತ್ತಿನಲ್ಲಿ ಅನೇಕ ಪ್ರಕಾರದ ಧಾನ್ಯಗಳುಂಟು. ಅವುಗಳ ಸೂಚನೆಯನ್ನು ನಿನಗೆ ತಿಳಿಸುತ್ತೇನೆ, ಧ್ಯಾನಪೂರ್ವಕವಾಗಿ ಆಲಿಸು– ರಾಗಿ, ಸಜ್ಜೆ, ಮಸೂರ ಬೇಳೆ, ಕಾಳುಗಳು, ಕೋದ್ರವ (ಬಡ ಜನರು ತಿನ್ನುವಂತಹ ಒಂದು ಪ್ರಕಾರದ ಧಾನ್ಯ), ಸಾಸಿವೆ, ಎಳ್ಳು, ಹುರಳಿ ಕಾಳು, ಗವೇಧುಕ (ತೃಣ–ಧಾನ್ಯ), ದಣಿವರಿಯದ, ಕಡ್ಲೆ ಬೇಳೆ, ಮಂಡುಕ, ಜೋಳ, ರಲ್ಕ, ಕೀಚಕ (ಕೆಟ್ಟ–ಧಾನ್ಯ), ಎಳ್ಳು (ಹೋಮ ಧಾನ್ಯ), ಕಾಬುಲ್ಕಡ್ಲೆ ಇತ್ಯಾದಿ. ಇವುಗಳ ಶಬ್ದದ ಮೂಲಕ ಗೋದಿ ಮತ್ತು ಜೋಳದಂತಹ ಪದಾರ್ಥಗಳೆಂದು ತಿಳಿಯಲಾಗುತ್ತದೆ. ಆದ್ದರಿಂದ ಕುಸಲಕ್ಕಿ, ಗೋದಿ ಹಿಟ್ಟು, ಕಡ್ಲೆ ಮುಂತಾದವುಗಳನ್ನು ಅನ್ನ ಎಂದೇ ಪರಿಗಣಿಸಲಾಗುವುದು ಆದ್ದರಿಂದ ಏಕಾದಶಿಯ ದಿನದಂದು ಸ್ವೀಕರಿಸಲು ಅಯೋಗ್ಯವಾದದ್ದು."

ದಿನತ್ರಯ ಸಂಕಲ್ಪ ಮಂತ್ರಗಳು

ದಶಮೀಸಂಕಲ್ಪ

ದಶಮೀದಿವಸೇ ಪ್ರಾಪ್ತೇ ವ್ರತಸ್ಥೋಽಹಂ ಜನಾರ್ದನ ।
ತ್ರಿದಿನಂ ದೇವ ದೇವೇಶ ನಿರ್ವಿಘ್ನಂ ಕುರು ಕೇಶವ ॥

–ಬ್ರಹ್ಮವೈವರ್ತಪುರಾಣ

ಜನಾರ್ದನ! ಈ ದಶಮೀದಿನದಂದು ಮೂರುದಿನಗಳ ವ್ರತಕ್ಕೆ ಅಣಿಯಾಗಿದ್ದೇನೆ. ಸ್ವಾಮಿನ್ ದೇವ ದೇವ! ಕೇಶವ! ಇದಕ್ಕೆ ಯಾವ ಅಡ್ಡಿಯೂ ಬಾರದಂತೆ ಅನುಗ್ರಹಿಸು.

ಏಕಾದಶೀ ಸಂಕಲ್ಪ

ಏಕಾದಶ್ಯಾಂ ನಿರಾಹಾರಃ ಸ್ಥಿತ್ವಾಽಹನಿ ಪರೇ ಹ್ಯಹಮ್ ।
ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭವಾಚ್ಯುತ ॥

– ಬೃಹನ್ನಾರದೀಯಪುರಾಣ ೨೧/೧೫

ಅಚ್ಯುತ! ಏಕಾದಶಿಯಂದು ನಾನು ನಿರಾಹಾರದಿಂದಿದ್ದು ದ್ವಾದಶೀದಿನ ಭೋಜನವನ್ನು ಮಾಡುತ್ತೇನೆ; ನೀನು ನನಗೆ ಆಸರೆಯಾಗು.

ದ್ವಾದಶೀಸಂಕಲ್ಪ

ಅಜ್ಞಾನತಿಮಿರಾಂಧಸ್ಯ ವ್ರತೇನಾನೇನ ಕೇಶವ ।
ಪ್ರಸೀದ ಸುಮುಖೋ ನಾಥ ಜ್ಞಾನದೃಷ್ಟಿಪ್ರದೋಭವ ॥

– ಬೃಹನ್ನಾರದೀಯಪುರಾಣ ೨೧/೨

ಸ್ವಾಮಿನ್! ಕೇಶವ! ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾಗಿರುವ ನನಗೆ ನೀನು ಈ ಏಕಾದಶೀವ್ರತದ ಆಚರಣೆಯಿಂದ ಪ್ರಸನ್ನನಾಗಿ ಜ್ಞಾನದೃಷ್ಟಿಯನ್ನು ಕರುಣಿಸು.

ಏಕಾದಶ್ಯುಪವಾಸೇನ ದ್ವಾದಶೀಪಾರಣೇನ ಚ ।
ಯದಾರ್ಜಿತಂ ಮಯಾ ಪುಣ್ಯಂ ತೇನ ಪ್ರೀಣಾತು ಕೇಶವಃ ॥

– ಬ್ರಹ್ಮವೈವರ್ತಪುರಾಣ

ಏಕಾದಶಿ ಉಪವಾಸ ಮತ್ತು ದ್ವಾದಶಿ ಪಾರಣ ಈ ಎರಡರಿಂದ ನಾನು ಗಳಿಸಿರುವ ಪುಣ್ಯದಿಂದ ಕೇಶವನು ಪ್ರೀತನಾಗಲಿ.

ಏಕಾದಶಿಯಂದು ಜಾಗರಣೆಯೂ ಸಹ ಅವಶ್ಯ ಕರ್ತವ್ಯ

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಪುಣ್ಯಂ ಕೋಟಿಗುಣಂ ಗೌರಿ ವಿಷ್ಣೋರ್ಜಾಗರಣೇ ಕೃತೇ ॥

–ಸ್ಕಂದಪುರಾಣ

ಸಾವಿರಾರು ಅಶ್ವಮೇಧ ಮತ್ತು ನೂರಾರು ವಾಜಪೇಯಗಳಿಗಿಂತ ಕೋಟಿ ಪಟ್ಟು ಹೆಚ್ಚಿನ ಪುಣ್ಯವು ಹರಿದಿನದಂದು ಜಾಗರಣೆ ಮಾಡುವುದರಿಂದ ದೊರೆಯುತ್ತದೆ.

ಏಕಾದಶೀ ದಿನದಂದು 'ಅನ್ನ' ನೈವೇದ್ಯವು ನಿಷಿದ್ಧ

ಹರಿಶ್ಚ ದೇವತಾಃ ಸರ್ವಾಃ ಪಿತರಶ್ಚ ಮಹರ್ಷಯಃ ।
ನಾಶ್ನಂತಿ ಗರ್ಹಿತಾನ್ನಂ ತು ಸಂಪ್ರಾಪ್ತೇ ಹರಿವಾಸದೇ ॥

–ವಿಷ್ಣುರಹಸ್ಯ

ಪರಮಾತ್ಮನಾದ ಶ್ರೀಹರಿ, ಲಕ್ಷ್ಮೀ, ಬ್ರಹ್ಮ ಮೊದಲಾದ ಇತರ ಎಲ್ಲಾ ದೇವತೆಗಳು, ಮಹರ್ಷಿಗಳು ಮತ್ತು ಪಿತೃಗಳು ಇವರೆಲ್ಲರೂ ಗರ್ಹಿತವೆಂಬ ಕಾರಣದಿಂದ ಅನ್ನವನ್ನು ಏಕಾದಶಿದಿನದಂದು ಸರ್ವಥಾ ಸ್ವೀಕರಿಸುವುದಿಲ್ಲ.

ಏಕಾದಶಿಯಂದು ಶ್ರಾದ್ಧ ಹೋಮಾದಿಗಳು ನಿಷಿದ್ಧ

ನ ಶ್ರಾದ್ಧಂ ತತ್ರ ಕುರ್ವೀತ ನ ಹೋಮಂ ನ ಚ ತರ್ಪಣಮ್ ।
ಯದಿ ಮೋಹಾತ್ ಪ್ರಕುರ್ವೀತ ವ್ರತಹಾನಿರ್ಭವೇದ್ಧ್ರುವಮ್ ॥

– ಸ್ಮೃತಿ(ಸ್ಮೃತಿಮುಕ್ತಾವಲಿ ಪು. ೯೮)

ಏಕಾದಶಿಯಂದು ಹೋಮಕಾರ್ಯಗಳನ್ನಾಗಲೀ, ಶ್ರಾದ್ಧವನ್ನಾಗಲೀ ದೇವತರ್ಪಣ, ಋಷಿತರ್ಪಣ ಮತ್ತು ಪಿತೃತರ್ಪಣವನ್ನಾಗಲೀ ಮಾಡಕೂಡದು. ಇವುಗಳನ್ನು ತಿಳಿಯದೇ ಮಾಡಿದರೂ ಕೂಡ ಏಕಾದಶೀವ್ರತವನ್ನು ಕೈಬಿಟ್ಟ ಮಹಾಪಾಪವು ತಪ್ಪಿದ್ದಲ್ಲ.

(ದ್ವಾದಶಿಯಂದು 'ಹರಿವಾಸರ'ವಿದ್ದಾಗ ಸಹ ಅದು ಕಳೆದ ಮೇಲೆಯೇ ಇವನ್ನೆಲ್ಲಾ ಆಚರಿಸಬೇಕು)

೨೦೧೬ನೇ ವರ್ಷದ ನೋಬಲ್ ಚಿಕಿತ್ಸಾ ಪ್ರಶಸ್ತಿ
ಆಟೋಫೈಗಿ Autophagy

ಜಾಪಾನಿನ ಯೋಶಿನೋರಿ ಒಹಸುಮಿ ಎಂಬವರು 'ಆಟೋಫೈಗಿ'ಗೆ ಸಂಬಂಧಪಟ್ಟ ಅವರ ಸಂಶೋಧನೆಗಾಗಿ ೨೦೧೬ನೇ ವರ್ಷದ ನೋಬಲ್ ಚಿಕಿತ್ಸಾ ಪುರಸ್ಕಾರವನ್ನು ಪಡೆದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಜೀವಕೋಶಗಳು ಸ್ವಯಂ ತಮ್ಮನ್ನು ತಾವೇ ತಿನ್ನುತ್ತವೆ. ಮತ್ತು ಅವುಗಳನ್ನು ಅಡ್ಡಿಪಡಿಸಿದರೆ ಪಾರ್ಕಿಂ ಹಾಗೂ ಮಧುಮೇಹದಂತಹ ರೋಗಗಳು ಉಂಟಾಗುತ್ತದೆ. ನೋಬಲ್ ಜ್ಯೂರಿರವರು ಹೇಳುತ್ತಾರೆ, 'ಆಟೋಫೈಗಿ' ಬದಲಾವಣೆಯಾಗುವುದರಿಂದ ರೋಗಗಳುಂಟಾಗಬಹುದು ಮತ್ತು ಆಟೋಫೈಗಿಯ ಪ್ರಕ್ರಿಯೆಯು ಕ್ಯನ್ಸರ್ ಮತ್ತು ಮೆದುಳಿಗೆ ಸಂಬಂಧಪಟ್ಟ ರೋಗಗಳೂ ಹಾಗೂ ಮತ್ತಿತರ ಸ್ಥಿತಿಗಳಿಗೆ ಸಂಬಂಧಪಟ್ಟಿದೆ.

ಆಟೋಫೈಗಿ ಎಂಬುದು ನಮ್ಮ ಶರೀರದಲ್ಲಿ ಆಗುವಂತಹ ಒಂದು ಪ್ರಕ್ರಿಯೆ ಅದು ನಮ್ಮ ಶರೀರದಲ್ಲಿ ಸ್ವಯಂ ತಮ್ಮನ್ನು ತಾವು ತಿನ್ನುತ್ತವ. ಅಂದರೆ ನಮ್ಮ ಶರೀರದಲ್ಲಿ ಎಷ್ಟೋ ಬೇಡದಿದ್ದ ಅಧಿಕ ಜೀವಕೋಶಗಳನ್ನು ಮತ್ತು ಶೇಕರಣೆಯಾದಂತಹ ಕೊಬ್ಬನ್ನು ಹೊಲಸಿನ ರೂಪದಲ್ಲಿ ಹೊರಹಾಕ್ಕುತ್ತದೆ.

ಈ ಪ್ರಕ್ರಿಯೆಯು ಸರಿಯಾಗಿ ನಮ್ಮ ಶರೀರದಲ್ಲಿ ನಡೆಯುತ್ತಿದ್ದರೇ ಆಗ ನಮ್ಮ ಶರೀರ ಆರೋಗ್ಯಕರವಾಗಿರುವುದು. ಆದರೆ ಈ ಪ್ರಕ್ರಿಯೆಯನ್ನು ಸರಿಯಾಗಿ ನಡೆಸಲು ನಾವು ಸರಿಯಾದ ಸಮಯಕ್ಕೆತಕ್ಕಹಾಗೆ ಉಪವಾಸವನ್ನು ಮಾಡಲೇಬೇಕು.

ಏನಾದರೂ ನೀವು ಸಮಯಕ್ಕೆತಕ್ಕಹಾಗೆ ಏಕಾದಶಿಯಂತಹ ಉಪವಾಸವನ್ನು ಮಾಡದಿದರೆ ಈ ಬೇಡವಾದ ಅಧಿಕ ಜೀವಕೋಶಗಳು ಮತ್ತು ಕೊಬ್ಬು ಹೊಟ್ಟೆಯಲ್ಲಿ ಸಂಗ್ರಹಿತವಾಗುತ್ತದೆ ಮತ್ತು ನಮ್ಮ ಶರೀರವನ್ನು ಈ ಬೇಡವಾದ ಅಧಿಕ ಜೀವಕೋಶಗಳು ಮತ್ತು ಕೊಬ್ಬನ್ನು ಕರಗಿಸಲು ನಮಗೆ ಹೆಚ್ಚು ವ್ಯಾಯಾಮ ಅಥವಾ ಭಾರವನ್ನು ಎತ್ತಬೇಕಾಗುತ್ತದೆ.

ಇದನ್ನು ಹೊರತುಪಡಿಸಿ ನಮ್ಮ ಜೀವನ ಶೈಲಿಯಲ್ಲಿ ಅಧಿಕವಾದ ಜೀವಕೋಶಗಳನ್ನು ಮತ್ತು ಕೊಬ್ಬು ಶೇಕರಣೆಯಾಗುವುದರಿಂದ ರೋಗಗಳುಂಟಾಗುವ ಸಾಧ್ಯತೆಗಳುಹೆಚ್ಚು. ಈ ಅಧಿಕ ಜೀವಕೋಶಗಳು ಮತ್ತು ಕೊಬ್ಬು ಶೇಕರಣೆಯಾಗುವುದನ್ನು ನಮ್ಮ ದೇಹದಿಂದ ಹೊರಹಾಕಬೇಕು ಅಥವಾ ಪುನಃ ಉಪಯೋಗದ ಮೂಲಕ ಸಂರಕ್ಷಿಸಿಕೊಳ್ಳಬೇಕು.

ಏನಾದರೂ ಆಟೋಫೈಗಿಯ ಈ ಪ್ರಕ್ರಿಯೆಯು ನಮ್ಮ ಶರೀರದಲ್ಲಿ ಉತ್ತಮವಾಗಿ ನಡೆಯುತ್ತಿದ್ದರೆ, ಆಗ ನಮ್ಮ ಶರೀರದಲ್ಲಿ ಯಾವುದೇ ರೋಗಗಳು ಬರುವುದಿಲ್ಲ. ಜಾಪಾನಿ ನೋಬೆಲ್ ಪುರಸ್ಕಾರ ವಿಜೇತ ಯೋಶಿನೋರಿ ಒಹಸುಮಿರವರು ತಮ್ಮ ಪರೀಕ್ಷಾ ಸಮೂಹದ ಸದಸ್ಯರಿಗೆ ಕೆಲವು ಔಷದಿಗಳನ್ನು ಕೊಡಲು ಪ್ರಯತ್ನಿಸಿದರು. ಆದರೆ ಅದರಿಂದ ಅವರಿಗೆ ತಿಳಿದುಬಂದದ್ದೇನೆಂದರೆ ಸಮಯಕ್ಕೆ ತಕ್ಕಹಾಗೆ ಉಪವಾಸವನ್ನು ಮಾಡುವುದರಿಂದ ಆಟೋಫೈಗಿಯ ಪ್ರಕ್ರಿಯೆಯನ್ನು ಪ್ರಭಾವಿತಗೊಳಿಸಲು ಸಹಾಯ ಮಾಡುತ್ತದೆ. ಯಾವುದೇ ತರಹದ ಔಷದಿಗಳು ಆಟೋಫೈಗಿ ಪ್ರಕ್ರಿಯೆಗೆ ಅಷ್ಟು ಪ್ರಭಾವಿತವಾಗಿ ಸಹಾಯ ಮಾಡುವುದಿಲ್ಲ.

ಹೀಗೆ ಏಕಾದಶಿಯ ಉಪವಾಸವು ನಿಮ್ಮ ಶರೀರದಲ್ಲಿ ನಡೆಯುವಂತಹ ಆಟೋಫೈಗಿಯ ಪ್ರಕ್ರಿಯೆಯು ಉತ್ತಮ ಗತಿಯಲ್ಲಿ ಮುನ್ನಡೆಯಲು ಎಲ್ಲದಕ್ಕಿಂತಲೂ ಒಳ್ಳೆಯ ಮತ್ತು ಏಕಮಾತ್ರ ವಿಧಾನವಾಗಿದೆ. ಈ ಜಾಪಾನಿ ವೈಜ್ಞಾನಿಕರ ಈ ಪರಿಶೀಲನೆಯಿಂದ ಹೊರಬಂದ ವಿಚಾರವೇನೆಂದರೆ ಏಕಾದಶಿಯಂತಹ ಪಕ್ವ ಸಮಯದ ಉಪವಾಸವು ಆಟೋಫೈಗಿಯ ಪ್ರಕ್ರಿಯೆಯನ್ನು ಸರಿಯಾಗಿ ನಡೆಸಲು ಪರಮ ಲಾಭದಾಯಕವಾಗಿದೆ. ಅವರ ಈ ಪರಿಶೋಧನೆಗಾಗಿ ಈ ಮಾಹಾನ್ ಪುರಸ್ಕಾರದ ಮೂಲಕ ಗೌರವಿಸಲಾಗಿದೆ.

ಈ ರೀತಿಯಾಗಿ ಆಧುನಿಕ ವೈಜ್ಞಾನಿಗಳೂ ಸಹ ಏಕಾದಶಿ, ರಾಮ-ನವಮೀ, ಗೌರ-ಪೂರ್ಣಿಮಾ, ನಿತ್ಯಾನಂದ-ತ್ರಯೋದಶಿ, ನೃಸಿಂಹ-ಚರುರ್ದಶೀ, ಮಹಾಶಿವರಾತ್ರಿ,

ಅದ್ವೈತ-ಸಪ್ತಮಿ, ಕೃಷ್ಣ-ಜನ್ಮಾಷ್ಟಮಿ ಇತ್ಯಾದಿ ದಿನಗಳಲ್ಲಿ ಭೋಜನ ಹಾಗೂ ಪಾನೀಯಗಳನ್ನು ತ್ಯೆಜಿಸಿ ಪೂರ್ಣ ಉಪವಾಸವನ್ನು ಪಾಲನೆ ಮಾಡುವುದರಿಂದ ಉಂಟಾಗುವು ಲಾಭಗಳನ್ನು ಒಪ್ಪಿಕೊಂಡಿದ್ದಾರೆ.

ನಮ್ಮ ದೇಹವು ಸ್ವಾಥ್ಯವಾಗಿದ್ದರೂ ಮತ್ತು ನಾವು ನಿರ್ಜಲ-ಏಕಾದಶಿ ಮಾಡಲು ಶಕ್ತರಾಗಿದ್ದರೂ ಸಹ ಏಕಾದಶಿ ತಿಥಿಯನ್ನು ಅವಹೇಳನೆ ಮಾಡಿ ನಾವು ಅನುಕಲ್ಪವನ್ನು (ಅಂದರೆ ಹಣ್ಣು ಮತ್ತು ಪಾನೀಯಗಳು) ಸ್ವೀಕರಿಸಿದರೆ ಅಪರಾಧವಾಗುತ್ತದೆ, ಈ ಅಪರಾಧದಿಂದ ನಮಗೆ ಗಂಭೀರ ಪಾಪಮಯ ಪ್ರತಿಕ್ರಿಯೆಯನ್ನು ಅನುಭವಿಸಬೇಕಾಗುತ್ತದೆ.

ಇಲ್ಲಿಯವರೆಗು ಸಾಂಸಾರಿಕ ಅರ್ಥದಲ್ಲೂ ಸಹ ನೀವು ಏನಾದರು ಎಲ್ಲ ಸೌಕರ್ಯಗಳುಳ್ಳಂತಹ ಜನರಿಗೆ ಬೇಕಾದ ಎಲ್ಲ ಊಟದ ಸಾಮಾಗ್ರಿಗಳನ್ನು ಮತ್ತು ಪಾನೀಯ ಅಥಾವ ನೀರಿನ ಸಹಾಯ ಮಾಡಿದರೆ, ಮತ್ತೆ ಹಸಿವು ಮತ್ತು ಬಾಯಾರಿಕೆಯಿಂದ ಪೀಡಿತರಾದಂತಹ ಜನರನ್ನು ಉಪೇಕ್ಷೆ ಮಾಡಿದರೆ ಮತ್ತು ಅವರಿಗೆ ಭೋಜನ ಹಾಗೂ ನೀರಿನ ಸಹಾಯ ಮಾಡದಿದ್ದರೆ, ಆಗ ನಿಮಗೆ ಆ ಪಾಪದ ಪ್ರತಿಕ್ರಿಯೆಯು ಲಭಿಸುತ್ತದೆ.

ಈ ರೀತಿಯಾಗಿ ನೀವು ಏನಾದರು ಏಕಾದಶಿ ದಿನದಂದು ಪರಿಪೂರ್ಣವಾಗಿ ಉಪವಾಸ ಮಾಡಲು ಶಕ್ತರಾಗಿದ್ದರೂ ಸಹ ಮಾಡದಿದ್ದರೆ ಆಗ ನಿಮಗೆ ಪಾಪದಲ್ಲಿ ಭಾಗಿಯಾಗಬೇಕಾಗುತ್ತದೆ.

ಉಪವಾಸ: ವಿಷಯಾಸಕ್ತಿಯ ನಿವೃತ್ತಿಗೆ ಉತ್ತಮವಾದ ಸಾಧನೆ ಉಪವಾಸದ ಪ್ರಯೋಜನಗಳು

ಅನ್ನದಲ್ಲೂ ಸಹ ಒಂದು ರೀತಿಯಾದ ನಶೆಯುಂಟಾಗುತ್ತದೆ. ಭೋಜನ ಮಾಡಿದ ನಂತರ ಆಲಸ್ಯ ರೂಪದಲ್ಲಿ ಈ ನಶೆಯನ್ನು ಪ್ರಾಯಶಃ ಎಲ್ಲರೂ ಸಹ ಅನುಭವಿಸಿರುತ್ತಾರೆ. ಬೇಯಿಸಿದ ಅನ್ನದ ನಶೆಯಲ್ಲಿ ಒಂದು ಪ್ರಕಾರದ ಪಾರ್ಥಿವ ಶಕ್ತಿ ಅಡಗಿರುತ್ತದೆ, ಆ ಪಾರ್ಥಿವ ಶಕ್ತಿಯ ಸಂಯೋಗದಿಂದ ಅದು ಎರಡುಪಟ್ಟಾಗುತ್ತದೆ. ಈ ಶಕ್ತಿಯನ್ನು ಶಾಸ್ತ್ರಕಾರರು 'ಆಧಿಭೌತಿಕ ಶಕ್ತಿ' ಎಂದು ಕರೆಯುತ್ತಾರೆ.

ಈ ಆಧಿಭೌತಿಕ ಶಕ್ತಿಯ ಪ್ರಬಲತೆಯಿಂದ 'ಆಧ್ಯಾತ್ಮಿಕ ಶಕ್ತಿ' ಅಂದರೆ ನಾವು ಪೂಜೆ-ಉಪಾಸನೆಗಳ ಮಾಧ್ಯಮದಿಂದ ಪಡೆಯುವುಂತಹ ಶಕ್ತಿಯು ನಷ್ಟವಾಗುತ್ತದೆ. ಆದ್ದರಿಂದ ಭರತೀಯ ಮಹರ್ಷಿಗಳು ಸಂಪೂರ್ಣವಾಗಿ ಆಧ್ಯಾತ್ಮಿಕ ಅನುಷ್ಠಾನಗಳಲ್ಲಿ ಉಪವಾಸಕ್ಕೆ ಪ್ರಥಮ ಸ್ಥಾನವನ್ನು ನೀಡಿದ್ದಾರೆ.

"ವಿಷಯ ವಿನಿವರ್ತಂತೆ ನಿರಾಹಾರಸ್ಯ ದೇಹಿನಃ"- ಗೀತಾಚಾರ್ಯನ ಈ ಶ್ಲೋಕದ ಅನುಸಾರವಾಗಿ ಏಕಾದಶಿಯ ಉಪವಾಸವು ವಿಷಯಾಸಕ್ತಿಯ ನಿವೃತ್ತಿಗೆ ಉತ್ತಮವಾದ ಸಾಧನೆಯಾಗಿದೆ. ಯಾರ ಹೊಟ್ಟೆ ಖಾಲಿಯುಂಟೋ ಅವರ ಮನಸ್ಸು ವ್ಯರ್ಥವಾಗಿ

ಚಂಚಲವಾಗುವುದಿಲ್ಲ. ಆದುದರಿಂದ ಶರೀರ, ಇಂದ್ರಿಯಗಳು ಮತ್ತು ಮನಸ್ಸು ಇವುಗಳಲ್ಲಿ ವಿಜಯವನ್ನು ಪಡೆಯಲು 'ಜಿತಾಸನ' ಮತ್ತು 'ಜಿತಾಹಾರ'ರಾಗುವುದು ಪರಮ ಆವಶ್ಯವಾಗಿದೆ.

ಆಯುರ್ವೇದ ಮತ್ತು ಇಂದಿನ ವಿಜ್ಞಾನ– ಈ ಎರಡರದ್ದೂ ಒಂದೇ ತತ್ತ್ವ ವಿಚಾರವಾಗಿದೆ, ಹರಿವಾಸರ ವ್ರತ ಮತ್ತು ಏಕಾದಶಿ ಉಪವಾಸದ ಮೂಲಕ ಅನೇಕ ಶಾರೀರಿಕ ವ್ಯಾಧಿಗಳು ನಷ್ಟವಾಗುತ್ತದೆ ಮತ್ತು ಮಾನಸಿಕ ವ್ಯಾಧಿಗಳು ಶಮನವಾಗಲೂ ಸಹ ಇದು ಅತ್ಯುತ್ತಮವಾದ ಉಪಾಯ. ಇದರ ಮೂಲಕ ಜಠರಾಗ್ನಿಯು ಪ್ರದೀಪ್ತವಾಗಿ ಶರೀರವು ಶುದ್ಧಿಯಾಗುತ್ತದೆ.

ಫಲಾಹಾರದ ತಾತ್ಪರ್ಯ ಏನೆಂದರೆ ಉಪವಾಸದ ದಿನ ಆಹಾರವನ್ನು ಕೇವಲ ಸ್ವಲ್ಪ ಹಣ್ಣನ್ನು ಸೇವಿಸುವುದು, ಆದರೆ ಇಂದಿನ ದಿನಗಳಲ್ಲಿ ಇದರ ಅರ್ಥವೇ ಬದಲಾಗಿ ಫಲಾಹಾರ ಶಬ್ದವನ್ನು ನೀವು ಭ್ರಮಿತರಾಗಿ ನಾಶ್ತ ಎಂದು ಕರೆಯಲಾಗಿದೆ ಮತ್ತು ಆ ನಾಶ್ತ ಸಬ್ಬಕ್ಕಿಯಿಂದ ಮಾಡಿದ ಕಿಚಡಿ ಅಥವಾ ಭೋಜನಕ್ಕಿಂತಲೂ ಜೋರಾಗಿ ಮೆಣಸಿನಕಾಯಿ–ಮಸಾಲೆ ಯುಕ್ತವಾದ ಆಹಾರವನ್ನು ಸೇವಿಸುತ್ತಾರೆ. ಅಂತಹವರಿಗೆ ವಿನಂತಿಸಿಕೊಳ್ಳುವುದೇನೆಂದರೆ ಕೇವಲ ನೀರನ್ನು ಕುಡಿದು ಅಥವಾ ಸ್ವಲ್ಪಮಾತ್ರವೇ ಹಣ್ಣುಗಳನ್ನು ಸ್ವೀಕರಿಸಿ ಏಕಾದಶಿ ಉಪವಾಸವನ್ನು ಆಚರಿಸಬೇಕು. ಇಲ್ಲದಿದ್ದರೆ 'ಉಪವಾಸ' ಎಂಬ ಈ ಪವಿತ್ರ ಶಬ್ದಕ್ಕೇ ಅಪಮಾನವಾಗುತ್ತದೆ, ಅದರೊಂದಿಗೆ ಶರೀರವೂ ಸಹ ಹೆಚ್ಚು ಕೆಡುತ್ತದೆ. ಅವರ ಈ ಅವಿವೇಕ ಕೃತ್ಯದ ಕಾರಣ ಅವರಿಗೆ ಲಾಭವಾಗುವ ಬದಲಿಗಿ ಕಷ್ಟವೇ ಹೆಚ್ಚಾಗುತ್ತದೆ.

ಹದಿನೈದು ದಿನಗಳಿಗೊಮ್ಮೆ ಒಂದು ಬಾರಿ ಬರುವ ಏಕಾದಶಿಯ ಉಪವಾಸ ಮಾಡಬೇಕು. ಇದರಿಂದಾಗಿ ಹೊಟ್ಟೆ, ಲಿವರ್ ಮತ್ತು ಪಚನ–ತಂತ್ರಗಳಿಗೆ ಸ್ವಲ್ಪ ವಿಶ್ರಾಂತಿಸಿಗುತ್ತದೆ ಮತ್ತು ಅವು ತಂತಾವೇ ಶುದ್ಧಿಗೊಳ್ಳುತ್ತವೆ. ಈ ಪ್ರಕ್ರಿಯೆಯ ಮೂಲಕ ಪಚನತಂತ್ರವು ಬಲವಾಗುತ್ತದೆ ಮತ್ತು ಮನುಷ್ಯನ ಶಕ್ತಿಯೊಂದಿಗೆ ಅದರ ಆಯೂ ಸಹ ಹೆಚ್ಚಾಗುತ್ತದೆ.

ಭಾರತೀಯ ಜೀವನ ಶೈಲಿಯಲ್ಲಿ ಏಕಾದಶಿ ವ್ರತ, ಜನ್ಮಾಷ್ಟಮಿ, ರಾಮ–ನವಮಿ, ಗೌರ–ಪೂರ್ಣಿಮ, ನೃಸಿಂಹ–ಚತುರ್ದಶಿ, ನಿತ್ಯಾನಂದ–ತ್ರಯೋದಶಿ, ಅದ್ವೈತ–ಸಪ್ತಮಿ, ಬಲದೇವ–ಪೂರ್ಣಿಮ, ಮಹಾಶಿವರಾತ್ರಿ ಇತ್ಯಾದಿ ವ್ರತ–ಉಪವಾಸಗಳಿಗೆ ವಿಶೇಷ ಮಹತ್ವವಿದೆ. ಅವುಗಳ ಆಚರಣೆ ಧಾರ್ಮಿಕ ದೃಷ್ಟಿಕೋಣದಿಂದ ಮಾಡಲಾಗುತ್ತದೆ, ಆದರೆ ವ್ರತೋಪವಾಸ ಮಾಡುವುದರಿಂದ ಶರೀರವೂ ಸಹ ಆರೋಗ್ಯಕರವಾಗಿರುತ್ತದೆ.

'ಉಪ' ಶಬ್ಧದ ಅರ್ಥ ಹತ್ತಿರ ಎಂದು, 'ವಾಸ' ಶಬ್ಧದ ಅರ್ಥ ಇರುವುದು. ಉಪವಾಸ ಎಂಬುದರ ಸರಿಯಾದ ಅರ್ಥ: ಭಗವಂತನ ಹತ್ತಿರವಿರುವುದು ಎಂದು, ಉಪವಾಸದ ವ್ಯಾವಹಾರಿಕ ಅರ್ಥ ನಿರಾಹಾರದಿಂದಿರುವುದು. ನಿರಾಹಾರದಿಂದಿದ್ದರೆ ಭಗವದ್‌ಭಜನೆ ಮತ್ತು ಹರಿನಾಮ ಜಪ ಮಾಡಲು ಸಹಾಯವಾಗುತ್ತದೆ. ವೃತ್ತಿ ಅಂತರ್ಮುಖಿಯಾಗುತ್ತದೆ. ಉಪವಾಸವು ಪುಣ್ಯದಾಯಕ, ಆಮದೋಷಹಾರಕ,

ಅಗ್ನಿಪ್ರದೀಪಕ, ಸ್ಫೂರ್ತಿದಾಯಕ ಮತ್ತು ಇಂದ್ರಿಯಗಳನ್ನು ಪ್ರಸನ್ನಗೊಳಿಸುವಂತಹದ್ದು ಎಂದು ಭಾವಿಸಲಾಗಿದೆ. ಆದ್ದರಿಂದ ಯಥಾ ಕಾಲ, ಯಥಾ ವಿಧಿ ಏಕಾದಶಿಯಂದು ಉಪವಾಸವನ್ನು ಆಚರಿಸಿ ನಿತ್ಯ–ಧರ್ಮದ ಅಭಿವೃದ್ಧಿ ಮತ್ತು ಆರೋಗ್ಯ–ಲಾಭವನ್ನು ಪ್ರಾಪ್ತಿಸಿಕೊಳ್ಳಬೇಕು.

ಆಹಾರಂ ಪಚತಿ ಶಿಖೀ ದೋಷಾನ್ ಆಹಾರವರ್ತಿತಃ ।

ಅರ್ಥಾತ್ ಹೊಟ್ಟೆಯಲ್ಲಿನ ಅಗ್ನಿಯು ಆಹಾರವನ್ನು ಪಚನಗೊಳಿಸುತ್ತದೆ ಮತ್ತು ಉಪವಾಸವು ದೋಷಗಳನ್ನು ಪಚನಗೊಳಿಸುತ್ತದೆ. ಉಪವಾಸದಿಂದ ಪಚನ ಶಕ್ತಿ ಬೆಳೆಯುತ್ತದೆ. ಉಪವಾಸದ ಕಾಲದಲ್ಲಿ ಶರೀರದಲ್ಲಿ ಹೊಸದಾಗಿ ಮಲ ಉತ್ಪನ್ನವಾಗುವುದಿಲ್ಲ ಮತ್ತು ಜೀವನ ಶಕ್ತಿಗೆ ಹಿಂದೆ ಸಂಗ್ರಹಿತವಾದ ಮಲವನ್ನು ಹೊರಹಾಕಲು ಅವಕಾಶ ನೀಡುತ್ತದೆ. ಮಲ–ಮೂತ್ರ–ವಿಸರ್ಜನಾ ಕಾರ್ಯವು ಸುಲಭವಾಗಿ ನೆಡೆಯುತ್ತದೆ. ಶರೀರದಲ್ಲಿ ಚುರುಕುತನ ಉಂಟಾಗುತ್ತದೆ ಮತ್ತು ಅತಿನಿದ್ರೆ–ಅಲ್ಪನಿದ್ರಾವಸ್ಥೆ ನಾಶವಾಗುತ್ತದೆ.

ಶಾರೀರಿಕ ವಿಕಾರ: ಅಜೀರ್ಣ, ವಾಂತಿ, ಮಂದಾಗ್ನಿ, ದೇಹದ ಭಾರವೆನಿಸುವುದು, ತಲೆನೋವು, ಜ್ವರ, ಲಿವರ್ಗೆ ಸಂಬಂಧಿತ ಕಾಯಿಲೆಗಳು, ಅಸ್ತಮಾ, ದೇಹ ತೂಕಹೆಚ್ಚುವಿಕೆ, ಕೀಲು ನೋವು, ದೇಹದ ಊತ, ಕೆಮ್ಮು, ಮಲವಿಸರ್ಜನೆ (ಲೂಸ್ ಮೋಷನ್), ಮಲಬದ್ಧತೆ, ಹೊಟ್ಟೆ ನೋವು, ಚರ್ಮ ರೋಗ, ಮೂತ್ರಕೋಶ ರೋಗ, ಸ್ಟ್ರೋಕ್ ಮತ್ತು ಇತ್ಯಾದಿ ರೋಗಗಳನ್ನು ಗುಣಪಡಿಸಲು ಏಕಾದಶಿ ಅಥವಾ ಹರಿವಾಸರ ಉಪವಾಸ ವ್ರತಗಳು ಸಹಾಯಮಾಡುತ್ತವೆ.

ಮಾನಸಿಕ ವಿಕಾರ: ಮನಸ್ಸಿಗೂ ಸಹ ಉಪವಾಸವು ಅತ್ಯಂತ ಪ್ರಭಾವಭೀರುತ್ತದೆ. ಉಪವಾಸದಿಂದ ಮನಸ್ಸು ಸ್ಥಿರಗೊಳ್ಳುತ್ತದೆ. ಯಾವಾಗ ಮನುಷ್ಯನು ತನ್ನ ಚಿತ್ತ ವೃತ್ತಿಗಳನ್ನು ನಿಯಂತ್ರಿಸಲು ಸಾಧ್ಯವಾಗುವುದೋ, ಆಗ ಭೌತಿಕ ಶರೀರದಲ್ಲಿದ್ದರೂ ಸಹ ಅವನಿಗೆ ಸುಖ–ದುಃಖ, ಹರ್ಷ–ವಿಷಾದಗಳಿರುವುದಿಲ್ಲ. ಉಪವಾಸದಿಂದ ಸಾತ್ವಿಕ ಭಾವನೆ ಬೆಳೆಯುತ್ತದೆ, ರಾಜಸಿಕ ಹಾಗೂ ತಾಮಸಿಕ ಭಾವಗಳು ವಿನಾಶವಾಗ ತೊಡಗುತ್ತದೆ, ಮನೋಬಲ ಮತ್ತು ಆತ್ಮಬಲದ ವೃದ್ಧಿಯಾಗುತ್ತದೆ. ಆದ್ದರಿಂದ ಅತಿನಿದ್ರೆ, ಅಲ್ಪನಿದ್ರೆ, ಮೂರ್ಖತನ, ಅನಾರೋಗ್ಯ, ಭಯಭೀತರಾಗುವುದು ಅಥವಾ ಶೋಕಭಾವರಾಗುವುದು, ಅಪ್ರಸನ್ನತೆ, ಕ್ರೋಧ, ಈರ್ಷೆ ಇತ್ಯಾದಿ ಮಾನಸಿಕ ರೋಗಗಳಿಗೆ ಯಾವುದೇ ಔಷಧಿಗಳು ಪರಿಣಾಮ ಭೀರುವುದಿಲ್ಲ, ಆದರೆ ಈ ಎಲ್ಲ ರೋಗಗಳನ್ನು ಗುಣಪಡಿಸಲು ಏಕಾದಶಿ ಉಪವಾಸವು ಅತ್ಯಂತ ಪರಿಣಾಮಕಾರಿ ಲಾಭವನ್ನು ನೀಡುತ್ತದೆ.

ಶ್ರೀ ಗೋಪಾಲ ಭಟ್ಟ ಗೋಸ್ವಾಮಿ ಮತ್ತು ಏಕಾದಶಿಯ ಪಾಠ

ಗೋಪಾಲ ಭಟ್ಟ ಗೋಸ್ವಾಮಿಗಳು ಭಗವಂತನ ಶುದ್ಧ ಭಕ್ತರಾಗಿದ್ದರು. ಸಾಧಾರಣವಾಗಿ ಜನರು ಅವರ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಯಾರಾದರೂ ಅವರ ವ್ಯವಹಾರವನ್ನು ಕಂಡು ಸಂದೇಹಿಸಿದರೆ ಆಗ ಅಂತಹವರ ಪತನವಾಗುವುದು ಅನಿವಾರ್ಯವೆನ್ನಲಾಗಿತ್ತು.

ಗೋಪಾಲ ಭಟ್ಟ ಗೋಸ್ವಾಮಿಗಳಿಗೆ ಬಹಳಷ್ಟು ಜನ ಶಿಷ್ಯರಿದ್ದರು– ಶ್ರೀನಿವಾಸ ಆಚಾರ್ಯ, ಹರಿವಂಶ ಬ್ರಜವಾಸಿ, ವಿದ್ವಾನ್ ಗೋಪಿನಾಥ ಪೂಜಾರಿ, ಶಂಭು–ರಾಮ ಮತ್ತು ಗುಜರಾತಿನ ಮಕರಂದ್.

ಗೋಪಾಲ ಭಟ್ಟ ಗೋಸ್ವಾಮಿಗಳು ಶ್ರೀಶ್ರೀರಾಧಾರಮಣನ ಸೇವೆಮಾಡುವ ಜವಾಬ್ದಾರಿಯನ್ನು ಗೋಪಿನಾಥ ಪೂಜಾರಿಗೆ ನೀಡಿದ್ದರು. ಗೋಪಾಲ ಭಟ್ಟ ಗೋಸ್ವಾಮಿಗಳ ಶಿಷ್ಯನಾದಂತಹ ಹರಿವಂಶನು ಅವರ ಅದೇಶವನ್ನು ಪಾಲನೆ ಮಾಡಿರುವುದಿಲ್ಲ, ಆದ್ದರಿಂದ ಗೋಪಾಲ ಭಟ್ಟ ಗೋಸ್ವಾಮಿಗಳು ಅವನನ್ನು ಪರಿತ್ಯಾಗ ಮಾಡಿದ್ದರು. ತದನಂತರ ಹರಿವಂಶನು ತನ್ನ ಎಲ್ಲ ಸೌಭಾಗ್ಯವನ್ನು ಮತ್ತು ಉತ್ತಮ ಗುಣಗಳನ್ನು ಕಳೆದುಕೊಂಡನು.

ಇದಕ್ಕೂ ಮೊದಲು ಹರಿವಂಶ ಬ್ರಜವಾಸಿ ಒಬ್ಬ ಪ್ರಸಿದ್ಧ ವಿದ್ವಾಂಸನಾಗಿದ್ದನು. ಅವನು ಸಧಾಕಾಲ ತನ್ನ ಆಧ್ಯಾತ್ಮಿಕ ಗುರುಗಳನ್ನು ಬಹಳ ಪ್ರಾಮಾಣಿಕವಾಗಿ ಸೇವೆಮಾಡುತ್ತಿದ್ದ. ಗೋಪಾಲ ಭಟ್ಟ ಗೋಸ್ವಾಮಿ ಅವನ ಸೇವೆಯನ್ನು ಕಂಡು ಪ್ರಸನ್ನರಾಗಿದ್ದರು. ಆದರೂ ಸಹ, ದುರ್ಭಾಗ್ಯವಷಾತ್ ಹರಿವಂಶ ತನ್ನ ಗುರುಗಳ ಆದೇಶವನ್ನು ಪಾಲನೆ ಮಾಡಲಿಲ್ಲ.

ಒಮ್ಮೆ ಏಕಾದಶಿಯ ದಿನದಂದು, ಹರಿವಂಶನು ಎಲೆ–ಅಡಿಕೆಯನ್ನು ಮೆಲ್ಲುತ್ತ ತನ್ನ ಆಧ್ಯಾತ್ಮಿಕ ಗುರುಗಳ ಬಳಿ ಬಂದನು. ಆಗ ಗೋಪಾಲ ಭಟ್ಟ ಗೋಸ್ವಾಮಿಗಳು ಅವನಿಗೆ ಎಲೆ–ಅಡಿಕೆ ತಿನ್ನುತ್ತಿರುವ ಬಗ್ಗೆ ಪ್ರಶ್ನಿಸಿದರು, ಆಗ ಅವನು ಇದು ಶ್ರೀರಾಧಾಮಾತೆಯ ಪ್ರಸಾದದ ತಾಂಬೂಲ ಎಂದನು.

ಗೋಪಾಲ ಭಟ್ಟ ಗೋಸ್ವಾಮಿ ಹೇಳಿದರು, "ಏಕಾದಶಿಯ ದಿನದಂದು ನೀವು ಏನನ್ನು ತಿನ್ನಬೇಡಿ. ಭಗವಂತನ ಮಹಾಪ್ರಸಾದವನ್ನೂ ಸಹ ತಿನ್ನಬೇಡಿರಿ.

ಶಾಸ್ತ್ರ ಹೇಳುತ್ತದೆ: ಪ್ರಾಸಾದಾನ್ನಮ್ ಸದಾ ಗ್ರಾಹ್ಯಂ ಹರೇರ ಏಕಾದಶೀಂ ವಿನಾ ।–

'ಭಗವಾನ್ ಹರಿಯ ಉಚ್ಛಿಷ್ಟ ಮಹಾಪ್ರಸಾದದ ಸೇವನೆಯನ್ನು ತಪ್ಪದೆ ಮಾಡಬೇಕು, ಆದರೆ ಏಕಾದಶಿಯಂದು ಮಾತ್ರ ಏನನ್ನೂ ಸಹ ಸೇವಿಸಬಾರದು.' ಮತ್ತೊಮ್ಮೆ ಹೀಗೆ ಮಾಡಬೇಡಿರಿ; ಅನ್ಯಥಾ ಇದು ಅಪರಾಧವಾಗುತ್ತದೆ."

ಹರಿವಂಶನು ಅವರಿಗೆ ದಂಡವತ್ ಪ್ರಣಾಮವನ್ನು ಮಾಡಿ ಅಲ್ಲಿಂದ ಹೋದನು. ದುರ್ಭಾಗ್ಯದಿಂದ ಅವನು ಆ ತಾಂಬೂಲವನ್ನು ಅರ್ದ ತಿಂದಾಗಿತ್ತು, ಆದ್ದರಿಂದ ಅವನಿಗೆ ಈ ಅಭ್ಯಾಸವನ್ನು ಬಿಡಲಾಗಲಿಲ್ಲ.

ಮುಂದಿನ ಏಕಾದಶಿಯಂದು ಶ್ರೀಮತೀ ರಾಧಿಕಾರವರಿಗೆ ಅರ್ಪಿತವಾದ ತಾಂಬೂಲವನ್ನು ಮೆಲ್ಲುತ್ತಾ ಕೆಂಪು ಬಾಯಿಹಾಕಿಕೊಂಡು ತನ್ನ ಆಧ್ಯಾತ್ಮಿಕ ಗುರುಗಳನ್ನು

ನೋಡಲು ಹೋದನು.

ಗೋಪಾಲ ಭಟ್ಟ ಗೋಸ್ವಾಮಿಗಳು ಹೇಳಿದರು, "ನೀನು ಒಬ್ಬ ದೊಡ್ಡ ವಿಧ್ಯಾವಂತ ವ್ಯಕ್ತಿ, ಏತಕ್ಕಾಗಿ ನೀನು ಒಬ್ಬ ಅಜ್ಞಾನಿಯಂತೆ ಆಚರಣೆಮಾಡುತ್ತಿರುವೆ? ಏಕಾದಶಿಯ ದಿನದಂದು ತಾಂಬೂಲವನ್ನು ಮೆಲ್ಲುತ್ತ ನೀನು ಎಲ್ಲ ಪ್ರಕಾರದ ಪಾಪಗಳನ್ನು ಸಂಗ್ರಹಿಕೊಳ್ಳುತ್ತಿರುವೆ. ಸುಶಿಕ್ಷಿತ ವಿದ್ವಾಂಸನಾಗಿದ್ದರೂ ಸಹ ನೀನು ನನ್ನ ಆದೇಶವನ್ನು ಪಾಲನೆಮಾಡಿಲ್ಲ. ಈ ಅಪರಾಧದ ಕಾರಣ ನಾನು ನಿನ್ನನ್ನು ದೂರಸರೆಯುತ್ತಿದ್ದೇನೆ."

ಹರಿವಂಶನು ಹೀಗೆ ಬೇಡಿಕೊಂಡನು, "ಇದು ಪ್ರಾಸಾದ ತಾಂಬೂಲ ಮತ್ತು ಇದನ್ನು ತಿನ್ನುವ ಅಭ್ಯಾಸವನ್ನು ನನಗೆ ಬಿಡಲಾಗುತ್ತಿಲ್ಲ. ನಿಮ್ಮ ಆದೇಶವನ್ನು ಉಲ್ಲಂಘಿಸಿ ಅಪರಾಧವನ್ನು ಮಾಡಿದ್ದೇನೆ, ಆದರೆ ನಾನು ಶ್ರೀರಾಧಾಮಾತೆಯ ಉಚ್ಛಿಷ್ಟ ಪ್ರಸಾದವಾದ ತಾಂಬೂಲವನ್ನು ಉಪೇಕ್ಷೆ ಮಾಡಲಾಗುವುದಿಲ್ಲ," ಎಂದನು.

ಗೋಪಾಲ ಭಟ್ಟ ಗೋಸ್ವಾಮಿಗಳು ಇದನ್ನು ಕೇಳಿ ಸಿಟ್ಟಾದರು, ಆದ್ದರಿಂದ ಹರಿವಂಶನು ಅಲ್ಲಿಂದ ತಕ್ಷಣ ಹೊರಟುಹೊದನು. ಈ ರೀತಿಯಾಗಿ ಅವನು ಶ್ರೀಶ್ರೀರಾಧಾರಮಣನ ಸೇವೆಯಿಂದ ವಂಚಿತನಾದನು.

ನಂತರ, ಹರಿವಂಶನು ಸ್ವತಂತ್ರವಾಗಿ ವೃಂದಾವನದಲ್ಲಿ ಶ್ರೀಶ್ರೀರಾಧಾವಲ್ಲಭ–ದೇವರ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದನು. ಅವನ ಮೊದಲ ಪತ್ನಿಯಿಂದ ವನಚಂದ್ರ ಮತ್ತು ವೃಂದಾವನಚಂದ್ರ ಎಂಬ ಹೆಸರಿನ ಪುತ್ರರಾದರು. ಮತ್ತು ಎರಡನೇ ಪತ್ನಿಯಿಂದ ಕೃಷ್ಣದಾಸ ಮತ್ತು ಸೂರ್ಯದಾಸ ಎಂಬ ಹೆಸರಿನ ಪುತ್ರರಾದರು. ಕೊನೆಗೆ ಹರಿವಂಶನು ಶ್ರೀಶ್ರೀರಾಧಾವಲ್ಲಭನ ಸೇವಾಜವಾಬ್ದಾರಿಯನ್ನು ತನ್ನ ಮಕ್ಕಳಿಗೆ ವಹಿಸಿದನು ಮತ್ತು ತಾನು ವನದಲ್ಲಿ ವಾಸಮಾಡುವುದಾಗಿ ಹೇಳಿ ಮನೆಯನ್ನು ತೊರೆದು ವನಕ್ಕೆ ತೆರಳಿದನು.

ವಿಧಿ ಎಂಬುದು ಹೇಗೆ ಕೆಲಸ ಮಾಡುತ್ತದೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ವನದಲ್ಲಿ ಹರಿವಂಶನ ಮೇಲೆ ಕಳ್ಳಕಾಕರರು ಧಾಳಿಮಾಡಿದರು ಮತ್ತು ಅವನ ಶಿರವನ್ನು ಕತ್ತರಿಸಿ ಯಮುನಾ ನದಿಗೆ ಎಸೆದರು.

ಕತ್ತರಿಸಿದಂತಹ ಶಿರವು ನದಿಯಲ್ಲಿ ತೇಲುತ್ತ ಗೋಪಾಲ ಭಟ್ಟ ಗೋಸ್ವಾಮಿಗಳು ಇರುವಂತ ಸ್ಥಾನಕ್ಕೆ ಹೋಯಿತು. ಬಹಳ ಆಶ್ಚರ್ಯದ ವಿಚಾರವೇನೆಂದರೆ ಆ ಶಿರವು ಆ ಸಮಯದಲ್ಲೂ ಸಹ ರಾಧ–ನಾಮವನ್ನು ಉಚ್ಚರಿಸುತ್ತಿತ್ತು. ಗೋಪಾಲ ಭಟ್ಟ ಗೋಸ್ವಾಮಿಗಳು ಇದನ್ನು ಕಂಡು ಬಹಳ ಆಶ್ಚರ್ಯಗೊಂಡರು, ಆದರೆ ಈ ಶಿರಸ್ಸು ಹರಿವಂಶನದ್ದು ಎಂದು ತಿಳಿದು ಅವರಿಗೆ ಹೃದಯಕ್ಕೆ ನೋವಾಯಿತು. ಆದರೂ ಸಹ ಅವರು ಆ ತುಂಡಾದ ಶಿರವನ್ನು ಸ್ವಾಗತಿಸಿದರು.

ಮೆಲ್ಲಗೆ ಆ ಶಿರವು ಗೋಪಾಲ ಭಟ್ಟ ಗೋಸ್ವಾಮಿಗಳ ಬಳಿಗೆಬಂತು ಮತ್ತು ಅದು ಅವರ ಚರಣಕಮಲವನ್ನು ಸ್ಪರ್ಶಿಸಿತು. ಹರಿವಂಶನ ಶಿರಸ್ಸು ಹೇಳಿತು, "ಹೇ ಗುರುದೇವ, ನನ್ನ ಮೇಲೆ ಕೃಪೆಮಾಡಿ ಹೇಳಿರಿ– ನೀವು ನನ್ನ ಅಪರಾಧವನ್ನು ಕ್ಷಮಿಸುವಿರಾ?" ಗೋಪಾಲ ಭಟ್ಟ ಗೋಸ್ವಾಮಿಗಳು ಉತ್ತರಿಸಿದರು, "ಹಾ! ನಾನು ನಿನ್ನನ್ನು ಕ್ಷಮಿಸಿದ್ದೇನೆ," ಎಂದರು.

ಆಗ ಗೋಪಾಲ ಭಟ್ಟ ಗೋಸ್ವಾಮಿಗಳು ಆ ಶಿರದಮೇಲೆ ತಮ್ಮ ಚರಣಕಮಲವನ್ನಿಟ್ಟರು. ತನ್ನ ಗುರುಗಳ ಚರಣಕಮಲಗಳ ಆಶ್ರಯವನ್ನು ಪ್ರಾಪ್ತಿಸಿಕೊಂಡನಂತರ ಹರಿವಂಶನು ಮುಕ್ತಿ ಪಡೆಯಲು ಯೋಗ್ಯನಾದನು. ಗೋಪಾಲ ಭಟ್ಟ ಗೋಸ್ವಾಮಿಗಳು ತಮ್ಮ ಕುಟೀರಕ್ಕೆ ಬಂದನಂತರ ನಡೆದ ಈ ಘಟನೆಯನ್ನು ಎಲ್ಲರಿಗೆ ಹೇಳಿದರು.

ಇದರಿಂದ ತಿಳಿಯುವುದೇನೆಂದರೆ ಒಬ್ಬ ಅಪರಾಧಿಗೆ ಶ್ರೀಕೃಷ್ಣನು ದಯೆ ಹೇಗೆ ಪ್ರಾಪ್ತವಾಗುವುದೆಂದರೆ, ಯಾವ ವೈಷ್ಣವನ ಚರಣಗಳಲ್ಲಿ ಆ ಅಪರಾಧಿಯು ಅಪರಾಧವನ್ನು ಎಸಗಿರುತ್ತಾನೋ, ಅದೇ ವೈಷ್ಣವನಲ್ಲಿ ಕ್ಷಮೆಯನ್ನು ಯಾಚಿಸಿ ಅವನ ಕೃಪೆಗೆ ಪಾತ್ರನಾಗಿ ಕ್ಷಮಿಸಲ್ಪಟ್ಟರೆ, ಆಗ ಆ ವೈಷ್ಣವನ ಕೃಪೆಯಿಂದಲೇ ಅವನು ಅಪರಾಧದಿಂದ ಮುಕ್ತನಾಗುತ್ತಾನೆ. ಎಲ್ಲಿಯವರೆಗು ಯಾರು ತಮ್ಮ ಅಪರಾಧಗಳಿಂದ ಮುಕ್ತರಾಗುವುದಿಲ್ಲವೋ, ಅಲ್ಲಿಯವರೆಗು ಭಗವಂತನ ದಯೆಯನ್ನು ಪಡೆಯಲು ಸಾಧ್ಯವಿಲ್ಲ. ಈ ವಿಚಾರವು ಒಬ್ಬ ಮಹಾನ್ ಭಕ್ತನಿಗೂ ಸಹ ಅನ್ವಯಿಸುತ್ತದೆ.

ಏಕಾದಶಿಯ ಕುರಿತು ಹರಿದಾಸರ ಪದಗಳು

ಭೋಗಿಶಯನನ ದಿನದಿ ಸಕಲಭೋಗಗಳನ್ನು ತಾನು ತೊರೆದು
ಭಾಗವತರ ಮೇಳದಿಂದ ಜಾಗರಣೆ ಮಾಡದವನ ಜನ್ಮ
(ವ್ಯರ್ಥವಲ್ಲವೆ ಜನ್ಮ ವ್ಯರ್ಥವಲ್ಲವೆ)
– ಶ್ರೀಶ್ರೀಪಾದರಾಜರು

ಹರಿದಿನಕೆ ಮರುದಿನ ಸರಿಯಲ್ಲವೆಂತೆಂದು
ಹರಿವ ಹಾವನು ಹಿಡಿಯಲೆ
(ಅನುದಿನವು ಶ್ರವಣ ಮನನಾದಿ ಸಾಧನ ಮಾಡೊ
ಇನ್ನು ಸಂಶಯವ್ಯಾತಕೋ)
– ಶ್ರೀವಾದಿರಾಜರು

ಏಕಾದಶಿಯ ಮಾಡಿ ಯತಿಗಳೊಡನೆ ಆಡಿ
ಲೋಕವಾರ್ತೆಗಳನೀಡಾಡಿ
ಶ್ರೀಕಾಂತನನು ಪಾಡಿ ಸುಕೃತಿಗಳೊಡನೆ ಕೂಡಿ
ಶ್ರೀಕೃಷ್ಣನಂಘ್ರಿಗಳ ನೋಡಿ
(ಗುರುಹಿರಿಯರನುಸರಿಸಿ ಹರಿಯ ಮನದೊಳಗಿರಿಸಿ
ಪರಗತಿಯ ಬೇಗ ಸಾಧಿಸಿಕೊಳ್ಳಿರೋ)
– ಶ್ರೀವಾದಿರಾಜರು

ಹರಿದಿನದುಪವಾಸವಿರಲು ಜಾಗರವ ನೀ ಮರೆಯದಿರೆಚ್ಚರಿಕೆ
(ನಾರಾಯಣನೆಂಬ ನಾಮವ ಮನದಲಿ ನೆನೆವುತಿರೆಚ್ಚರಿಕೆ)
– ಶ್ರೀಪುರಂದರದಾಸರು

ವ್ರತಗಳೆಲ್ಲವು ಹರಿವಾಸರ ವ್ರತದ ಹಿಂದೆ
(ವಿದಿತದೈವಗಳೆಲ್ಲ ವಿಷ್ಣುವಿನ ಹಿಂದೆ)
– ಶ್ರೀಪುರಂದರದಾಸರು

ನೇಮದಿ ಉಪವಾಸ ಆ ಮಹಾ ಏಕಾದಶಿ
ಕಾಮಜನಕನನ್ನು ಪ್ರೇಮದಿ ಸ್ಮರಿಸದೆ
(ಹ್ಯಾಂಗೆ ನೀ ದಾಸನಾದಿ ಪ್ರಾಣಿ)
– ಶ್ರೀಕನಕದಾಸರು

ಹರಿದಿನದುಪವಾಸ ಜಾಗರ ಪಾರಣೆ
ಗುರುಹಿರಿಯರಲಿ ವಿಹಿತ ಸೇವೆ
ಹಿರಿದಾಗಿ ಮಾಡೋದು ಪರಿಪರಿಯಿಂದಲಿ
ಹರುಷದಿಂದಲಿ ನಲಿದಾಡುವುದೆಲ್ಲ
(ದಾಸರ ಭಾಗ್ಯವಿದು)
– ಶ್ರೀವಿಜಯದಾಸರು

ವಾಸುದೇವನ ವಾಸರದಲಿ ಉಂಬರ
ಹಾಸುಗಲ್ಲಿನ ಮೇಲೆ ಬೀಳಿಸಿ ಅಪ್ಪಳಿಸಿ ಆ
ಕಾಶಕ್ಕೊಗೆದು ಖಡ್ಗರಾಶಿಯೊಳ್ ಬೀಳಲು
ಕೇಶವಿಡಿದು ಕೆಡಹಿ ಘಾಸಿಸಿ ಬಾಯೊಳು
ಸೀಸವ ಕಾಸಿ ಎರೆದು – ಸಾಸುವೆ ತುಂಬಿ
ನಾಸಿಕ ಕೊಯ್ಯುವರೋ – ಕೀಸಿಸಿ ಗೂಟ
ಹೇಸದೆ ಬಡಿಸುವರೋ – ತಮಸಿನೊಳು
ಏಸುಜನ್ಮಕೆ ಗತಿಯಿಲ್ಲವೆನಿಸುವರೊ
(ಎಚ್ಚರಿಕೆಚ್ಚರಿಕೆ ಮನವೆ ಇನ್ನು)
– ಶ್ರೀವಿಜಯದಾಸರು

ಸಕಲ ದಿನಂಗಳು ಹರಿದಿನದ ತರುವಾಯ
(ಆವ ಸುಕೃತವೊ ಆವ ಗುರುಗಳ ದಯವೋ)
– ಶ್ರೀವಿಜಯದಾಸರು

ಬಿಸಜನಾಭನ ದಿವನ ಮಾಡದಿದ್ದವ ಹೊಲೆಯ
– ಶ್ರೀವಿಜಯದಾಸರು

ಜಾಗೇಂದ್ರಶಯನನ ದಿನದುಪವಾಸವ
ಜಾಗರ ಮಾಡದೆ ಮಲಗಿಪ್ಪಳಾ
ಭಾಗವತ ಸಚ್ಛಾಸ್ತ್ರಗಳ ಕೇಳದೆ ಮತ್ತಳಾಗಿ
ತಿರುಗುವಳ ಕರೆದು ತನ್ನಿರೋ ಎಂದು
(ಸಾರಿದ ಡಂಗುರ ಯಮನು ಪಾಪಿ
ನಾರಿಯರೆಳೆತಂದು ನರಕದೊಳಿಡಿರೆಂದು)
– ಶ್ರೀಜಗನ್ನಾಥದಾಸರು

ವೇದ ವ್ಯಾಕರಣ ಶಾಸ್ತ್ರಗಳೋದಿ ಶ್ರಾದ್ಧವೇ–
ಕಾದಶೀ ದಿನದಿ ಮಾಡುತಲಿಪ್ಪರಾ
ಭೇದಮಿಥ್ಯವೆನುತಲಿಪ್ಪ ಮಾಯಾ–
ವಾದಿಗಳೆಳತಂದು ನರಕದೊಳಿಡಿರೆಂದು
(ಯಮರಾಯ ಪೇಳ್ದ ದೂತರಿಗೆ ಲಕ್ಷ್ಮೀ–
ರಮಣನ ದಾಸರಿದ್ದೆಡೆಗೆ ಪೋಗದಿರೆಂದು)

– ಶ್ರೀಜಗನ್ನಾಥದಾಸರು

ಶ್ರೀವ್ಯಾಸರಾಜರ ಕೃತಿ

ರಾಗ: ಆರಭಿ — ತಾಳ: ಝಂಪೆ

ಹರಿದಿನ ಪಾತಕಪರಿಹಾರ ದಿವಿಜರ
ಕರುಣಕ್ಕೆ ಕಾರಣ ನಂಬೆಲೊ ಮನುಜ ॥ ಪಲ್ಲವಿ ॥

ಗಂಗೆ ಮೊದಲಾದ ತೀರ್ಥಂಗಳೆಣೆಯೆ ಶ್ರೀ
ರಂಗ ಮೊದಲಾದ ಕ್ಷೇತ್ರವು ಸರಿಯೆ ಉ–
ತ್ತುಂಗ ಜಪ ತಪ ಹೋಮಗಳೆದುರೆ ಶ್ರೀ
ರಂಗನಾಥನ ದಿನದೊಂದುಪವಾಸಕೆ ॥ ೧ ॥

ಹಿಂದೆ ಮಾಡಿದ ಪಾಪ ಪರಿಹಾರವು, ನೀ–
ನಿಂದು ಮಾಡುವ ಸುಕೃತ ಬೆಳೆಸು
ಮುಂದಣ ಮುಕುತಿಗೆ ಕಲ್ಪಲತಾಂಕುರ
ಇಂದಿರೇಶನ ದಿನದೊಂದುಪವಾಸಕೆ ॥ ೨ ॥

ರುಕುಮಾಂಗದ ಮೊದಲಾದ ಭಕುತರೆ
ಸಕಲವ ಬಿಟ್ಟು ಏಕಾದಶೀ ವ್ರತವ
ಭಕುತಿಯಿಂ ಕೂಡಿ ಶ್ರೀಕೃಷ್ಣನ ಮೆಚ್ಚಿಸಿ
ಮುಕುತಿ ಸೂರೆಗೊಂಡರೆಂಬುದನರಿಯ ॥ ೩ ।

ಶ್ರೀವಾದಿರಾಜರ ಕೃತಿ

ರಾಗ: ನವರೋಜ — ತಾಳ: (ಆದಿತಾಳ) ತಿಶ್ರನಡೆ

ಏಕಾದಶೀ ನಿರ್ಣಯ ಅನಲು (ಸಮನೆ) ಮನೆಗೆ
ಪೇಳಬಂದ ಅನಾಥಬಂಧು ಹಯವದನ ಗೋವಿಂದ ॥ ಪಲ್ಲವಿ ॥

ವೃದ್ಧಿಮಾತ್ರ ಅರುಣೋದಯದ ಕೆಳಗೆ
(ಶುದ್ಧಿದಂ) ಘಳಿಗೆ ಸಾಕು ಎಂದು ॥ ೨ ॥

ಅತಿವೃದ್ಧಿ ಒಂದು ಘಳಿಗೆಯ ಕೆಳಗೆ ವಿಂ–
ಶತಿ (ಫಣ) ಪಳದೊಳಗೆ ಶುದ್ಧಿ ಬೇಕೆಂದು ॥ ೩ ॥

ತಿಥಿ ವೃದ್ಧಿ ಆದಾಗ ಹತ್ತು (ಫಣ) ಪಳ
ತಿಥಿಕ್ಷಯದೊಳು ಐದು ಶುದ್ಧಿ ಬೇಕೆಂದು ॥ ೪ ॥

ಇಂದು ದಶಮಿ ಶಾಕವ್ರತವ ಮಾಡಿ ನೀವೆಲ್ಲ
ಒಂದೆ ಬಾರಿ ಬೋಜನ ಮಾಡಿರೊ ಎಂದು ॥ ೫ ॥

ತಾಂಬೂಲಚರ್ವಣ ಸಲ್ಲ ಸ್ತ್ರೀಸಂಗ
ಹಂಬಲವನ್ನು ನೀವು ಬಿಡಿರಿ ಎಂದು ॥ ೬ ॥

ಅನ್ನವರ್ಜಿತ ತಾಂಬೂಲದರ್ಪಣಗಳು
ಚೆನ್ನವಸ್ತ್ರವು ವರ್ಜಿತ ವರ್ಜಿತವೆಂದು ॥ ೭ ॥

ನಾಳೆ ಏಕಾದಶಿ ಉಪವಾಸ ಜಾಗರ
ಆಲಸ್ಯ ಮಾಡದೆ ಮಾಡಿರೊ ಎಂದು ॥ ೮ ॥

ಜಲಪಾನ ಸಲ್ಲ ಲವಣ ಸಲ್ಲ ನಿಮಗೆಲ್ಲ
ಫಲಾಹಾರವು ಸಲ್ಲದು ಸಲ್ಲದು ಎಂದು ॥ ೯ ॥

ನಾಲ್ಕು ಹೊತ್ತಿನ ಆಹಾರವು ಬಿಡುವುದು ಸರಿ
ನಾಲ್ಕುಜಾವದ ಜಾಗರ ಮಾಡಿರೋ ಎಂದು ॥ ೧೦ ॥

ಕಲಾ ಅರ್ಧ ದ್ವಾದಶಿ ಬಂದಾಗ ನೀವೆಲ್ಲ
ಒಲುಮೆಯಿಂದ ಪಾರಣೆಯ ಮಾಡಿರೋ ಎಂದು ॥ ೧೧ ॥

ಹತ್ತೈದಾದರೆ ಮ್ಯಾಲೆ ಮತ್ತೈದಾರೆ
ಅತ್ತತ್ತ ಹೋಯಿತು ಹರಿವಾಸರವೆಂದು ॥ ೧೨ ॥

ಸುಖಪಾರಣೆಗಳ ಮಾಡಿ ನಿಮ್ಮ ಸುಕೃತ ಶ್ರೀಹರಿಯ ಪಾ–

ದಕ್ಕೆ ಸಮರ್ಪಣೆ ಮಾಡಿರೊ ಎಂದು ॥ ೧೩ ॥

ಇಂತು ತಿಥಿತ್ರಯ ಮಾಡುವ ಜನರನ್ನು
ಸಂತತ ಪೊರೆವ ಶ್ರೀಕಾಂತ ಹಯವದನ ॥ ೧೪ ॥

ಶ್ರೀಪುರಂದರದಾಸರ ಕೃತಿ

ರಾಗ: ಶಂಕರಾಭರಣ ತಾಳ: ಅಟತಾಳ

ಹರಿದಿನದಲಿ ಉಂಡ ನರರಿಗೆ – ಘೋರ
ನರಕ ತಪ್ಪದು ಎಂದು ಶೃತಿಯು ಸಾರುತಲಿದೆ ॥ ಪಲ್ಲವಿ ॥

ಗೋವ ಕೊಂದ ಪಾಪ ಸಾವಿರ ವಿಪ್ರರ
ಜೀವಹತ್ಯವ ಮಾಡಿದ ಪಾಪವು
ಭಾವಜನಯ್ಯನ ದಿನದಲುಂಡವರಿಗೆ
ಕೀವಿನೊಳಗೆ ಹಾಕಿ ಕುದಿಸುವ ಯಮನು ॥ ೧ ॥

ಒಂದೊಂದು ಅಗಳಿಗೆ ಕೋಟಿ ಕೋಟಿ ಕ್ರಿಮಿ
ಅಂದಿನ ಅನ್ನವು ನಾಯ್‌ಮಾಂಸವು
ಮಂದರಧರನ ದಿನದಲುಂಡವರನು
ಹಂದಿಯ ಸುಡುವಂತೆ ಸುಡಿಸುವ ಯಮನು ॥ ೨ ॥

ಅನ್ನ ಉದಕ ತಾಂಬೂಲ ದರ್ಪಣಗಳು
ಚಿನ್ನ ವಸ್ತ್ರಗಳೆಲ್ಲ ವರ್ಜಿತವು
ತನ್ನ ಸತಿಯ ಸಂಗ ಮಾಡುವ ಮನುಜನ
ಬೆನ್ನಲಿ ಕರುಳ ತೆಗೆಸುವ ಯಮನು ॥ ೩ ॥

ಜಾವದ ಜಾಗರ ಕ್ರತು ನಾಲ್ಕು ಸಾವಿರ
ಜಾವನಾಲ್ಕರ ಫಲಕೆ ಮಿತಿಯಿಲ್ಲವು
ದೇವದೇವನ ದಿನದಿ ನಿದ್ರೆಯಗೈದರೆ ಹುರಿ–
ಗಾವಲಿನೊಳು ಹಾಕಿ ಹುರಿಸುವ ಯಮನು ॥ ೪ ॥

ಇಂತು ಏಕಾದಶೀ ಉಪವಾಸ ಜಾಗರ
ಸಂತತ ಕ್ಷೀರಾಬ್ಧಿಶಯನನ ಪೂಜೆ
ಸಂತೋಷದಿಂದಲಿ ಮಾಡಿ ಜನರಿಗ–
ನಂತಫಲವನೀನ ಪುರಂದರವಿಠಲ ॥ ೫ ॥

ಏಕಾದಶಿಯನ್ನು ಕುರಿತು ಪ್ರಶ್ನೋತ್ತರಗಳು

೧. ದಶಮೀ ದಿನದಂದು ೧೦ನ್ನು ಬಿಡಬೇಕೆಂದು ಹಿರಿಯರು ಹೇಳುತ್ತಾರೆ. ಬಿಡಬೇಕಾದ ಆ ೧೦ ಯಾವುವು?

ಉ. **(ಸ್ಮೃ.ಕಾ.ಪ್ರ.ಪು. ೪೩೮)**
"ಕಾಂಸ್ಯಾಂ ಮಾಷಂ ಮಸೂರಂ ಚ ಅನೃತಂ ಕಾರುಭಾಷಣಮ್ ।
ಶಾಕಂ ಮಧು ಪರಾನ್ನಂ ಚ ಪುನರ್ಭೋಜನಸಂಗಮೌ ॥

ಎಂಬೀ ಮುಂತಾದ ಪ್ರಮಾಣಗಳಲ್ಲಿ ಹೇಳಿದಂತೆ ಕಂಚಿನ ಪಾತ್ರೆ (ಕಂಚಿನ ಪಾತ್ರೆಯಲ್ಲಿ ಭೋಜನ ಮಾಡುವುದು), ಉದ್ದು – ಮಸೂರಧಾನ್ಯ ಅಂದರೆ ಕಾಡುಕಡಲೆ – ಸುಳ್ಳು ಹೇಳುವುದು–ಶಿಲ್ಪಿಗಳ ಜೊತೆಯಲ್ಲಿ ಮಾತನಾಡುವುದು–ಶಾಕ–(ಸೊಪ್ಪು)–ಜೇನುತುಪ್ಪ–ಪರಾನ್ನ–ಪುನಃ ಭೋಜನ ಅಂದರೆ ಎರಡನೇ ಬಾರಿ ಊಟ ಮಾಡುವುದು ಹಾಗೂ ಸ್ತ್ರೀ ಸಂಗಮ ಈ ಹತ್ತನ್ನೂ ವೈಷ್ಣವರು ದಶಮೀ ದಿನದಂದು ಬಿಡಬೇಕು.

೨. ದಶಮೀ ಮತ್ತು ದ್ವಾದಶೀ ದಿನದಂದು ಉಪ್ಪನ್ನು ಉಪಯೋಗಿಸಬಾರದೆಂದು ಹಿರಿಯರು ಹೇಳುತ್ತಾರೆ. ಇದಕ್ಕೆ ಪ್ರಮಾಣವೇನು? ದಶಮೀ ಮತ್ತು ದ್ವಾದಶೀ ದಿನಗಳಲ್ಲಿ ಉಪ್ಪನ್ನು ಬಿಡುವುದರಿಂದೇನು ಫಲ?

ಉ. **"ಲವಣಸ್ಯ ಪರಿತ್ಯಾಗಂ ದಶಮೀದ್ವಾದಶೀದಿನೇ ।**
ಯದಿ ಕುರ್ವೀತ ಚೈಕಾನ್ನಂ ವ್ರತಸ್ಯ ದ್ವಿಗುಣಂ ಫಲಮ್ ॥"
ಎಂಬೀ ಮುಂತಾದ ಪ್ರಮಾಣಗಳಲ್ಲಿ ಹೇಳಿದಂತೆ ದಶಮೀ ದಿನಗಳಲ್ಲಿ ಉಪ್ಪನ್ನು ಸ್ವೀಕರಿಸದೇ ಊಟ ಮಾಡಿದರೆ ಮತ್ತು ಏಕಾನ್ನವನ್ನು ಭುಜಿಸಿದರೆ ಏಕಾದಶೀ ವ್ರತಕ್ಕೆ ಇಮ್ಮಡಿಯಾದ ಫಲವು ಬರುತ್ತದೆ. (ಏಕಾನ್ನವೆಂದರೆ ಒಂದು ಬಾರಿ ಊಟಕ್ಕೆ ಬೇಕಾದ್ದನ್ನೆಲ್ಲಾ ಬಡಿಸಿಕೊಳ್ಳುವುದು. ಏರಡನೇ ಬಾರಿ ಏನನ್ನೂ ಹಾಕಿಕೊಳ್ಳದಿರುವುದು).

೩. ದೇವತೆಗಳಿಗೂ ಏಕಾದಶೀ ಉಪವಾಸದಲ್ಲಿ ಅಧಿಕಾರವಿದೆಯೇ?

ಉ. **ದೇವಾದೀನಾಮಪ್ಯಧಿಕಾರಃ ಪಾದ್ಮೇ ದರ್ಶಿತಃ**
(ಅ) **"ಮಥ್ಯಮಾನೇ ತು ದುಗ್ಧಾಬ್ಧೌ ದೈವತೈಶ್ಚ ಮಹಾಬಲೈಃ ।**
ಉತ್ಪಾದನಾರ್ಥಂ ಲಕ್ಷ್ಮ್ಯಾಶ್ಚ ತತ ಏತೇ ಮಹರ್ಷಯಃ ॥
ಉಪೋಷ್ಯ ನಿಯಮಂ ಕೃತ್ವಾಜಪ್ತಂ ಶ್ರೀಸೂಕ್ತಮುತ್ತಮಂ ।
ಸಹಸ್ರನಾಮಪಠನಂ ಚಕ್ರುರ್ದೇವಾಃ ದ್ವಿಜೋತ್ತಮಾಃ ॥
ತದಾ ಪ್ರಭೃತಿ ವೈಸರ್ವೇದೇವಾ ಬ್ರಹ್ಮಪುರೋಗಮಾಃ ।
ಋಷಯೋ ಮಾನುಷಾಶ್ಚೈವ ಯೋಗಿನೋ ಮುನಿಸತ್ತಮಾಃ ।
ವಿಷ್ಣೋರಾಜ್ಞಾಂ ಪುರುಸ್ಕೃತ್ಯ ಭಕ್ತ್ಯಾಪರಮಯಾಽನ್ವಿತಾಃ ।
ಏಕಾದಶ್ಯಾಂ ತು ಶುದ್ಧಾಯಾಂ ಉಪೋಷ್ಯೈವ ಜನಾರ್ದನಂ ॥
ದ್ವಾದಶ್ಯಾಮರ್ಚಯಾಂಚಕ್ರುಃ ವಿಧಿನಾ ವರವರ್ಣಿನಿ" ಇತಿ

(ಆ) **ವಿಷ್ಣುತೀರ್ಥೀಯೇಽಪಿ:–**

"ರುದ್ರಸ್ಯಸರ್ವದೇವಾನಾಮಾತ್ಮನಃ ಸರ್ವದೇಹಿನಾಂ ।
ಏಕಾದಶ್ಯುಪವಾಸಸ್ತು ಕರ್ತವ್ಯೋನಾತ್ರ ಸಂಶಯಃ" ಇತಿ

ಎಂಬೀ ಮುಂತಾದ ಪ್ರಮಾಣಗಳಲ್ಲಿ ಹೇಳಿದ ಅಭಿಪ್ರಾಯವು ಹೀಗಿದೆ– ಹಿಂದೆ ಒಮ್ಮೆ ದೇವತೆಗಳು ದೈತ್ಯರೊಡನೆ ಕೂಡಿ ಲಕ್ಷ್ಮೀದೇವಿಯನ್ನು ಆವಿರ್ಭಾವಗೊಳಿಸುವುದಕ್ಕೂ (ಮತ್ತು ಅಮೃತವನ್ನು ಪಡೆಯುವುದಕ್ಕಾಗಿಯೂ) ಕ್ಷೀರಸಮುದ್ರವನ್ನು ಮಥನಮಾಡಲು ಆರಂಭಿಸಿದರು. ಆಗ ಅವರೆಲ್ಲರೂ ಏಕಾದಶೀ ದಿನದಂದು ಉಪವಾಸವನ್ನು ಮಾಡಿ, ಅನೇಕ ನಿಯಮಗಳನ್ನು ಆಚರಿಸಿ, ಶ್ರೀಸೂಕ್ತವನ್ನೂ ಮತ್ತು ವಿಷ್ಣುಸಹಸ್ರನಾಮಸ್ತೋತ್ರವನ್ನೂ ಪಠಿಸಿದರು, ಕ್ಷೀರಸಮುದ್ರ ಮಥನದ ಆ ದಿವನ ಮೊದಲ್ಗೊಂಡು ಬ್ರಹ್ಮನೇ ಮೊದಲಾದ ಎಲ್ಲಾದೇವತೆಗಳು, ಋಷಿಗಳೂ, ಮಾನವರು, ಯೋಗಿಗಳೂ ಮತ್ತು ಇತರ ಮುನಿಶ್ರೇಷ್ಠರು ಏಕಾದಶೀ ದಿನದಂದು ಉಪವಾಸವನ್ನು ಮಾಡಿ, ದ್ವಾದಶೀದಿನದಂದು ಪರಮಾತ್ಮನನ್ನು ಪೂಜಿಸಲು ಆರಂಭಿಸಿದರು ಎಂಬುದಾಗಿ ಈಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳಿದನು ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ. ಇದರಿಂದ ದೇವತೆಗಳು ಕೂಡ ಏಕಾದಶಿ ಉಪವಾಸವನ್ನು ಮಾಡುತ್ತಾರೆ ಎಂದು ತಿಳಿದುಬರುತ್ತದೆ.

೪. ಸ್ತ್ರೀಯರು ಮುಟ್ಟಾದಾಗಲೂ ಏಕಾದಶೀ ಉಪವಾಸವನ್ನು ಮಾಡಬುಹುದೇ?

ಉ. ರಜೋದರ್ಶನೇಽಪಿ ಸ್ತ್ರೀಣಾಮುಪವಾಸ ಏವ–॥

"ಏಕಾದಶ್ಯಾಂ ನ ಭುಂಜೀತ ನಾರೀ ದೃಷ್ಟ್ವಾರಜಸ್ವಪಿ"

ಇತಿ ವಚನಾತ್ ಎಂಬೀ ಮುಂತಾದ ಪ್ರಮಾಣಗಳಲ್ಲಿ ಹೇಳಿದಂತೆ ಸ್ತ್ರೀಯರು ಮುಟ್ಟಾದಾಗಲೂ ಏಕಾದಶಿ ದಿನದಂದು ಭೋಜನವನ್ನು ಮಾಡಬಾರದು. ಉಪವಾಸವನ್ನೇ ಮಾಡಬೇಕು.

೫. ಅಶಕ್ತರು ಯಾರು?

ಉ. ಯದ್ಯಶಕ್ತೋಽತಿವೇಲಂ ಸ್ಯಾದುಪವಾಸಕೃತೌ ನರಃ ।
ಗರ್ಭಿಣೀ ಸೂತಿಕಾ ಬಾಲಸ್ತೀರ್ಥಯಾತ್ರಾಕೃತಶ್ರಮಃ ॥
ಸಪಾದಮಾತ್ರಂ ಕುರ್ವೀತ ತೃಪ್ತ್ಯರ್ಥಂ ಫಲಭಕ್ಷಣಂ ।
ಸರ್ವಥಾ ನಾನ್ನಮಶ್ನೀಯಾತ್ ಮ್ರಿಯಮಾಣೋಽಪಿ ವೈಷ್ಣವಃ ॥

ಎಂಬ ಪ್ರಮಾಣದಲ್ಲಿ ಹೇಳಿದಂತೆ, ಗರ್ಭಿಣಿಯರು, ಬಾಣಂತಿಯರು, ಚಿಕ್ಕ ಮಕ್ಕಳು, ತೀರ್ಥಯಾತ್ರೆ ಮಾಡಿ ಕೃಶರಾದವರು ಮುಂತಾದವರನ್ನು ಅಶಕ್ತರ ಪಟ್ಟಿಯಲ್ಲಿ ಸೇರುತ್ತಾರೆ. ಅವರು ತಾವು ಪ್ರತಿನಿತ್ಯ ತೆಗೆದುಕೊಳ್ಳುವ ಆಹಾರದ ಕಾಲುಭಾಗದಷ್ಟು ಮಾತ್ರ ಈ ಮೇಲೆ ಕಾಣಿಸಿದ ಫಲಸಂಜ್ಞಕವಾದ ಪದಾರ್ಥಗಳನ್ನು ಹಣ್ಣಿನ ರೂಪದಲ್ಲಿ ಏಕಾದಶಿ ದಿನದಂದು ತೆಗೆದುಕೊಳ್ಳಬೇಕು. ಆದರೆ ಪ್ರಾಣ ಹೋಗುತ್ತಿದ್ದರೂ ಕೂಡ ಏಕಾದಶಿ ದಿನದಂದು ಅನ್ನವನ್ನು ಸರ್ವಥಾ ತಿನ್ನಕೂಡದು.

॥ ಶ್ರೀಕೃಷ್ಣಾರ್ಪಣಮಸ್ತು ॥